ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಮೈಸೂರು, ಬುಧವಾರ, ೧೭, ಜೂನ್, ೨೦೨೬ (ಜ್ಯೇಷ್ಠ, ೨೭, ಶಕವರ್ಷ, ೧೯೪೮)	ಸಂಚಿಕೆ ೩೫
Volume 161	MYSURU, WEDNESDAY, 17, JUNE, 2026 (JYAISTHA , 27, SHAKAVARSHA, 1948)	Issue 35

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಮಂಡ್ಯ ಜಿಲ್ಲೆ, ಮಂಡ್ಯ.

ದೂರವಾಣಿ ಸಂಖ್ಯೆ:08232–226074 ಇ ಮೇಲ್:**deo.mandya1@gmail.com**

ಸಂಖ್ಯೆ:ಇ.ಎಲ್.ಎನ್(2)ಸಿ.ಆರ್.33/2025-26 **ದಿನಾಂಕ: 16.06.2026**

ಕರಡು ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 5ನೇ ಪ್ರಕರಣದ ಉಪ ಪ್ರಕರಣ (5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ **ಡಾ. ಕುಮಾರ ಭಾ.ಆ.ಸೇ.,** ಆದ ನಾನು ಸರ್ಕಾರದ ತಿದ್ದುಪಡಿ ಸುತ್ತೋಲೆ ಸಂಖ್ಯೆ:ಆರ್‌ಡಿಪಿಆರ್ 486 ಜಿಪಿಎ 2025 ದಿನಾಂಕ:10.06.2026 ರಲ್ಲಿ ಹೊರಡಿಸಿರುವ ತಿದ್ದುಪಡಿ ಸುತ್ತೋಲೆ/ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ, ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳ ಪೈಕಿ ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಪುನರ್ ರಚನೆಯಾದ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆಯನ್ನು ಈ ಕೆಳಕಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ, ಕೋಷ್ಟಕ-1ರ ಅಂಕಣ (1) ರಲ್ಲಿ ಕ್ಷೇತ್ರದ ಸಂಖ್ಯೆ, ಅಂಕಣ (2) ರಲ್ಲಿ ಪ್ರತಿ ಕ್ಷೇತ್ರದ ಹೆಸರನ್ನು, ಅಂಕಣ (3) ರಲ್ಲಿ ಪ್ರತಿ ಕ್ಷೇತ್ರದ ವ್ಯಾಪ್ತಿಯನ್ನು ಹಾಗೂ ಅಂಕಣ (4) ರಲ್ಲಿ ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಿ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಪುನರ್ ರಚನೆಯಾದ ಗ್ರಾಮ ಪಂಚಾಯಿತಿ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 07 (ಏಳು) ದಿನಗಳ ಒಳಗಾಗಿ ಅಂದರೆ ದಿನಾಂಕ:23.06.2026 ಸಂಜೆ 5:30 ಗಂಟೆಯ ಒಳಗೆ ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಖುದ್ದಾಗಿ / ಅಂಚೆಯ ಮೂಲಕ **ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ-571401**. ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಈ ಕಛೇರಿಯಿಂದ ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ

ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಜಿಲ್ಲಾಡಳಿತ/ಜಿಲ್ಲಾಧಿಕಾರಿ ಕಛೇರಿ ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ. ಆನ್‌ಲೈನ್ ಮೂಲಕವು (https://mandya.nic.in) ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಮದ್ದೂರು ತಾಲ್ಲೂಕಿನ 19-ನಿಡಘಟ್ಟ ಮತ್ತು 22- ನಗರಕೆರೆ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಕ್ಷೇತ್ರವಾರು ಸದಸ್ಯ ಸ್ಥಾನಗಳ ಹಂಚಿಕೆ ವಿವರಗಳು.

ತಾಲ್ಲೂಕಿನ ಹೆಸರು	**ಮದ್ದೂರು**
ಗ್ರಾಮ ಪಂಚಾಯತಿ ಹೆಸರು	**19-ನಿಡಘಟ್ಟ**
ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸಂಖ್ಯೆ	**9**

ಕೋಷ್ಟಕ-I

ಕ್ಷೇತ್ರದ ಸಂಖ್ಯೆ	**ಪ್ರಾದೇಶಿಕ ಚುನಾವಣಾ ಕ್ಷೇತ್ರದ ಹೆಸರು**	**ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ**	**ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆ**
1	2	3	4
1	ನಿಡಘಟ್ಟ -1	ನಿಡಘಟ್ಟ ಮನೆ ನಂ.01 ರಿಂದ 259/1 ರವರೆಗೆ, ಡಣಾಯಕನದೊಡ್ಡಿ (ಬೇ)	**3**
2	ನಿಡಘಟ್ಟ -2	ನಿಡಘಟ್ಟ ಮನೆ ನಂ.268 ರಿಂದ 502 ರವರೆಗೆ.	**3**
3	ಹೊಟ್ಟೆಗೌಡನದೊಡ್ಡಿ	ಹೊಟ್ಟೆಗೌಡನದೊಡ್ಡಿ (ದಾ) ಗ್ರಾಮ ಪೂರ್ತಾ	**1**
4	ಮಾದಾಪುರದದೊಡ್ಡಿ	ಮಾದಾಪುರದದೊಡ್ಡಿ (ದಾ) ಗ್ರಾಮ ಪೂರ್ತಾ	**2**
5	ಕೊಂಗಬೋರನದೊಡ್ಡಿ	ಕೊಂಗಬೋರನದೊಡ್ಡಿ (ದಾ) ಗ್ರಾಮ ಪೂರ್ತಾ	**2**
6	ತಿಪ್ಪೂರು	ತಿಪ್ಪೂರು ಗ್ರಾಮ ಪೂರ್ತಾ	**2**
7	ಮಾದನಾಯಕನಹಳ್ಳಿ	ಮಾದನಾಯಕನಹಳ್ಳಿ ಗ್ರಾಮ ಪೂರ್ತಾ	**2**
8	ತೈಲೂರು-1	ತೈಲೂರು ಮನೆ ನಂ 01 ರಿಂದ 217/2 ರವರೆಗೆ	**3**
9	ತೈಲೂರು-2	ತೈಲೂರು ಮನೆ ನಂ 218 ರಿಂದ 431/4 ರವರೆಗೆ	**2**
ಒಟ್ಟು			**20**

ತಾಲ್ಲೂಕಿನ ಹೆಸರು	**ಮದ್ದೂರು**
ಗ್ರಾಮ ಪಂಚಾಯತಿ ಹೆಸರು	**22-ನಗರಕೆರೆ**
ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸಂಖ್ಯೆ	**11**

ಕೋಷ್ಟಕ-I

ಕ್ಷೇತ್ರದ ಸಂಖ್ಯೆ	ಪ್ರಾದೇಶಿಕ ಚುನಾವಣಾ ಕ್ಷೇತ್ರದ ಹೆಸರು	ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ	ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆ
1	2	3	4
1	ನಗರಕೆರೆ-1	ನಗರಕೆರೆ ಮನೆ ನಂ. ೦1ರಿಂದ 228 ರವರೆಗೆ	**3**
2	ನಗರಕೆರೆ-2	ನಗರಕೆರೆ ಮನೆ ನಂ.229 ರಿಂದ 453/2ರವರೆಗೆ	**3**
3	ಸೋಂಪುರ	ಸೋಂಪುರ ಗ್ರಾಮ ಪೂರ್ತಾ	**2**
4	ಉಪ್ಪಾರದೊಡ್ಡಿ	ಉಪ್ಪಾರದೊಡ್ಡಿ (ದಾ) ಗ್ರಾಮ ಪೂರ್ತಾ	**3**
5	ವೈದ್ಯನಾಥಪುರ	ವೈದ್ಯನಾಥಪುರ ಗ್ರಾಮ ಪೂರ್ತಾ	**2**
6	ಮಾಲಗಾರನಹಳ್ಳಿ-1	ಮಾಲಗಾರನಹಳ್ಳಿ ಮನೆ ನಂ.118 ರಿಂದ 415 ರವರೆಗೆ , ಲಿಂಗಮ್ಮನ ಮನೆಯಿಂದ ಚಿಕ್ಕಮ್ಮನ ಮೂಗೇಗೌಡರ ಮನೆವರೆಗೆ	**2**
7	ಮಾಲಗಾರನಹಳ್ಳಿ-2	ಮಾಲಗಾರನಹಳ್ಳಿ ಮನೆ ನಂ.೦1 ರಿಂದ 390, ಪುಟ್ಟಸ್ವಾಮಿ ಬಿನ್ ಮೊಡ್ಡೇಕೆಂಚೇಗೌಡರ ಮನೆಯಿಂದ ಟಿ.ಆರ್.ಶುಭಾ ರವರ ಮನೆಯವರೆಗೆ	**3**
8	ಹುಲಿಗೆರೆಪುರ-1	ಹುಲಿಗೆರೆಪುರ ಮನೆ ನಂ.೦1 ರಿಂದ 398ರವರೆಗೆ	**2**
9	ಹುಲಿಗೆರೆಪುರ-2	ಹುಲಿಗೆರೆಪುರ ಮನೆ ನಂ..491 ರಿಂದ 630 ರವರೆಗೆ	**2**
10	ಚನ್ನಸಂದ್ರ	ಚನ್ನಸಂದ್ರ ಗ್ರಾಮ ಪೂರ್ತಾ	**4**
11	ಉಪ್ಪಿನಕೆರೆ	ಉಪ್ಪಿನಕೆರೆ ಗ್ರಾಮ ಪೂರ್ತಾ	**3**
ಒಟ್ಟು			**29**

ವಿಶೇಷ ಸೂಚನೆ:-

ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳ ಪೈಕಿ ಮದ್ದೂರು ತಾಲ್ಲೂಕಿನ 19-ನಿಡಘಟ್ಟ ಮತ್ತು 22-ನಗರಕೆರೆ ಗ್ರಾಮ ಪಂಚಾಯಿತಿಗಳ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯ ಕುರಿತಂತೆ ದಿನಾಂಕ:23.06.2026 ರೊಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:25.06.2026 ರಂದು ಸಮಯ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ರ ವರೆಗೆ ಈ ಕಛೇರಿಯ ನ್ಯಾಯಾಲಯ ಸಭಾಂಗಣ ಜಿಲ್ಲಾಧಿಕಾರಿಗಳ ಕಛೇರಿ ಮಂಡ್ಯ ಜಿಲ್ಲೆ ಮಂಡ್ಯ ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತ್ತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸಿದ್ದಲ್ಲಿ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು,

ದಿನಾಂಕ: 16.06.2026

ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ, ಮಂಡ್ಯ

PR-110

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯತ್ ಕಾರ್ಯಾಲಯ–ಕಿನ್ನಿಗೋಳಿ

(ಮುಲ್ಕಿ ತಾಲ್ಲೂಕು, ದಕ್ಷಿಣ ಕನ್ನಡಜಿಲ್ಲೆ–574150)

Email: co.kinnigoli@gmail.com **Telephone no:0824-2295122**

ಅಧಿಸೂಚನೆ ಸಂಖ್ಯೆ: ಕಿ.ಪ.ಪಂ./ಉಪನಿಯಮ/ಸಿಆರ್/01/2025–26 ದಿನಾಂಕ 16–03–2026

ಕರಡು ಅಧಿಸೂಚನೆ

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಉದ್ದೇಶಗಳಿಗಾಗಿ ನೀಡುವ ಪರವಾನಿಗೆಗಳು ಅನುಮತಿ ನೀಡುವಿಕೆ, ಶುಲ್ಕ ಸಂಗ್ರಹ, ದಂಡನೆಗಳು ಮತ್ತು ನಿಯಂತ್ರಣದ ಸಲುವಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಈ ಕೆಳಗೆ ಕಾಣಿಸಲಾದ ಏಳು ಉಪವಿಧಿಗಳನ್ನು ರಚಿಸಿ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ವಿಶೇಷ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ 259/25–26 ದಿನಾಂಕ 16–03–2026ರಲ್ಲಿ ಕೈಗೊಂಡ ತೀರ್ಮಾನದಂತೆ ಕರಡು ಉಪವಿಧಿಯ ಅಧಿಸೂಚನೆಯ ಪ್ರಕಟಣೆಯನ್ನು ಹೊರಡಿಸಲಾಗಿದೆ. ಉಪವಿಧಿಯು ಈ ಕೆಳಕಂಡಂತಿದೆ.

1) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 139ನೇ ಪ್ರಕರಣದಡಿ ಅಧ್ಯಾಯ 13ರ ಉಪನಿಯಮ 323, 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಕುಡಿಯುವ ನೀರು ಸರಬರಾಜು ಸಂಪರ್ಕ, ಬಳಕೆ, ಶುಲ್ಕ ಸಂಗ್ರಹಕ್ಕೆ ಸಂಬಂಧಿಸಿದಂತೆ ಈ ಮುಂದೆ ಓದಲಾದ ಉಪವಿಧಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕ ಕುಡಿಯುವ ನೀರು ಸರಬರಾಜು ಸಂಪರ್ಕ ಮತ್ತು ನಿಯಂತ್ರಣ ಉಪವಿಧಿ–2026".
2) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 94 ಮತ್ತು 138ನೇ ಪ್ರಕರಣದಡಿ ಕಲಂ 133ರ ಪ್ರಕಾರ ಅಧ್ಯಾಯ 13ರ ಉಪನಿಯಮ 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶನ ಮತ್ತು ಇತರ ಸಾರ್ವಜನಿಕ ಸಭೆ ಸಮಾರಂಭಗಳಿಗೆ ಅನುಮತಿ ನೀಡುವ ಬಗ್ಗೆ ಈ ಮುಂದೆ ಓದಲಾದ ಉಪವಿಧಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶನ ಮತ್ತು ತೆರೆದ ಮೈದಾನ ಪ್ರದೇಶದ ಸಾರ್ವಜನಿಕ ಸಭೆ ಸಮಾರಂಭಗಳು ಇತ್ಯಾದಿಗಳಿಗೆ ಅನುಮತಿ ನೀಡುವ ಮತ್ತು ನಿಯಂತ್ರಣ ಉಪವಿಧಿ–2026".
3) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 99 ಪ್ರಕರಣದಡಿ ಅಧ್ಯಾಯ 13ರ ಉಪನಿಯಮ 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಪಟ್ಟಣ ಪಂಚಾಯತ್ ವತಿಯಿಂದ ಕಂದಾಯ ಮತ್ತು ಆರೋಗ್ಯ ಶಾಖೆಗೆ ನೀಡುವಂತಹ ವಿವಿಧ ಸೇವೆಗಳಿಗೆ ಶುಲ್ಕ ನಿಗಧಿಪಡಿಸಿದ ಅದರಂತೆ ಸಂಗ್ರಹಿಸುವ ಬಗ್ಗೆ ಈ ಮುಂದೆ ಓದಲಾದ ಉಪವಿಧಿ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಿಂದ ಪಡೆಯುವ ವಿವಿಧ ಸೇವೆಗಳಿಗೆ (ಕಂದಾಯ ಮತ್ತು ಆರೋಗ್ಯ) ಶುಲ್ಕ ನಿಗಧಿ ಮತ್ತು ಸಂಗ್ರಹಣೆ ಉಪವಿಧಿ–2026".
4) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 256ರ ಪ್ರಕರಣದಡಿ ಅಧ್ಯಾಯ 13ರ ಉಪನಿಯಮ 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಉದ್ದಿಮೆ ವ್ಯಾಪಾರ, ವಹಿವಾಟು ಮತ್ತು ಇತರ ಚಟುವಟಿಕೆಗಳನ್ನು ನಡೆಸಲು ಉದ್ಯಮ ಪರವಾನಿಗೆ ನೀಡುವ ಬಗ್ಗೆ ಈ ಮುಂದೆ ಓದಾಲಾದ ಉಪವಿಧಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಉದ್ದಿಮೆಗಳಿಗೆ ಅನುಮತಿ ನೀಡುವಿಕೆ ಹಾಗೂ ನಿಯಂತ್ರಣ ಉಪವಿಧಿ–2026".

5) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಘನತ್ಯಾಜ್ಯ ಸಂಗ್ರಹಣೆ, ತೆಗೆಯುವಿಕೆ ಮತ್ತು ವಿಲೇವಾರಿ ಮಾಡುವ ಎಲ್ಲಾ ವಿಚಾರ ಮತ್ತು ವಸ್ತುಗಳಿಗೆ ಸಂಬಂಧಿಸಿದಂತೆ ರಚಿಸಿರುವ ಉಪಕಾನೂನು ಸಮಗ್ರ ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕಾನೂನು 2012ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು (ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ತಡೆಗಟ್ಟುವಿಕೆ ಹಾಗೂ ತ್ಯಾಜ್ಯ ಬೇರ್ಪಡಿಕೆ, ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಕ್ರಮಬದ್ಧಗೊಳಿಸುವ) ನಿರ್ವಹಣೆಗೆ ಸಂಬಂಧಿಸಿದಂತೆ ಈ ಮುಂದೆ ಓದಲಾದ ಉಪವಿಧಿ **"ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು (ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ತಡೆಗಟ್ಟುವಿಕೆ ಹಾಗೂ ತ್ಯಾಜ್ಯ ಬೇರ್ಪಡಿಕೆ, ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಕ್ರಮಬದ್ಧಗೊಳಿಸುವ) ನಿರ್ವಹಣೆ ಉಪವಿಧಿ–2026".**

6) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 138ನೇ ಪ್ರಕರಣದಡಿ ಕಲಂ 187ಪ್ರಕಾರ ಅಧ್ಯಾಯ 13ರ ಉಪನಿಯಮ 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ರೀತಿಯ ಕಟ್ಟಡಗಳನ್ನು ನಿರ್ಮಿಸಲು ನಕ್ಷೆ ವಿನ್ಯಾಸ ಮಾಡುವ ಬಗ್ಗೆ ತಾಂತ್ರಿಕ ಪರಿಣತಿ ಹೊಂದಿದವರಿಗೆ ಕಟ್ಟಡ ವಿನ್ಯಾಸಕಾರರ ಪರವಾನಿಗೆ ನೀಡುವಿಕೆ ಸಂಬಂಧಪಟ್ಟಂತೆ ಈ ಮುಂದೆ ಓದಲಾದ ಉಪವಿಧಿ **"ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಕಟ್ಟಡ ವಿನ್ಯಾಸಕಾರರ (ವಿವಿಧ ವರ್ಗ) ಪರವಾನಿಗೆ ನೀಡುವಿಕೆ ಮತ್ತು ನಿಯಂತ್ರಣ ಉಪವಿಧಿ–2026".**

7) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ 170 ಮತ್ತು 187ರ ಪ್ರಕರಣದಡಿ ಅಧ್ಯಾಯ 13ರ ಉಪನಿಯಮ 324, 325 ಮತ್ತು 326ರಲ್ಲಿ ಪ್ರದತ್ತವಾದ ಅಧಿಕಾರದಲ್ಲಿ **"ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ರೀತಿಯ ಕಟ್ಟಡ ನಿರ್ಮಾಣ, ನಿವೇಶನ ವಿನ್ಯಾಸ, ಅನುಮೋದನೆ, ಬಡಾವಣೆಗಳಿಗೆ ಅನುಮೋದನೆ ಮತ್ತು ಇತರ ರಚನೆಗಳಿಗೆ ಅನುಮತಿ ನೀಡುವ ಬಗ್ಗೆ ಈ ಮುಂದೆ ಓದಾಲಾದ ಉಪವಿಧಿ "ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ವಿವಿಧ ರೀತಿಯ ಕಟ್ಟಡ ನಿರ್ಮಾಣ, ನಿವೇಶನ ಬಡಾವಣೆ ವಿನ್ಯಾಸ ಮತ್ತು ಇತರ ರಚನೆಗಳಿಗೆ ಅನುಮತಿ ನೀಡುವಿಕೆ ಹಾಗೂ ನಿಯಂತ್ರಣ ಉಪವಿಧಿ–2026".**

ಈ ಮೇಲ್ಕಂಡಂತೆ ಉಪನಿಯಮಗಳನ್ನು ಜಾರಿಗೆ ತರಲು ಉದ್ದೇಶಿಸಿದ್ದು ಸದ್ರಿ ಉಪನಿಯಮದಂತೆ ರಚಿಸಲಾದ ಉಪವಿಧಿಗಳನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಾಗಿದೆ. ಆದ್ದರಿಂದ ಸದ್ರಿ ಉಪವಿಧಿಗೆ ಒಳಪಡುವ ಅಥವಾ ಇದರಿಂದ ಬಾಧಿತರಾಗುವ ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಯು ತಮ್ಮ ಆಕ್ಷೇಪಣೆಯನ್ನು ಈ ಉಪವಿಧಿಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳ ಒಳಗೆ ಲಿಖಿತವಾಗಿ ಮುಖ್ಯಾಧಿಕಾರಿ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಇವರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಪ್ರಕಟಣೆಯನ್ನು ಹೊರಡಿಸಿದೆ. ಉಪವಿಧಿಯನ್ನು ಈ ಕೆಳಕಂಡಂತೆ ಅನುಕ್ರಮವಾಗಿ ರಚಿಸಲಾಗಿದೆ.

---

1) "ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕ ಕುಡಿಯುವ ನೀರು ಸರಬರಾಜು ಸಂಪರ್ಕ ಮತ್ತು ನಿಯಂತ್ರಣ ಉಪವಿಧಿ–2026"

1. ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ನಳ್ಳಿ ನೀರಿನ ಜೋಡಣೆಯನ್ನು ಪ್ಲಂಬರ್‌ಗಳ ಮುಖಾಂತರ ಮಾಡಿಸಲಾಗುತ್ತಿದ್ದು, ಪ್ಲಂಬರ್‌ಗಳು ಪಟ್ಟಣ ಪಂಚಾಯತ್‌ಗೆ ನಷ್ಟ ಮಾಡುವುದನ್ನು ಹಾಗೂ ಸಾರ್ವಜನಿಕರಿಂದ ಹಣ ಪಡೆದು ದುರುಪಯೋಗ ಮಾಡುವುದನ್ನು ತಡೆಗಟ್ಟಲು ಪ್ರತಿ ಪ್ಲಂಬರ್‌ರವರಿಂದ ಭದ್ರತಾ ಠೇವಣಿ ಪಡೆದುಕೊಳ್ಳಬಹುದು.

2. ಪರವಾನಿಗೆ ನವೀಕರಣ ಶುಲ್ಕ

	ಪ್ಲಂಬಿಂಗ್ ಲೈಸನ್ಸು		ಹಾಲಿದರ (ರೂ.)	ಪರಿಷ್ಕರಣೆ ದರ (ರೂ.)
1.	ಹೊಸ ಪ್ಲಂಬಿಂಗ್ ಲೈಸನ್ಸು		1000.00	1500.00
2.	ಪ್ಲಂಬಿಂಗ್ ಲೈಸನ್ಸು ನವೀಕರಣ		1000.00	2000.00
3.	ಪ್ಲಂಬರ್ ಗಳು ಪುರಸಭೆಗೆ ನೋಂದಣಿಯಾಗುವಾಗ ಹಾಗೂ ಈಗಿರುವ ಪ್ಲಂಬರ್‌ಗಳು ಭದ್ರತೆ ಠೇವಣಿ ಪಟ್ಟಣ ಪಂಚಾಯತ್‌ಗೆ ಪಾವತಿಸುವುದು. (ಕಾರಣ ಪ್ಲಂಬರ್‌ಗಳು ಅನಧಿಕೃತ ಜೋಡಣೆ ನೀಡುವುದು ಪುರಸಭೆಯ ಕಾನೂನಿನಂತೆ ನಡೆಯದಿದ್ದಲ್ಲಿ ಈ ಮೇಲಿನ ಮೊತ್ತವನ್ನು ಪುರಸಭೆಗೆ ಹೊಂದಾಣಿಕೆ ಮಾಡುವುದು)		15000.00	17000
4.	ಅವಧಿ ಮೀರಿದಲ್ಲಿ/ ದಂಡನೆ (ತಿಂಗಳಿಗೆ – 1 ವರ್ಷದವರೆಗೆ) (1 ವರ್ಷ ಮೀರಿದರೆ ರದ್ದು)		–	100.00
5.	ನೀರಿನ ಜೋಡಣಾ ಶುಲ್ಕ – ವಸತಿ		2000.00	2500.00
6.	ನೀರಿನ ಜೋಡಣಾ ಶುಲ್ಕ – ವಾಣಿಜ್ಯ		4000.00	5000.00
7.	ನೀರಿನ ಜೋಡಣೆ ಡಿಸ್ ಕನೆಕ್ಟ್ ಮಾಡಿರುವುದನ್ನು ಮರು ಜೋಡಣೆ ಮಾಡುವರೇ ಮರುಜೋಡಣೆ ಶುಲ್ಕ		500.00	1000.00
8.	ನೀರಿನ ಕೊಳವೆ ಬಗ್ಗೆ ರಸ್ತೆ ಅಗೆತ ಶುಲ್ಕ		–	ಲೋಕೋಪಯೋಗಿ ಇಲಾಖೆಯ ದರಪಟ್ಟಿ ಬಾಕಿದರಗಳು ಕಾಲಕಾಲಕ್ಕೆ ಅನ್ವಯವಾಗುವುದು.
9.	ನೀರಿನ ಬಳಕೆದಾರರ ಶುಲ್ಕ	ವಸತಿ –	ಪ್ರತಿ ತಿಂಗಳಿಗೆ ರೂ. 100/–	ಪ್ರತಿ ತಿಂಗಳಿಗೆ ರೂ. 120/–
		ವಾಣಿಜ್ಯ/ ಗೃಹೇತರ–	ಪ್ರತಿ ತಿಂಗಳಿಗೆ ರೂ. 200/–	ಪ್ರತಿ ತಿಂಗಳಿಗೆ ರೂ. 250/–

3. ಪಟ್ಟಣ ಪಂಚಾಯತ್‌ನಲ್ಲಿ ಪ್ಲಂಬಿಂಗ್ ಪರವಾನಿಗೆಯನ್ನು ಪಡೆದು ಪರವಾನಿಗೆಯನ್ನು ಒಂದು ವರ್ಷದಲ್ಲಿ ನವೀಕರಣ ಮಾಡುವಾಗ ಪಟ್ಟಣ ಪಂಚಾಯತ್‌ನಿಂದ ಕನಿಷ್ಟ 5 ನಳ್ಳಿ ನೀರಿನ ಜೋಡಣೆಯನ್ನು ನಿರ್ವಹಿಸಬೇಕು. ಇಲ್ಲದಿದ್ದಲ್ಲಿ ನವೀಕರಣ ಮಾಡಲಾಗುವುದಿಲ್ಲ. ಒಂದು ವರ್ಷದಲ್ಲಿ ನವೀಕರಣ ಮಾಡದಿದ್ದಲ್ಲಿ ಪರವಾನಿಗೆಯನ್ನು ರದ್ದು ಪಡಿಸಿ ಹೊಸ ಪ್ಲಂಬಿಂಗ್ ಲೈಸನ್ಸು ಪಡೆದುಕೊಳ್ಳುವುದು.
4. ಕುಡಿಯುವ ನೀರಿನ ಯೋಜನೆ ಅನುಷ್ಠಾನ ಆದ ನಂತರ ಬಳಕೆದಾರರ ಮೀಟರಿನಲ್ಲಿ ಬಳಕೆಯಾದ ನೀರಿನ ಪ್ರಮಾಣಕ್ಕೆ ಶುಲ್ಕವನ್ನು ಸಾಮಾನ್ಯ ಸಭೆಯಲ್ಲಿ ನಿಗಧಿಪಡಿಸುವುದು.
5. ಹಾಲು ಉತ್ಪಾದಕರ ಸಂಘಗಳ ಹಾಲು ಸಂಗ್ರಹಣಾ ಕೇಂದ್ರಗಳನ್ನು ಪ್ರೋತ್ಸಾಹಿಸಲು ಈ ಕೇಂದ್ರಗಳಿಗೆ ವಸತಿ ಉದ್ದೇಶದ ನೀರಿನ ಬಳಕೆದಾರರ ಶುಲ್ಕ ವಸೂಲಿ ಮಾಡುವುದು.

ಪ್ಲಂಬಿಂಗ್ ಪರವಾನಿಗೆ ಶರ್ತಗಳು:–

1. ಯಾವುದೇ ಕಾರಣಕ್ಕೂ ಕರ್ನಾಟಕ ಪುರಸಭೆಗಳ ಅಧಿನಿಯಮ 324ನೇ ಪ್ರಕರಣದ (1)ನೇ ಉಪ ಪ್ರಕರಣ (ಗ) ಖಂಡದ ಮೇರೆಗೆ ರಚಿಸಿದ ಯಾವುದೇ ಉಪವಿಧಿಯನ್ನು ಯಾ ನಿಭಂದನೆಗಳನ್ನು ಉಲ್ಲಂಘಿಸದಲ್ಲಿ ಲೈಸನ್ಸ್ ನ್ನು ಅಮಾನತು ಯಾ ರದ್ದು ಪಡಿಸಲಾಗುವುದು.
2. ಪರವಾನಿಗೆಯ ಅವಧಿಯು 01 ವರ್ಷದಾಗಿರುತ್ತದೆ.(ಅಂದರೆ ಪ್ರತಿ ವರ್ಷ ಎಪ್ರಿಲ್ 1 ರಿಂದ ಮಾರ್ಚ್ 31 ರವರೆಗೆ) ನಿಗದಿತ ಅವಧಿಗಿಂತ ಒಂದು ತಿಂಗಳು ಮುಂಚಿತವಾಗಿ ನವೀಕರಿಸಿಕೊಳ್ಳತಕ್ಕದ್ದು.
3. ಅನಧಿಕೃತ ನೀರಿನ ಜೋಡಣೆ ಮಾಡಿದಲ್ಲಿ ತಕ್ಷಣ ಲೈಸನ್ಸು ರದ್ದು ಪಡಿಸಲಾಗುವುದು.
4. ಪ್ಲಂಬರ್‌ಗಳು ಬೇರೆ ಜನರಲ್ಲಿ ಕೆಲಸ ನಿರ್ವಹಿಸುವುದು ಕಂಡು ಬಂದಲ್ಲಿ ಪ್ಲಂಬಿಂಗ್ ಲೈಸನ್ಸನ್ನು ರದ್ದು ಪಡಿಸಲಾಗುವುದು
5. ಪ್ಲಂಬರ್‌ಗಳು ಪರವಾನಿಗೆ ಪಡೆದುಕೊಂಡ ಆಯ ವಾರ್ಷಿಕ ವರ್ಷದಲ್ಲಿ ಪ್ಲಂಬಿಂಗ್ ಕಾಮಗಾರಿ ಮಾಡದಿದ್ದಲ್ಲಿ ಲೈಸನ್ಸು ರದ್ದಾಗುತ್ತದೆ.

ನಳ್ಳಿ ಜೋಡಣೆ ಶರ್ತಗಳು ಮತ್ತು ದಂಡನೆಗಳು:

1. ಜಿಲ್ಲಾ ಪರಿಷತ್ತು/ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಅಗೆಯಬೇಕಾಗಿರುವುದರಿಂದ ಸದರಿ ಇಲಾಖೆಯಿಂದ ಪರವಾನಿಗೆಯನ್ನು ಅರ್ಜಿದಾರರೇ ಪಡೆದು ಜೋಡಣೆ ಕೊಡುವ ಮೊದಲು ಪಟ್ಟಣ ಪಂಚಾಯತ್‌ಗೆ ಹಾಜರುಪಡಿಸತಕ್ಕದ್ದು.
2. ಜೋಡಣೆಗೆ ಬೇಕಾಗುವ ಯಾವತ್ತೂ ಕೊಳವೆ, ಮೀಟರು ಮತ್ತಿತರ ಸಾಮಾಗ್ರಿಗಳನ್ನು ಒದಗಿಸುವ ಮತ್ತು ಅವುಗಳನ್ನು ಅಳವಡಿಸುವ ಖರ್ಚುಗಳನ್ನು ಅರ್ಜಿದಾರರೇ ಭರಿಸತಕ್ಕದ್ದು.
3. ಜೋಡಣೆಗಾಗಿ ಅಳವಡಿಸುವ ಯಾವತ್ತೂ ಕೊಳವೆಯನ್ನು ರಸ್ತೆ ಮತ್ತು ಸಾರ್ವಜನಿಕ ಜಾಗದಲ್ಲಿ ಕನಿಷ್ಠ 2 ಅಡಿ ಕಡಿಮೆಯಿಲ್ಲದಷ್ಟು ಆಳದಲ್ಲಿ ಹಾಕಿಸತಕ್ಕದ್ದು.
4. ಡಿಪಾರ್ಟ್‌ಮೆಂಟ್ ಸ್ಟಾಪ್ ಕಾಕ್ ನ್ನು ರಸ್ತೆ ದಾಟಿ ಖಾಸಗಿ ಜಾಗ ಶುರು ಆಗುವ ಮೊದಲು ಮಣ್ಣಿನ ಅಡಿಯಲ್ಲಿ ಅಳವಡಿಸತಕ್ಕದ್ದು.
5. ವಠಾರದೊಳಗಿನ ಪ್ಲಂಬಿಂಗ್ ಪೂರ್ತಿ ಮುಗಿಸಿ, ಐಟಂ ನಂಬ್ರ 5 ರಲ್ಲಿನ ಕೆಲಸ ಮಾಡಿಸಲು ವರ್ಕ್ ಆರ್ಡರಾಗಿ ಸಂಬಂಧಪಟ್ಟ ಪ್ಲಂಬರ್ ಮೂಲಕ ನಿಗಧಿತ ನಮೂನೆಯಲ್ಲಿನ ವರದಿಯನ್ನು ಪಟ್ಟಣ ಪಂಚಾಯತ್ ಕಛೇರಿಗೆ ಸಲ್ಲಿಸತಕ್ಕದ್ದು.
6. ಕಾಯ್ದೆಗೆ ವ್ಯತಿರಿಕ್ತವಾಗುವಲ್ಲಿ ಸಾರ್ವಜನಿಕ ಹಿತದೃಷ್ಟಿಗೆ ಪ್ರತಿಕೂಲವಿದ್ದಲ್ಲಿ ಮತ್ತಿತರ ಕಾರಣಗಳಿಗಾಗಿ ಈ ಮಂಜೂರಾತಿಯನ್ನು ತಡೆಹಿಡಿಯಲು ಹಾಗೂ ವಜಾಗೊಳಿಸುವ ಅಧಿಕಾರವನ್ನು ಕಾದಿರಿಸಲಾಗಿದೆ.
7. ಈ ಮಂಜೂರಾತಿ ಶರತ್ತುಗಳಿಗೆ ಅಥವಾ ಇನ್ನಾವುದೇ ಸಂಬಂಧಪಟ್ಟ ನೀರು ಸರಬರಾಜು ಬೈಲಾಗಳಿಗೆ ವ್ಯತಿರಿಕ್ತವಾಗಿ ಅರ್ಜಿದಾರರಾಗಲೀ, ಪ್ಲಂಬರ್‌ರಾಗಲೀ ಅಕ್ರಮವಾಗಿ ವರ್ತಿಸಿದಲ್ಲಿ ಮತ್ತು ಈ ಸಂಬಂಧ ಪಟ್ಟಣ ಪಂಚಾಯತ್‌ಗೆ ಸಂಭವಿಸಬಹುದಾದ ಯಾವುದೇ ಕಷ್ಟನಷ್ಟಗಳಿಗೆ ಅರ್ಜಿದಾರರನ್ನು ಮತ್ತು ಪ್ಲಂಬರ್‌ರನ್ನು ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ಹೊಣೆಗಾರರನ್ನಾಗಿ ಮಾಡಿ ಪಟ್ಟಣ ಪಂಚಾಯತ್‌ಗೆ ಆಗುವ ನಷ್ಟವನ್ನು ಭರ್ತಿ ಮಾಡಿಕೊಳ್ಳುವ ಅಧಿಕಾರವನ್ನು ಕಾದಿರಿಸಲಾಗಿದೆ.
8. ಮುಖ್ಯ ಕೊಳವೆಯಿಂದ ಮೀಟರ್‌ವರೆಗಿನ ಮಧ್ಯ ಜಾಗದಲ್ಲಿ ಯಾವುದೇ ಸಮಯದಲ್ಲಿ ಲೀಕೇಜು ಕಂಡು ಬಂದಲ್ಲಿ ಅರ್ಜಿದಾರರೇ ರಮ್ಮ ಸ್ವಂತ ಖರ್ಚಿನಿಂದ ರಿಪೇರಿ ಮಾಡಿಸತಕ್ಕದ್ದು.

2) "ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶನ ಮತ್ತು ತೆರೆದ ಮೈದಾನ ಪ್ರದೇಶದ ಸಾರ್ವಜನಿಕ ಸಭೆ ಸಮಾರಂಭಗಳು ಇತ್ಯಾದಿಗಳಿಗೆ ಅನುಮತಿ ನೀಡುವ ಮತ್ತು ನಿಯಂತ್ರಣ ಉಪವಿಧಿ–2026"

ಕ್ರ ಸಂ	ಜಾಹಿರಾತು ವಿಧ	ಹಾಲಿ	ನಿಗಧಿಪಡಿಸಿದ ಶುಲ್ಕ
1	ಶಾಶ್ವತ ಜಾಹೀರಾತು ಪ್ರದರ್ಶನ ಹೊರ್ಡಿಂಗ್ಸ್ ಜಾಹೀರಾತು ಶುಲ್ಕ	ರೂ. 30.00 ಪ್ರತಿ ಚದರ ಅಡಿಗೆ	ರೂ. 50.00 ಚ.ಅಡಿಗೆ ಒಂದು ವರ್ಷಕ್ಕೆ
	ದೀಪಾಲಂಕೃತವಾಗಿದಲ್ಲಿ	–	ರೂ 60.00ಚ.ಅಡಿಗೆ
	ಸರಕಾರಿ ಸ್ಥಳವಾಗಿದ್ದಲ್ಲಿ ಸ್ಥಳ ಶುಲ್ಕ ಹೊರ್ಡಿಂಗ್ಸ್‌ನ ಅಳತೆಗೆ	–	ಚ.ಅಡಿಗೆ ರೂ. 50.00 ರಂತೆ ವಾರ್ಷಿಕ
2	ತಾತ್ಕಾಲಿಕ ಜಾಹೀರಾತು ಗಳಿಗೆ ಅನುಮತಿ ನೀಡುವಿಕೆ. (15 ದಿನಗಳಿಗೆ ಮಾತ್ರ)	ರೂ .2.00 ಪ್ರತಿ ಚದರ ಅಡಿಗೆ	ರೂ 5.00 ಪ್ರತಿ ಚ. ಅಡಿಗೆ
3	ಸ್ವಾಗತ ಕಮಾನು ಗೋಪುರ ರಚಣೆಗಳಿಗೆ ಅನುಮತಿ ನೀಡುವಿಕೆ. ಧಾರ್ಮಿಕ ಕಾರ್ಯಕ್ರಮ ಹೋರತು ಪಡಿಸಿ (ರಸ್ತೆಗಳಿಗೆ ಅಡ್ಡಲಾಗಿದ್ವಾರ ನಿರ್ಮಾಣ) (15 ದಿನಗಳಿಗೆ ಮಾತ್ರ)	–	ರೂ 1000.00
4	ಸ್ಟ್ಯಾಂಡ್ ಬೋರ್ಡು ಅಳವಡಿಕೆಗೆ ಅನುಮತಿ ನೀಡುವಿಕೆ.	–	ಪ್ರತಿ ಬೋರ್ಡ್‌ಗೆ ವಾರ್ಷಿಕ ರೂ. 250.00
5	ಬಂಟಿಂಗ್ಸ್ ತೋರಣಗಳಿಗೆ ಅನುಮತಿ ನೀಡುವಿಕೆ.100 ಮೀ ಕನಿಷ್ಠ ಧಾರ್ಮಿಕ ಕಾರ್ಯಕ್ರಮ ಹೊರತು ಪಡಿಸಿ	–	ಮೀಟರ್‌ಗೆ ರೂ. 2.00
6	ಗೋಡೆ ಬರಹಗಳಿಗೆ ಅನುಮತಿ ನೀಡುವಿಕೆ.	–	20.00 ಪ್ರತಿ ಚ.ಅಡಿಗೆ
7	ಸಂಚಾರಿ ವಾಹನಗಳ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡುವಿಕೆ.	–	ರೂ. 200.00 ದಿನಕ್ಕೆ. ಒಂದು ದಿನಕ್ಕಿಂತ ಮೇಲ್ಪಟ್ಟಲ್ಲಿ ನಂತರದ ಪ್ರತಿ ದಿನಕ್ಕೆ ರೂ.100.00ರಂತೆ.
8	ಜಾಹೀರಾತು ಬಿತ್ತರಿಸುವ ಬಸ್ಸು ತಂಗುದಾಣಗಳ ನಿರ್ಮಾಣಕ್ಕೆ ಖಾಸಗಿ ಪ್ರಾಯೋಜತ್ವಕ್ಕೆ ಅನುಮತಿ ನೀಡುವಿಕೆ.	–	30.00 ಪ್ರತಿ ಚ.ಅಡಿಗೆ ವಾರ್ಷಿಕ
9	ತೆರೆದ ಮೈದಾನ ಅಥವಾ ಪ್ರದೇಶಗಳಲ್ಲಿಯೂ ಸಾರ್ವಜನಿಕ ಸಭೆ ಮೆರವಣಿಗೆ ಅನುಮತಿ ನೀಡುವಿಕೆ. (ಧಾರ್ಮಿಕ ಕಾರ್ಯಕ್ರಮ ಹೊರತು)		
	ಇತರ ತೆರೆದ ಮೈದಾನಗಳಿಗೆ	–	ರೂ. 1000.00

	ವಾಹನ ಜಾಥಾ/ಮೆರವಣಿಗೆಗೆ/ಸಭೆಗಳಿಗೆ	–	ರೂ. 500.00
10	ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ, ಗದ್ದೆ: ಇನ್ನಿತರ ಸಾರ್ವಜನಿಕ ಮನೋರಂಜನೆ, ಸರ್ಕಸ್, ವಸ್ತು ಪ್ರದರ್ಶನ, ನಡೆಸಲು ಮತ್ತು ಯಾವುದೇ ಧ್ವನಿ ವರ್ಧಕ ಅನುಮತಿ ನೀಡುವಿಕೆ.		
	ಪ್ರದರ್ಶನಗಳಿಗೆ ನಿಗಧಿ ಪಡಿಸಬೇಕಾದ ಶುಲ್ಕ ದಿನವಹಿ		
	ಜಾತ್ರಾ ಸಮಯದಲ್ಲಿ ಮಕ್ಕಳ ಆಟಿಕೆಗಳಾದ ಜೈಂಟ್ ವೀಲ್, ಇತ್ಯಾದಿಗಳಿಗೆ ಐಟಂವಾರು ದಿನವೊಂದಕ್ಕೆ	–	ರೂ. 100.00
	ಸರ್ಕಸ್‌ಗಳಿಗೆ ದಿನ ಒಂದಕ್ಕೆ	–	ರೂ. 200.00
	ಚಲನಚಿತ್ರ ಚಿತ್ರೀಕರಣಗಳಿಗೆ ದಿನ ಒಂದಕ್ಕೆ	–	ರೂ. 250.00
	ಧ್ವನಿವರ್ಧಕ ಬಳಕೆ	–	ರೂ. 500.00
11	ಜಾಹೀರಾತುಗಳನ್ನು ಬಿತ್ತರಿಸುವ ಡಿಜಿಟಲ್ ಎಲ್.ಸಿ.ಡಿ ಸ್ಕ್ರೀನ್ ಅಳವಡಿಕೆಗೆ ಅನುಮತಿ ನೀಡುವಿಕೆ. 1 ತಿಂಗಳಿಗೆ ಧಾರ್ಮಿಕ ಹೊರತು ಪಡಿಸಿ	–	ರೂ. 500.00
12	ಮೊಬೈಲ್ ಟವರ್ ಅನುಮತಿ ಶುಲ್ಕ	–	ರೂ. 12000.00
13	ಪರಿಶೀಲನ ಶುಲ್ಕ	–	ರೂ. 1000.00

ದಂಡನೆಗಳು ಮತ್ತು ಇತರ ನಿಯಮಗಳು:–

1. ಈ ಕಛೇರಿ ಅನುಮತಿ ಸಂಖ್ಯೆಯನ್ನು ಕಡ್ಡಾಯವಾಗಿ ತಮ್ಮ ಜಾಹೀರಾತಿನಲ್ಲಿ ನಮೂದಿಸುವುದು. ಅನುಮತಿ ಪಡೆದ ಜಾಹೀರಾತನ್ನು ಪಟ್ಟಣ ಪಂಚಾಯತ್ ವತಿಯಿಂದ ಯಾ ಇತರರು ತೆರವುಗೊಳಿಸಿದಲ್ಲಿ ಪಟ್ಟಣ ಪಂಚಾಯತ್ ಜವಾಬ್ದಾರಿ ಆಗಿರುವುದಿಲ್ಲ.
2. ಪಟ್ಟಣ ಪಂಚಾಯತ್‌ಗೆ ಸೇರಿದ ಯಾವುದೇ ಆಸ್ತಿಗಳನ್ನು ಹಾನಿ ಮಾಡಕೂಡದು. (ಹೊಂಡ; ಗುಂಡಿ ಮಾಡಿ ಅಗೆಯುವುದು, ಇತ್ಯಾದಿ)
3. ತಮ್ಮ ಜಾಹೀರಾತಿನಿಂದ ಯಾವುದೇ ಪಾದಾಚಾರಿಗಳಿಗೆ ವಾಹನಗಳಿಗೆ ತೊಂದರೆಯಾಗಕೂಡದು.
4. ಸಮಾಜದ ಅಶಾಂತಿ ಕದಡುವ, ಶಾಂತಿಭಂಗವಾಗುವಂತ ಜಾಹೀರಾತು ಅಳವಡಿಸಕೂಡದು.
5. ತಾತ್ಕಾಲಿಕ ಪರವಾನಿಗೆಗೆ ತಲಾ ಒಂದು ಜಾಹೀರಾತಿಗೆ ಶುಲ್ಕದೊಂದಿಗೆ ರೂ. 100/– ಮುಂಗಡ ಠೇವಣಿ ಪಾವತಿಸಬೇಕು
6. ತಾತ್ಕಾಲಿಕ ಅನುಮತಿಯು ಕೇವಲ 15 ದಿನಗಳಿಗೆ ಮಾತ್ರ ಇರುತ್ತದೆ. ತದನಂತರ ಅನುಮತಿ ಬೇಕಾದಲ್ಲಿ ಅರ್ಜಿಯನ್ನು ನೀಡಿ ಶುಲ್ಕ ಪಾವತಿಸಿ (ಮುಂಗಡ ಠೇವಣಿಯನ್ನು ಹೊರತು ಪಡಿಸಿ) ನವೀಕರಿಸಲು ಸೂಚಿಸಿದೆ.
7. ತಾತ್ಕಾಲಿಕ ಪರವಾನಿಗೆ ಪಡಕೊಂಡ ಸಂದರ್ಭದಲ್ಲಿ ಜಾಹೀರಾತನ್ನು ಅರ್ಜಿದಾರರು ತೆರವುಗೊಳಿಸದೇ ಇದ್ದಲ್ಲಿ ಪಟ್ಟಣ ಪಂಚಾಯತ್ ವತಿಯಿಂದ ತೆರವುಗೊಳಿಸಲಾಗುವುದು. ಹಾಗೂ ಆ ಸಂದರ್ಭದಲ್ಲಿ ಮುಂಗಡ ಪಾವತಿಸಿಕೊಂಡ. ಠೇವಣಿ ಮೊತ್ತವನ್ನು ಪಟ್ಟಣ ಪಂಚಾಯತ್ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅರ್ಜಿದಾರರಿಗೆ ಶುಲ್ಕ, ಠೇವಣಿ ಹಾಗೂ ಅಳವಡಿಸಿದ ಜಾಹೀರಾತು ಮರು ಕೇಳಲು ಹಕ್ಕು ಇರುವುದಿಲ್ಲ.
8. ಸ್ಥಳ ತನಿಖೆ ಸಮಯದಲ್ಲಿ ಸೂಚಿಸಿದ ಸ್ಥಳದಲ್ಲಿ ಮಾತ್ರ ಜಾಹೀರಾತು ಅಳವಡಿಸುವುದು. ಇತರ ಸ್ಥಳದಲ್ಲಿ ಅಳವಡಿಸಿದಲ್ಲಿ ಜಾಹೀರಾತು ತೆರವುಗೊಳಿಸುವುದರೊಂದಿಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಹಾಗೂ ಸೂಕ್ತ ದಂಡನೆ ವಿಧಿಸಲಾಗುವುದು.

9. ಪಟ್ಟಣ ಪಂಚಾಯತ್ ಅನುಮತಿ ಪಡೆಯದೇ ಯಾವುದೇ ಹೆಚ್ಚುವರಿ ಜಾಹೀರಾತುಗಳನ್ನು ಅಳವಡಿಸಕೂಡದು.
10. ಸರಕಾರಿ ಯಾ ಖಾಸಗಿಯವರ ಜಮೀನು ಯಾ ಕಟ್ಟಡದ ಮೇಲೆ ಜಾಹೀರಾತನ್ನು ಅಳವಡಿಸಿದ್ದಲ್ಲಿ ಅವರಿಂದ ಸೂಕ್ತ ಲಿಖಿತ ಕರಾರು ಒಪ್ಪಿಗೆ ಯಾ ಅನುಮತಿ ಪಡೆದು ಹಾಜರುಪಡಿಸಿದ ನಂತರವೇ ಪಟ್ಟಣ ಪಂಚಾಯತ್ ವತಿಯಿಂದ ಅನುಮತಿ ನೀಡಲಾಗುವುದು.
11. ತಮ್ಮ ಕಾರ್ಯಕ್ರಮದಿಂದ ಯಾವುದೇ ಸಾರ್ವಜನಿಕರಿಗೆ, ವಾಹನಗಳಿಗೆ ತೊಂದರೆಯಾಗಕೂಡದು. ಪ್ರಾಧಿಕಾರಗಳಿಂದ, ಇಲಾಖೆಗಳಿಂದ ದೃಢತೆ (ಫಿಟ್ನೆಸ್) ಬಗ್ಗೆ ದೃಢಪತ್ರ ಪಡೆದು ಹಾಜರು ಪಡಿಸಿದ ನಂತರವೇ ಸರ್ಕಸ್, ಮನೋರಂಜನಾ ಪರವಾನಿಗೆ ಪಡೆಯತಕ್ಕದ್ದು.
12. ಕಾರ್ಯಕ್ರಮದ ಸಮಯದಲ್ಲಿ ವಾಹನ ಹಾಗೂ ಜನ ಸಂಚಾರಕ್ಕೆ ರಸ್ತೆಯನ್ನು ತಡೆ, ಅಡ್ಡಿ ಮಾಡಕೂಡದು.
13. ಮೈಕ್ ಹಾಗೂ ಇನ್ನಿತರ ಅಗತ್ಯ ಪರವಾನಿಗೆಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡಕೊಳ್ಳತಕ್ಕದ್ದು.
14. ಯಾವುದೇ ಬ್ಯಾನರು ಇನ್ನಿತರ ಜಾಹೀರಾತುಗಳನ್ನು ಪ್ರತ್ಯೇಕವಾಗಿ ಅನುಮತಿ ಪಡಕೊಂಡು ಅಳವಡಿಸತಕ್ಕದ್ದು.
15. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಶಾಂತಿ–ಸುವ್ಯವಸ್ಥೆ ಸುರಕ್ಷತೆಯನ್ನು ಕಾಪಾಡತಕ್ಕದ್ದು.
16. ಕಾರ್ಯಕ್ರಮವನ್ನು ಶಾಂತಿಯುತವಾಗಿ ನಡೆಸಿ ಶಾಂತಿ ಕದಡುವ ಘೋಷಣೆಯನ್ನು ಇತ್ಯಾದಿ ಕೂಗದೆ ಸಾರ್ವಜನಿಕ ಶಾಂತಿ ಭಂಗವಾಗದಂತೆ ನೋಡಿಕೊಳ್ಳತಕ್ಕದ್ದು.
17. ಸದ್ರಿ ಪ್ರದರ್ಶನ ನಡೆಸುವ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ತಮ್ಮ ವತಿಯಿಂದಲೇ ಸೂಕ್ತ ರೀತಿಯಲ್ಲಿ ಕಸವನ್ನು ವಿಲೇಗೊಳಿಸತಕ್ಕದ್ದು.
18. ಈ ಮೇಲೆ ಅನುಮತಿಗಳಲ್ಲಿ ಹೊರತುಪಡಿಸಿದ ಬಂದ ಅನುಮತಿಗಳಿಗೆ ಶುಲ್ಕ ವಿಧಿಸುವ ಮತ್ತು ಅನುಮತಿ ನೀಡುವ ಅಧಿಕಾರವು ಮುಖ್ಯಾಧಿಕಾರಿಗೆ ನಿಹಿತವಾಗಿರುತ್ತದೆ.
19. ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಯಾ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪಟ್ಟಣ ಪಂಚಾಯತ್ ಪ್ರತ್ಯೇಕ ಅನುಮತಿ ಪಡೆಯದೇ ಯಾವುದೇ ಜಾಹೀರಾತುಗಳನ್ನು ಅಳವಡಿಸಕೂಡದು. ತಪ್ಪಿದಲ್ಲಿ ರೂ 500/– ರಿಂದ 2000/– ತನಕ ವಿಧಿಸಲಾಗುವ ದಂಡವನ್ನು ಪಾವತಿಸತಕ್ಕದ್ದು,
20. ಸಂಬಂಧಿಸಿದ ವ್ಯಾಪಾರ ಮಾಡುವುದಕ್ಕೆ ವ್ಯಾಪಾರ ಪರವಾನಿಗೆಯನ್ನು ಐಟಂವಾರು ಸೂಚಿಸಿ ಪ್ರತ್ಯೇಕವಾಗಿ ಪಡೆದು ಕಾರ್ಯಕ್ರಮ ಮಾಡುವುದು.
21. ಕಾರ್ಯಕ್ರಮಗಳಿಗೆ ಬೇಕಾಗುವ ಅಗತ್ಯ ಪರವಾನಿಗೆ(ಅಗ್ನಿಶಾಮಕ, ಲೋಕೋಪಯೋಗಿ ಇಲಾಖೆ; ಪೊಲೀಸು; ಮೆಸ್ಕಾಂ; ಸಾರ್ವಜನಿಕ ಆರೋಗ್ಯ ಇಲಾಖೆ, ಅರಣ್ಯ ಇಲಾಖೆ, ಪಶು ವೈದ್ಯಕೀಯ ಇಲಾಖೆ) ಯನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದು ನಡೆಸತಕ್ಕದ್ದು,
22. ಸ್ಥಳದ ನಿಖರತೆ ಬಗ್ಗೆ ಸಂಬಂಧಿಸಿದವರಿಂದ ಒಪ್ಪಿಗೆ/ಸೂಕ್ತ ಕರಾರರನ್ನು ಸಂಬಂಧಿಸಿದವರಿಂದ (ಮಾಲೀಕರಿಂದ/ ಪಹಣಿದಾರರಿಂದ/ಹಕ್ಕುದಾರರಿಂದ) ಪಡೆದು ಹಾಜರು ಪಡಿಸತಕ್ಕದ್ದು.
23. ಸದ್ರಿ ಪ್ರದರ್ಶನ ಯಾ ಕಾರ್ಯಕ್ರಮ ನಡೆಸುವ ಸ್ಥಳದಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಉಪಯೋಗಿಸುವಂತಿಲ್ಲ. ಹಾಗೂ ಪರಿಸರ ಮಾಲಿನ್ಯ ಮಾಡಕೂಡದು. ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ತಮ್ಮ ವತಿಯಿಂದಲೇ ಸೂಕ್ತ ರೀತಿಯಲ್ಲಿ ಕಸವನ್ನು ವಿಲೇಗೊಳಿತಕ್ಕದ್ದು. ತಪ್ಪಿದಲ್ಲಿ ರೂ 1000/– ರಿಂದ 5000/– ತನಕ ವಿಧಿಸಲಾಗುವ ದಂಡವನ್ನು ಪಾವತಿಸತಕ್ಕದ್ದು.
24. ಪ್ರದರ್ಶನ ಯಾ ಕಾರ್ಯಕ್ರಮಗಳಲ್ಲಿ ಅಳವಡಿಸುವ ತಾಂತ್ರಿಕ ಸಾಮಗ್ರಿಗಳಿಗೆ ಹಾಗೂ ಮುಂದೆ ನಡೆಯುವ ಯಾವುದೇ ಅನಾಹುತಗಳಿಗೆ ಕಾರ್ಯಕ್ರಮ ಪ್ರಾಯೋಜಕರೇ ಜವಾಬ್ದಾರರು, ಹಾಗೂ ಸದ್ರಿ

ಕಾರ್ಯಕ್ರಮಗಳಿಗೆ ಅಳವಡಿಸುವ ಯಂತ್ರೋಪಕರಣಗಳನ್ನು ಸಂಬಂಧಿಸಿದ ಸೂಕ್ತ ಪ್ರಾಧಿಕಾರಗಳಿಂದ, ಇಲಾಖೆಗಳಿಂದ ದೃಢತೆ (ಫಿಟ್ನೆಸ್) ಬಗ್ಗೆ ದೃಢಪತ್ರ ಪಡೆದು ಹಾಜರು ಪಡಿಸಿದ ನಂತರವೇ ಸರ್ಕಸ್, ಮನೋರಂಜನಾ ಪರವಾನಿಗೆ ಪಡೆಯತಕ್ಕದ್ದು.

25. ಪ್ರಾಣಿಗಳನ್ನು ಉಪಯೋಗಿಸಿದಲ್ಲಿ ಸಂಬಂಧಿಸಿದಲ್ಲಿ ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆದು ಹಾಜರು ಪಡಿಸತಕ್ಕದ್ದು.
26. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸುರಕ್ಷತೆಯನ್ನು ಕಾಪಾಡತಕ್ಕದ್ದು.
27. ಕಾಲಕಾಲಕ್ಕೆ ಬದಲಾಗುವ ಬಾಡಿಗೆ ಮೊತ್ತದೊಂದಿಗೆ ಸೇವಾತೆರಿಗೆ ಅನ್ವಯಿಸುತ್ತದೆ.
28. ಪರವಾನಿಗೆ ಅವಧಿ ಮುಗಿದ ನಂತರ ಅನುಮತಿ ನವೀಕರಣಕ್ಕೆ ಅರ್ಜಿ ಸಲ್ಲಿಸುವುದು ಮುಂದಿನ ಒಂದು ವರ್ಷದ ವರೆಗೆ ಶೇ.10 ದಂಡನೆ ಒಂದು ವರ್ಷದ ನಂತರ 2 ವರ್ಷ ವರೆಗೆ 25% ನಂತರ 100% ದಂಡ ಪಾವತಿ.
29. ರಸ್ತೆ ವಿಭಾಜಕದಲ್ಲಿರುವ ವಿದ್ಯುತ್ ದೀಪದ ಕಂಬಗಳಿಗೆ ಜಾಹೀರಾತು ಏಜೆನ್ಸಿಗಳ ಅನುಮತಿ ಪಡೆದ ಅಧಿಕೃತ ಫಲಕಗಳನ್ನು ಹೊರತು ಪಡಿಸಿ ಬಂಟಿಂಗ್ಸ್ ಬ್ಯಾನರ್ ನ್ನು ಮತ್ತು ಸ್ಟಿಕ್ಟರ್ ಇತ್ಯಾದಿಗಳನ್ನು ಅಳವಡಿಸುವುದನ್ನು ನಿಷೇದಿಸಲಾಗಿದೆ.
30. ರಸ್ತೆ ಬದಿಗಳಲ್ಲಿ ಅನುಮತಿ ಪಡೆದು ಜಾಹೀರಾತುಗಳನ್ನು ಅಳವಡಿಸುವಾಗ ರಸ್ತೆ ಬದಿಯಲ್ಲಿ ಹೊಂಡವನ್ನು ತೆಗೆಯುವ ಸಂಧರ್ಭಗಳಲ್ಲಿ ಪಟ್ಟಣ ಪಂಚಾಯತ್ ನಿಂದ ಪ್ರತ್ಯೇಕವಾಗಿ ಅನುಮತಿಯನ್ನು ಪಡೆಯತಕ್ಕದ್ದು. ಹಾಗೂ ರಸ್ತೆ ಹೊಂಡ ಮುಚ್ಚಿ ಮುಂದಿನಂತೆ ಸುವ್ಯವಸ್ಥೆಗೊಳಿಸುವ ಖರ್ಚನ್ನು ಪಟ್ಟಣ ಪಂಚಾಯತ್ ಮುಂಚಿತವಾಗಿ ಪಾವತಿಸತಕ್ಕದ್ದು.
31. ಪಟ್ಟಣ ಪಂಚಾಯತ್ ವ್ಯಾಪ್ತಿಯ ಗೋಡೆಗಳಲ್ಲಿ, ವೃತ್ತಗಳಲ್ಲಿ, ವಿದ್ಯುತ್ ಕಂಬಗಳಲ್ಲಿ ಸ್ಟಿಕರ್ ಅಂಟಿಸುವುದನ್ನು ನಿಷೇದಿಸಲಾಗಿದೆ. ಇಂತಹ ಸಂದರ್ಭಗಳಲ್ಲಿ ಪಟ್ಟಣ ಪಂಚಾಯತ್ ನ ಶರ್ತವನ್ನು ಉಲ್ಲಂಘಿಸಿದವರಿಗೆ ದಿನಕ್ಕೆ 200.00ರಂತೆ ದಂಡ ವಿಧಿಸಲಾಗುವುದು. ಅದನ್ನು ಪಾವತಿಸದಿದ್ದಲ್ಲಿ ಸಾರ್ವಜನಿಕ ಉಪದ್ರವ ತಡೆ ಕಾಯ್ದೆಯಡಿಯಲ್ಲಿ ಮೊಕದ್ದಮೆ ದಾಖಲಿಸಲಾಗುವುದೆಂದು ತಿಳಿಯತಕ್ಕದ್ದು.

ಮೇಲಿನ ದಂಡನೆಗಳು ಮತ್ತು ಶರ್ತಗಳನ್ನು ಉಲ್ಲಂಘಿಸಿದಲ್ಲಿ ಕಾರ್ಯಕ್ರಮವನ್ನು ಮತ್ತು ಅನುಮತಿಯನ್ನು ರದ್ದು ಪಡಿಸುವ ಹಕ್ಕನ್ನು ಪಟ್ಟಣ ಪಂಚಾಯತ್ ಕಾದಿರಿಸಿಕೊಂಡಿರುತ್ತದೆ.

---

3) "ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಿಂದ ಪಡೆಯುವ ವಿವಿಧ ಸೇವೆಗಳಿಗೆ (ಕಂದಾಯ ಮತ್ತು ಆರೋಗ್ಯ) ಶುಲ್ಕ ನಿಗಧಿ ಮತ್ತು ಸಂಗ್ರಹಣೆ ಉಪವಿಧಿ–2026"

ಈ ನಿಯಮ ಜಾರಿಯಾದ ದಿನಾಂಕದಿಂದ ಈ ಕೆಳಕಂಡ ಶುಲ್ಕಗಳನ್ನು ವಸೂಲಿ ಮಾಡತಕ್ಕದ್ದು.

ಕ್ರ.ಸಂ	ವಿಷಯ	ಹಾಲಿ	ಪರಿಶಿಷ್ಟ ತ
1.	ಸ್ಥಿರಾಸ್ಥಿ ಹಕ್ಕು ಬದಲಾವಣೆ	ನೋಂದಣಿ, ಮುದ್ರಕ ಇಲಾಖೆಯ ಶೇ. 1%	ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯಂತೆ ಶುಲ್ಕ ಸಂಗ್ರಹಿಸುವುದು.
2.	ಮರಣದಿಂದ ಅಥವಾ ದಾನದಿಂದ ಹಕ್ಕು ಬದಲಾವಣೆ	ವಾರೀಸು ಹಕ್ಕು 200/–	
3.	ಹಕ್ಕು ಬದಲಾವಣೆ ದೃಢೀಕರಣ ಪತ್ರದ ಶುಲ್ಕ	ರೂ. 100	ರೂ. 100
	ಖಾತ ನಕಲು ಶುಲ್ಕ	200.00	250.00

	ಕರ್ನಾಟಕ ಉಚ್ಚ ನ್ಯಾಯಾಲಯ ಪ್ರಕರಣದ ಆದೇಶ ಸಂಖ್ಯೆ 20315/2022ಎಲ್,ಬಿ.ಆರ್.ಇ.ಎಸ್ ಪ್ರಕಾರ ಈ ಖಾತಾ ನೀಡುವುದಕ್ಕೆ ಅಭಿವೃದ್ಧಿ ಶುಲ್ಕವನ್ನು ಎಂಟು ಸೆಂಟ್ಸ್ ಗಿಂತ ಕೆಳಗಡೆ ರೂ.3000/– ಮತ್ತು ಎಂಟು ಸೆಂಟ್ಸ್ ಗಿಂತ ಮೇಲ್ಪಡೆ ರೂ.5000/–ವನ್ನು ಅಭಿವೃದ್ಧಿ ಶುಲ್ಕ ಪಡೆಯುವುದೆಂದು ಈ ಹಿಂದಿನ ದಿನಾಂಕ 04–12–2021 ರ ನಡವಳಿ ನಂ 54/21–22 ರ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಇನ್ನು ಮುಂದಕ್ಕೆ ಸದ್ರಿ ಇಂತಹ ಖಾತಗಳಿಗೆ ಎಂಟು ಸೆಂಟ್ಸ್ ಒಳಗಡೆ ಇರುವ ಜಮೀನಿಗೆ ಅಭಿವೃದ್ಧಿ ಶುಲ್ಕ ರೂ,3000/– ಎಂಟು ಸೆಂಟ್ಸ್ ಗಿಂತ ಇಪತ್ತು ಸೆಂಟ್ಸ್ ಒಳಗಡೆ ಇರುವ ಜಾಗಕ್ಕೆ ರೂ.5000/– ಇಪ್ಪತ್ತು ಎಂಟ್ಸ್ ಗಿಂತ ಮೇಲ್ಪಡೆ ಐವತ್ತು ಸೆಂಟ್ಸ್ ಒಳಗಡೆ ರೂ 10000/– ಹಾಗೂ ಐವತ್ತು ಸೆಂಟ್ಸ್ ಮೇಲ್ಪಡೆ ಇರುವ ಜಮೀನಿಗೆ ರೂ 15000/– ಶುಲ್ಕ ವಿಧಿಸುವುದೇಂದು ಸಭೆ ತೀರ್ಮಾನಿಸಲಾಯಿತು.	ಎಂಟು ಸೆಂಟ್ಸ್ ಒಳಗಡೆ ಇರುವ ಜಮೀನಿಗೆ ಅಭಿವೃದ್ಧಿ ಶುಲ್ಕ ರೂ,3000/– ಎಂಟು ಸೆಂಟ್ಸ್ ಗಿಂತ ಇಪತ್ತು ಸೆಂಟ್ಸ್ ಒಳಗಡೆ ಇರುವ ಜಾಗಕ್ಕೆ ರೂ.5000/– ಇಪ್ಪತ್ತು ಎಂಟ್ಸ್ ಗಿಂತ ಮೇಲ್ಪಡೆ ಐವತ್ತು ಸೆಂಟ್ಸ್ ಒಳಗಡೆ ರೂ 10000/– ಐವತ್ತು ಸೆಂಟ್ಸ್ ಮೇಲ್ಪಡೆ ಇರುವ ಜಮೀನಿಗೆ ರೂ 15000/– ಶುಲ್ಕ	ಕಟ್ಟಡ ಖಾತಾ ಮತ್ತು ಖಾಲಿ ನಿವೇಶನ ಖಾತಾ ನಗರ ಮತ್ತು ಗ್ರಾಮಾಂತರ ಸಹಾಯಕ ನಿರ್ದೇಶಕರು ಇವರಿಂದ ಏಕ ವಿನ್ಯಾಸ ನಕ್ಷೆ ತಾಂತ್ರಿಕ ಅನುಮೋದನೆ ಪಡೆದಿರುವ ನಕ್ಷೆಗೆ ಪ್ರತಿ ಚದರ ಮೀಟರ್‌ಗೆ 10.00 ರಂತೆ ಪಟ್ಟಣ ಪಂಚಾಯತ್ ಕಿನ್ನಿಗೋಳಿ ಅಭಿವೃದ್ಧಿ ಶುಲ್ಕ
4.	ಹಕ್ಕು ಬದಲಾವಣೆ ನಕಲು ಪ್ರತಿ ವಿತರಣೆ ಶುಲ್ಕ (ಎರಡನೇ ಪ್ರತಿ)	ರೂ. 100	ಒಂದು ಪ್ರತಿಗೆ ರೂ. 100
5.	ನಿರಾಕ್ಷೇಪಣಾ ಪತ್ರ	ರೂ. 100	ರೂ. 200
6.	ವಿದ್ಯುತ್ ಸಂಪರ್ಕ ದೃಢಪತ್ರ	ರೂ. 200	ರೂ. 250
7.	ವಾಸ್ತವ್ಯ ದೃಢ ಪತ್ರ/ನಕಲು ಶುಲ್ಕ	ರೂ. 100	ರೂ. 100
8.	ಜನನ–ಮರಣ ದೃಢಪತ್ರ	–	ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯಂತೆ ಶುಲ್ಕ ಸಂಗ್ರಹಿಸುವುದು.

ಅಧ್ಯಕರು
ಕಿನ್ನಿಗೋಳಿ ಪಟ್ಟಣ ಪಂಚಾಯತ್

ಮುಖ್ಯಾಧಿಕಾರಿ
ಕಿನ್ನಿಗೋಳಿ ಪಟ್ಟಣ ಪಂಚಾಯತ್

4) "ಕೆನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಉದ್ದಿಮೆಗಳಿಗೆ ಅನುಮತಿ ನೀಡುವಿಕೆ ಹಾಗೂ ನಿಯಂತ್ರಣ ಉಪವಿಧಿ–2026"

ಕ್ರ.ಸಂ	ಉದ್ಯಮಗಳು	ನಿಗದಿ ಪಡಿಸಿದ ದರ	swm
1	ಶಾಮಿಯಾನ	2500	1095
2	ಟೂರ್ಸ್ ಅಂಡ್ ಟ್ರಾವೆಲ್ಸ್ ಕಛೇರಿ	2000	1095
3	ಕಂಪ್ಯೂಟರ್ ಸೇಲ್ಸ್ & ಸರ್ವಿಸ್	1500	1095
4	ಡಯಗ್ನೋಸ್ಟಿಕ್ ಸೆಂಟರ್	2000	1095
5	ರಸಗೊಬ್ಬರ,ಬಿತ್ತನೆಬೀಜ, ಕೀಟನಾಶಕ,ಕೃಷಿ ಸಲಕರಣೆ,ಗೃಹೋಪಯೋಗಿ ವಸ್ತುಗಳು ಇತರೆ	2000	1095
6	ಹರ್ಬಲ್ ವಸ್ತುಗಳ ಮಾರಾಟ	1000	1095
7	ಫರ್ನಿಚರ ಮಾರಾಟ	2000	1095
8	Gold Buyers	2000	1095
9	ಸೋಪ್ಸ್ ಮತ್ತು ಡಿಟರ್ಜಿಂಟ್ ವಸ್ತುಗಳ ಮಾರಾಟ	1500	1095
10	ಎಲೆಕ್ಟ್ರಿಕಲ್ಸ್ ವರ್ಕ್ಸ್	1000	1095
11	ಕೋಳಿಮಾಂಸ,ಕುರಿಮಾಂಸ ಮಾರಾಟ	5000	1095
12	ಮೊಬೈಲ್ ರಿಪೇರಿ	1000	1095
13	ಕೆತ್ತನೆ ಕೆಲಸ	1000	1095
14	ಫ್ಯಾನ್ಸಿ ಮತ್ತು ಡ್ರೆಸ್ ಸೆಂಟರ್	1000	1095
15	ಟೈಲರಿಂಗ್ ಮತ್ತು ಫ್ಯಾನ್ಸಿ ಅಂಗಡಿ	1000	1095
16	Emission Testing Center	1500	1095
17	ಕ್ಲಿನಿಕ್ - Clinic	1500	1095
18	ವಾಹನಗಳ ಬಿಡಿಭಾಗ ಮಾರಾಟ	1000	1095
19	ಸೆಲೂನ್	2500	1500
20	ಗ್ಯಾರೇಜ	2000	1095
21	ಹಾಲು ಉತ್ಪನ್ನಗಳ ಮಾರಾಟ	1000	1095
22	ವಸತಿ ಗೃಹ	10000	1095
23	ನರ್ಸಿಂಗ್ ಹೋಮ್	2000	1095
24	ಬಾರ್ ಮತ್ತು ರೆಸ್ಟೋರೆಂಟ್	15000	5475
25	ವೈನ್ ಶಾಪ್ (ಮದ್ಯದ ಅಂಗಡಿ)	10000	5475
26	ಪೆಟ್ರೋಲ್ ಬಂಕ್	5000	1095
27	ಚಿನ್ನ ಬೆಳ್ಳಿ ಮಾರಾಟ ಸಣ್ಣದು	2500	1095
28	ಚಿನ್ನ ಬೆಳ್ಳಿ ಮಾರಟ ದೊಡ್ಡದು	1000	1095
29	ವರ್ಕ್ ಶಾಪ್	2000	1095
30	ಬ್ಯೂಟಿ ಪಾರ್ಲರ್	1500	1460
31	ಗೊಬ್ಬರದ ಅಂಗಡಿ	1500	1095
32	ಫ್ಯಾನ್ಸಿ ಸ್ಟೋರ್	1000	1095
33	ಪಾನ್ ಬೀಡ ಅಂಗಡಿ	1000	1095
34	ದ್ವಿ-ಚಕ್ರ ವಾಹನಗಳ ಮಾರಾಟ ಕೇಂದ್ರ(ಶೊ ರೂಂ)	6000	1825
35	ಸ್ಟೀಲ್ ಪಾತ್ರೆ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳ ಮಾರಾಟ ಅಂಗಡಿ	2000	1095

36	ಎಲೆಕ್ಟ್ರಾನಿಕ್ಸ್ ಅಂಗಡಿ/ಉದ್ಯಮ	2500	1095
37	ಐಸ್ ಕ್ರೀಂ ಪಾರ್ಲರ್	2500	1825
38	ತರಕಾರಿ ಅಂಗಡಿ	1000	1095
39	ಫರ್ನೀಚರ್ ಅಂಗಡಿ/ ಪರ್ನಿಚರ್ ತಯಾರಿಕೆ	5000	1095
40	ಮೊಬೈಲ್ ಅಂಗಡಿ(ಮಾರಾಟ)	1500	1095
41	ಮೊಬೈಲ್ ಅಂಗಡಿ (ರಿಪೇರಿ)	1000	1095
42	ಟೈಲರಿಂಗ್ ಶಾಪ್	2000	1095
43	ಟ್ರಾನ್ಸ್‌ಪೋರ್ಟ್	2000	1095
44	ಸರ್ವಿಸ್ ಸ್ಟೇಶನ್	2000	1095
45	ಎಣ್ಣೆ / ಆಯಿಲ್ ಮೀಲ್	2000	1095
46	ಸ್ಟೇಷನರಿ	1000	1095
47	ಡ್ರೈವಿಂಗ್ ಶಾಲೆ	1500	1095
48	ಸಿಮೆಂಟ್ ಮಾರಾಟ	2500	1095
49	ಟೈಲರಿಂಗ್ ಮೆಟೀರಿಯಲ್ ಅಂಗಡಿ	750	1095
50	ಹೂ ಮಾರಾಟ ಅಂಗಡಿ	1000	1460
51	ಕೋರಿಯರ್ಸ್	1000	1095
52	ವಾಚ್ಸ್ ಮಾರಾಟ/ ರಿಪೇರಿ	1000	1095
53	ಬೋರ್ವೆಲ್ಸ್	2500	1095
54	ಬಟ್ಟೆ ಬಜಾರ್	1000	1460
55	ಬಟ್ಟೆ ವ್ಯಾಪಾರ(	1500	1460
56	ಜ್ಯೂಸ್ ಸೆಂಟರ್	1000	1825
57	ಕ್ಲಿನಿಕಲ್ ಲ್ಯಾಬೋರೇಟರಿ	2500	1825
58	ಬಳೆಗಳ ಅಂಗಡಿ	1000	1095
59	ವೆಲ್ಡಿಂಗ್ ಶಾಪ್	1500	1095
60	ಸೈಕಲ್ ಸರ್ವೀಸಸ್ ಮತ್ತು ರಿಪೇರಿ	1000	1095
61	ಕೋಳಿ ಮಾಂಸದ ಅಂಗಡಿ	5000	1095
62	ಹೋಟೆಲ್ (ಶ್ರೇಣಿ -1)	1500	1825
63	ಹೋಟೆಲ್ (ಶ್ರೇಣಿ -2)	2500	3650
64	ಬಟ್ಟೆ ಅಂಗಡಿ (ಶ್ರೇಣಿ -2)	2000	1095
65	ಬಟ್ಟೆ ಅಂಗಡಿ(ಶ್ರೇಣಿ -3)	5000	1825
66	ಕೇಟರಿಂಗ್	1500	1095
67	ಗ್ಯಾಸ್ ಸ್ಟೋವ್ ದುರಸ್ತಿ ಮತ್ತು ಬಿಡಿಭಾಗಗಳ ಮಾರಾಟ	1000	1095
68	ಬಾರ್ ಮತ್ತು ರೆಸ್ಟೋರೆಂಟ್	15000	5475
69	ಬೋರ್ಡಿಂಗ್ & ಲಾಡ್ಜಿಂಗ್ 1ರಿಂದ 10 ರೂಮ್	10000	5475
70	ಬೋರ್ಡಿಂಗ್ & ಲಾಡ್ಜಿಂಗ್ 10ರಿಂದ 20 ರೂಮ್	20000	5475
71	ವಸತಿ ಗೃಹ 20 ಕೊಠಡಿಗಳ ಮೆಲ್ಪಟ್ಟು	25000	5475
72	ದಿನಸಿ ಅಂಗಡಿ	1000	1460
73	ಮಟನ್ ಅಂಗಡಿ (ಬಿ ದರ್ಜೆ)	5000	1095
74	ಹಂದಿ ಮಾಂಸದ ಮಾರಾಟ ಅಂಗಡಿ	5000	1095
75	ಎಣ್ಣೆ ಮತ್ತು ಹಿಟ್ಟಿನ ಗಿರಣಿ	2500	1095
76	ಡೆಕೋರೇಟ್ ಉದ್ಯಮ	2000	1095
77	ಫಾಸ್ಟ್ ಫುಡ್ ಸೆಂಟರ್	2500	1095
78	ಆಹಾರ ಪದಾರ್ಥ ಉತ್ಪನ್ನಗಳ ತಯಾರಿಕೆ & ಮಾರಾಟ	2500	1095

79	ಉಪ್ಪಿನಕಾಯಿ ಹಾಗೂ ಗೃಹಉಪಯೋಗಿ ವಸ್ತುಗಳ ವ್ಯಾಪಾರ	1000	1095
80	ವಾಹನಗಳ ಬಿಡಿಭಾಗಗಳ ಮಾರಾಟ	2000	1460
81	ಕಟ್ಲೇರಿ ಅಂಗಡಿ	1500	1095
82	ಅರ್ಥ ಮೂವರ್ಸ (ಜೆ ಸಿ ಬಿ)	2000	1095
83	ಪತಂಜಲಿ ಉತ್ಪನ್ನಗಳು	1000	1095
84	ಮರದ ಮಿಲ್ಲು 25 ಹೆಚ್. ಪಿ	5000	1095
85	ಅಕ್ಕಿ ಮಾರಾಟ	1000	1095
86	ಗುಜರಿ ವ್ಯಾಪಾರ	1000	1095
87	ಆಯುರ್ವೇದ ಮೆಡಿಕಲ್ ಸ್ಟೋರ್ಸ್	1000	1095
88	ಸ್ಪಿಕ್ಕರ್ ಕಟ್ಟಿಂಗ್	1000	1095
89	ವಾಹನ ತರಬೇತಿ ಶಾಲೆ	1500	1095
90	ಚಪ್ಪಲಿ ರಿಪೇರಿ	1000	1095
91	ಮ್ಯಾನ್ ಪವರ್ ಎಜೆನ್ಸಿ	2000	1095
92	ತರಕಾರಿ ವ್ಯಾಪಾರ ಮತ್ತು ಹಣ್ಣುಹಂಪಲು ಅಂಗಡಿ	2000	1460
93	ಕೋರಿಯರ್ ಮತ್ತು ಅನ್ ಲೈನ್ ಸರ್ವೀಸ್	2000	1095
94	ಅಲ್ಯುಮಿನಿಯಂ ಫ್ಯಾಬ್ರಿಕೇಷನ್	2500	1095
95	ತೂಕದ ಯಂತ್ರ ಮಾರಾಟ ಸೇವೆ	1000	1095
96	ಲೈನ್ ಸೇಲ್	1000	1095
97	ಗೃಹಪಯೋಗಿ ವಸ್ತುಗಳ ಮಾರಾಟ ಮಳಿಗೆ (ಬಿ ದರ್ಜಿ)	1000	1095
98	ಡ್ರೈ ಕ್ಲೀನರ್ & ಐರನ್ ಅಂಗಡಿ	1000	1095
99	ಹಾರ್ಡ್‌ವೇರ್ ಅಂಗಡಿ	1000	1460
100	ಜನರಲ್ ಸ್ಟೋರ್ಸ್ ದರ್ಜೆ 1	1000	1460
101	ಜನರಲ್ ಸ್ಟೋರ್ಸ್ ದರ್ಜೆ 2	2000	1460
102	ಜನರಲ್ ಸ್ಟೋರ್ಸ್ ದರ್ಜೆ 3	5000	2555
103	ಜನರಲ್ ಸ್ಟೋರ್ಸ್ ದರ್ಜೆ 4	8000	1095
104	ಚಿನ್ನ, ಬೆಳ್ಳಿ ಆಭರಣಗಳ ತಯಾರಿ ಮತ್ತು ಮಾರಾಟ (ಸಣ್ಣದು)	2000	1095
105	ಚಿನ್ನ, ಬೆಳ್ಳಿ ಆಭರಣಗಳ ತಯಾರಿ ಮತ್ತು ಮಾರಾಟ (ಮಧ್ಯಮ)	3000	1095
106	ಕಟ್ಟಡ ಸಾಮಾಗ್ರಿಗಳ ಮಾರಾಟ	2000	1095
107	ಗುತ್ತಿಗೆದಾರರ ಕಛೇರಿ	1000	1095
108	ಹೋಂ ಅಪ್ಲೇಯನ್ಸ್	2500	1095
109	ಬಟ್ಟೆ ಅಂಗಡಿ & ಫ್ಯಾನ್ಸಿ ಸೆಂಟರ್	2500	1460
110	ಬ್ರೆಡ್ ತಯಾರಿಕ ಘಟಕ	1500	1095
111	ಬಟ್ಟೆ ಅಂಗಡಿ ಗ್ರೇಡ್- 1	6000	1095
112	ಬಟ್ಟೆ ಅಂಗಡಿ ಗ್ರೇಡ್- 2	2000	1095
113	ಗ್ಯಾಸ್ ಎಜೆನ್ಸಿ	2500	1095
114	ಎಜೆನ್ಸಿ	1000	1095
115	ಟ್ರೇಡರ್ಸ್	1000	1095
116	ರೆಸ್ಟೋರೆಂಟ್	5000	3650
117	ಮರದ ಪಿಠೋಪಕರಣ ತಯಾರಿ	2500	1095
118	ಒಣ ಮೀನು ವ್ಯಾಪಾರ	1000	1095
119	ಲೈಟಿಂಗ್ ಉಪಕರಣ	3000	1095
120	ಟಯರ್ ರಿಸೋಲ್ ಉದ್ಯಮದ ಬಗ್ಗೆ	2000	1095
121	ನ್ಯೂಟ್ರಿಷನ್ ಸೆಂಟರ್	1000	1095

122	ಸಿಮೆಂಟ್ ಸಾಮಗ್ರಿಗಳ ಮಾರಾಟ	1500	1095
123	ಕಾರ್ ವಾಶ್	2000	1095
124	ಗ್ಲಾಸ್ & ಪ್ಲೈವುಡ್	1000	1095
125	ಕೋಲ್ಡ್ ಸ್ಟೋರೇಜ್	2500	1095
126	ಹಾಲು ಶೀತಲೀಕರಣ ಕೇಂದ್ರ	2500	1095
127	ವಿಧ್ಯುತ್ ಸಲಕರಣೆ ಮಾರಾಟ & ಒಳಾಂಗಣ ವಿಧ್ಯುತ್ ದೀಪಾಲಂಕಾರದ ಬಗ್ಗೆ	2000	1095
128	ಪ್ರಿಂಟಿಂಗ ಮತ್ತು ಬೈಂಡಿಂಗ	2000	1095
129	ಕಬ್ಬಿನ ಜ್ಯೂಸ್	1000	1095
130	ದ್ವಿ-ಚಕ್ರ ವಾಹನ ಸೇಲ್ಸ್ & ಸರ್ವಿಸ್	5000	1095
131	ಗ್ಯಾರೇಜ್	2000	1095
132	ಅಡಿಕೆ ವ್ಯಾಪಾರ	2000	1095
133	ಹಿಟ್ಟಿನ ಗಿರಣಿ	5000	1095
134	ಕೋಳಿ ವ್ಯಾಪಾರ	2000	1095
135	ಅಲ್ಯೂಮಿನಿಯಂ ಸ್ಟೀಲ್ ಪಾತ್ರೆ ವ್ಯಾಪಾರ	2000	1095
136	ಪೈಂಟ್ ಮತ್ತು ಹಾರ್ಡವೇರ್	3000	1095
137	ಅಕೌಂಟಿಂಗ್	2000	1095
138	ವಿದ್ಯುತ್ ಉಪಕರಣಗಳ ಮಾರಾಟ	3000	1095
139	ಇಂಟೀರಿಯರ್ ಡೆಕೊರೆಶನ್	2500	1095
140	ಸೆಂಟ್ರಿಂಗ್ ಶೀಟ್ ಬಾಡಿಗೆಗೆ	1000	1095
141	ಟ್ರಾವೆಲಿಂಗ್ ಎಜೆನ್ಸಿ	2000	1095
142	ಡೆಂಟಲ್ ಕ್ಲಿನಿಕ್	3000	1095
143	ರೇಡಿಮೇಡ್ ಗಾರ್ಮೆಂಟ್ಸ್	3000	1095
144	ತರಭೇತಿ ಕೇಂಧ್ರ	2000	1095
145	ಟಯರ್ ಮತ್ತು ಟ್ಯುಬ್ ಮಾರಾಟ	2500	1095
146	ಟೈಲರಿಂಗ್	1500	1095
147	ವೈನ್ ಶಾಪ್ ಗ್ರೇಡ್-3	5000	1095
148	ಹಣ್ಣಿನ ಅಂಗಡಿಗಳು ಸಿ-ವರ್ಗ	1500	1095
149	ಹೋಟಲ್ ಸಸ್ಯಹಾರಿ	3000	3650
150	ಸೆಂಟ್ರಿಂಗ್ ಮೆಟ್ರೀಲ್ ಶಾಪ್ಸ್ ಎ-ವರ್ಗ	2500	1095
151	ಸೌಂಡ್ಸ್ & ಲೈಟಿಂಗ್ಸ್	5000	1095
152	ಮೆಡಿಕಲ್ ಸ್ಟೋರ್ಸ್	3000	1095
153	ಸ್ಟೀಲ್ ಪಾತ್ರೆ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳ ಮಾರಾಟ ಅಂಗಡಿಗಳು ಸಿ-ವರ್ಗ	5000	1095
154	ದಿನಸಿ ಮಾರಾಟ ಸಹಿತ ಇತರೆ	5000	1095
155	ದ್ವಿ ಚಕ್ರ ವಾಹನಗಳ ಸರ್ವಿಸ್ ಸ್ಟೇಷನ್	2500	1095
156	ಮಾಲ್ ಗಳು	15000	5475
157	ಜನರಲ್ ಸ್ಟೋರ್ಸ್ & ಸ್ಟೇಷನರೀಸ್	2500	1095
158	ಸಭಾಂಗಣ	10000	5475
159	ವ್ಹೀಲ್ ಅಲೈನ್ ಮೆಂಟ್	1500	1095
160	ಮೊಬೈಲ್ ಸೇಲ್ಸ್ & ಸರ್ವಿಸ್ ನಡೆಸುವ ಬಗ್ಗೆ	3000	1095
161	ಇನ್ಸುರೆನ್ಸ್	2000	1095
162	ತಿಂಡಿ ತಿನಿಸುಗಳ ಮಾರಾಟ	2500	1095
163	ಪೆಟ್ರೋಲ್ ಪಂಪ್	5000	1095

164	ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟ	2500	1095
165	ಪೇಪರ್ ಪ್ಲಾಡಕ್ಟ್ಸ	1000	1095
166	ಸೈಬರ್	4000	1095
167	ಸೆಲೂನ್ 2 ಚೆಯರ್	1000	1095
168	ಸೆಲೂನ್ 4 ಚೆಯರ್	1500	1460
169	ಸೆಲೂನ್ 6 ಚೆಯರ್	2000	1460
170	ಜೀನಸು,ಸ್ಟೇಶನರಿ,ಪಾನೀಯ ಮಾರಾಟ	2000	1095
171	ಆಯುರ್ವೇದಿಕ್ ಉತ್ಪನ್ನಗಳ ಮಾರಾಟ	1000	1095
172	ವಾಹನಗಳ ಲೂಬ್ರಿಕೆಂಟ್ಸ್/ಬಿಡಿ ಭಾಗಗಳ ಮಾರಾಟ/ಆಯಿಲ್ ಸೆಂಟರ್	2000	1095
173	ಗ್ಲಾಸ್ ಕಟಿಂಗ್ ಶಾಪ್	2000	1095
174	ಐಸ್ ಕ್ರೀಂ ತಯಾರಿಕ ಘಟಕ	20000	3650
175	ಮರದ ಕೆತ್ತನೆ ಕೆಲಸ ಮತ್ತು ಮಾರಾಟ-ಶ್ರೇಣಿ-2	2500	1460
176	ಕೇಬಲ್ ನೆಟ್ ವರ್ಕ್ಸ್	2000	1095
177	ಟ್ಯೂಷನ್ ಕ್ಲಾಸ್ ನಡೆಸುವ ಕುರಿತು	2000	1095
178	ಸಮಾರಂಭ ಹಾಲ್ ನಡೆಸುವ ಬಗ್ಗೆ	5000	5475
179	ಚಪ್ಪಲಿ ಅಂಗಡಿ	1500	1095
180	ಸೋಲಾರ್ ಉಪಕರಣ ಮತ್ತು ಹೀಟರ್ ಮಾರಾಟ	2000	1095
181	ಲ್ಯಾಬೊರೇಟರಿ	1000	1095
182	Hospital	15000	9125
183	ತೆಂಗಿನ ಕೊಬ್ಬರಿ ಮಾರಾಟ	2000	1460
184	ಟೈಪಿಂಗ್ ಬೂತ್, ಕಂಪ್ಯೂಟರ್ ಟೈಪಿಂಗ್, ಅರ್ಜಿ ಬರವಣಿಗೆ	1500	1095
185	ಎರ್ ಕಂಡೀಶನ್ ಸರ್ವೀಸ್	2000	1095
186	ಗ್ರಾನೈಟ್, ಮಾರ್ಬಲ್ಸ್ ಮತ್ತು ಟೈಲ್ಸ್ ವ್ಯಾಪಾರ	5000	1095
187	ಕನ್ಸ್ಟ್ರಕ್ಷನ್ ಆಫೀಸ್	2000	1095
188	ಇಲೆಕ್ಟ್ರಾನಿಕ್ಸ್ & ಇಲೆಕ್ಟ್ರಿಕಲ್ ವ್ಯಾಪಾರದ ಬಗ್ಗೆ	2500	1095
189	ವುಡ್ ವರ್ಕ್ಸ್	2500	1095
190	ಕಂಪ್ಯೂಟರ್ ಸರ್ವಿಸ್	2500	1095
191	ಸ್ಟೀಲ್ ಪೈಪು ಮತ್ತು ರೇಲಿಂಗ್ಸ್ ವ್ಯವಹಾರ	2500	1095
192	ಜೀನು,ಜೀನು ಮಾಯಣ,ಜೀನು ಕೃಷಿ ಉಪಕರಣಗಳು	1000	1095
193	ಸೋಫಾ ರಿಪೇರಿ	2000	1095
194	ಇಂಟರ್ ಲಾಕ್ ತಯಾರಿಕೆ ಮತ್ತು ಮಾರಾಟ	5000	1095
195	ಮೊಬೈಲ್ ಸೇಲ್ಸ್ ಮತ್ತು ಸರ್ವೀಸ್	3000	1460
196	ಕಟ್ಲೇರಿ ವ್ಯಾಪಾರ	1000	1095
197	ಪವರ್ ಟೂಲ್ಸ್ ಮಾರಾಟ ಉದ್ದಿಮೆ	1500	1095
198	ಇಲೆಕ್ಟ್ರಾನಿಕ್ ಬಗ್ಗೆ	1000	1095
199	ದಿನಸಿ ವ್ಯಾಪಾರ ಹಾಗೂ ದಾಸ್ತನು	2500	1095
200	ಪೂಜಾ ಸಾಮಾಗ್ರಿಗಳ ಮಾರಾಟ	2000	1095
201	ಮೆಟಲ್ ಶಾಪ್	2000	1095
202	ಮರದ ಕೆತ್ತನೆಯ ಕೆಲಸ	2500	1095
203	ಫೋಟೋ ಫ್ರೆಂ ವರ್ಕ್	2000	1460
204	ಬೇಕರಿ ಮತ್ತು ಜನರಲ್ ಸ್ಟೋರ್ಸ್	3000	1825

205	ಗ್ರಾಫಿಕ್ ವರ್ಕ್ಸ್	1000	1095
206	ಕ್ಯಾಟರಿಂಗ್ ಶಾಮಿಯಾನ ಮತ್ತು ಸೌಂಡ್ಸ್	5000	1095
207	ಆಯುರ್ವೇದ ಚಿಕಿತ್ಸಾಲಯ	2000	1095
208	ಸ್ಟೈನ್ ಲೆಸ್ ಸ್ಟೀಲ್ & ವುಡ್ ಇಂಟೀರಿಯರ್ಸ್ ಬಗ್ಗೆ	2000	1095
209	ಹಣ್ಣು ಹಂಪಲು ಮಾರಾಟ	1000	1095
210	ಸೈನ್ ಬೋರ್ಡ್ ಮತ್ತು ಬ್ಯಾನರ್	3000	1095
211	ರಿಯಲ್ ಎಸ್ಟೇಟ್ ವ್ಯವಹಾರ	2500	1095
212	Software Development Type Setting	2000	1095
213	ಪೀಠೋಪಕರಣಗಳ ಮಾರಾಟ	3000	1095
214	ಕಂಪ್ಯೂಟರ್ ಸೇಲ್ಸ್ ಮತ್ತು ಸರ್ವಿಸ್ & ಜೆರಾಕ್ಸ್	3000	1095
215	ನರ್ಸರಿ	1000	1095
216	ಎ.ಸಿ ಮತ್ತು ರೆಫ್ರಿಜರೇಟರ್ ರಿಪೇರಿ	2500	1095
217	ಅಟೋ ಮೊಬೈಲ್ ಬಿಡಿ ಭಾಗಗಳು & ಲೂಬ್ರಿಕೇಂಟ್ ಮಾರಾಟದ ಬಗ್ಗೆ	3000	1095
218	ಎಮಿಷನ್ ಟೆಸ್ಟಿಂಗ್ ಸೆಂಟರ್	1000	1095
219	ಲೈಟಿಂಗ್ಸ್ (ಇಂಡಸ್ಟ್ರೀಸ್)	25000	1095
220	ಗೃಹಬಳಕೆಯ ಎಲೆಕ್ಟ್ರಾನಿಕ್ಸ್ ವಸ್ತುಗಳ ಮಾರಾಟ	4000	1095
221	ಕ್ಯಾಂಟೀನ್	1000	1095
222	ಸ್ಟೇಷನರಿ ಹಾಗೂ ಝೆರಾಕ್ಸ್	2000	1095
223	ಎಲೆಕ್ಟ್ರಾನಿಕ್ಸ್ ವಸ್ತುಗಳ ಮಾರಾಟ	3000	1095
224	ಸ್ಕ್ರೀನ್ ಪ್ರಿಂಟಿಂಗ್ಸ್	2000	1095
225	ಜನರಲ್ ಸ್ಟೋರ್ & ತರಕಾರಿ ವ್ಯಾಪಾರ	3000	1095
226	ಸ್ವೀಚಿಂಗ್ ಯೂನಿಟ್	2000	1095
227	ಪಾನ್ ಷಾಪ್	1000	1095
228	ಕಂಪ್ಯೂಟರ್ ತರಬೇತಿ ಕೇಂದ್ರ	2500	1095
229	ಸಾರಿಗೆ ವಹಿವಾಟು & ಕಮಿಷನ್ ಏಜೆಂಟ್ ಬಗ್ಗೆ	2500	1095
230	ಅಡಿಕೆ & ತೆಂಗಿನಕಾಯಿ ವ್ಯಾಪಾರ	3000	1095
231	ಪೇಂಟಿಂಗ್ ಅಂಗಡಿ	2000	1095
232	ಫ್ಯಾನ್ಸಿ ಮತ್ತು ಸಿದ್ಧ ಉಡುಪುಗಳ ಮಾರಾಟ	2500	1095
233	ಟಿ ವಿ ಸರ್ವಿಸ್ ಬಗ್ಗೆ	2500	1095
234	ಇಲೆಕ್ಟ್ರಾನಿಕ್ ಸೇಲ್ಸ್ ಮತ್ತು ರಿಪೇರಿ ಬಗ್ಗೆ	3000	1095
235	ತೆಂಗಿನ ಎಣ್ಣೆ ಮತ್ತು ಹಿಟ್ಟಿನ ಗಿರಣಿ	5000	1095
236	ಬ್ಯಾಟರಿ ಮತ್ತು ಇಲೆಕ್ಟ್ರಾ ನಿಕಲ್	2500	1095
237	ಫ್ಯಾನ್ಸಿ ,ಟಾಯ್ಸ್ , ಗಿಫ್ಟ್ ಐಟಂ ವ್ಯವಹಾರ	2000	1095
238	ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್	3000	1095
239	ತಂಪು ಪಾನೀಯ ತಯಾರಿ ಮತ್ತು ಮಾರಾಟ	2000	3650
240	ಟಯರ್ ಪಂಕ್ಚರ್ ವರ್ಕ್	2000	1095
241	ಕಟ್ಟಿಗೆ ವ್ಯಾಪಾರ & ಮೋಪುಗಳ ವ್ಯಾಪಾರ	3000	1095
242	ಕಾಸ್ಮೆಟಿಕ್ ಮಾರಾಟ	2000	1095
243	ಇಲೆಕ್ಟ್ರಿಕಲ್ ಗುತ್ತಿಗೆ ದಾರರ ಕಛೇರಿ	2500	1095
244	GYM,YOGA , YOGA THERAPY AND FITNESS CENTRE	5000	1095
245	ಮೊಬೈಲ್ ಡಿಸ್ಟ್ರಿಬ್ಯೂಷನ್ ಉದ್ದಿಮೆ	2000	1095

246	ನಶ್ಯ ತಯಾರಿಕಾ ಘಟಕ	2000	5475
247	ಪಂಪುಸೆಟ್,ಕೃಷಿಯಂತ್ರ,ಬಿಡಿಭಾಗಗಳ ಮಾರಾಟ ಮತ್ತು ಸೇವೆ	3000	1095
248	ಡಿಜಿಟಲ್ ಸ್ಟುಡಿಯೋ ಮತ್ತು ವೀಡಿಯೋ	2500	5475
249	ವಿದ್ಯುತ್ ಸಾಮಗ್ರಿಗಳ ದುರಸ್ಥಿ	2000	1095
250	ಯಂತ್ರೋಪಕರಣಗಳ ಮಾರಾಟ ಮತ್ತು ಸೇವೆ	5000	1095
251	ಕಮ್ಯೂನಿಕೇಷನ್ಸ್	2000	1095
252	ಡೆವಲಪರ್ಸ್	3000	1095
253	ಪುಸ್ತಕ ಪ್ರಕಾಶನ ಮತ್ತು ಪ್ರಕಟಣೆ	2500	1095
254	ಚರ್ಮ ವಾದ್ಯ ಪರಿಕರಗಳ ಮಾರಾಟ	2500	1095
255	ಗ್ಯಾಸ್ ಸ್ಟವ್ ಮತ್ತು ಗ್ಯಾಸ್ ಗೆ ಸಂಬಂಧಿಸಿದ ಬಿಡಿಭಾಗಗಳ ಮಾರಾಟ	750	1095
256	Hardwares & Plumbing	2500	1095
257	ಬೇಕರಿ ಉತ್ಪನ್ನಗಳ ಮಾರಾಟ	2000	1095
258	ಇಲೆಕ್ಟ್ರಾನಿಕ್ಸ್ ಅಂಗಡಿ	2500	1460
259	ಸಿರಾಮಿಕ್ಸ್ ಟೈಲ್ಸ್ ಮತ್ತು ಸ್ಯಾನಿಟರಿ ವಸ್ತುಗಳ ಮಾರಾಟ	5000	1460
260	ಟೀ ಸ್ಟಾಲ(ಸಣ್ಣದು)	1000	1095
261	Technology	1500	1095
262	Pizza Shop	2500	1095
263	ಜ್ಯೂಸ್ ಮತ್ತು ಸ್ನ್ಯಾಕ್ಸ್ ಅಂಗಡಿ ನಡೆಸುವ ಬಗ್ಗೆ	1000	1095
264	ಸಭಾಭವನ ಮತ್ತು ವಸತಿಗೃಹ	10000	3650
265	ಎಲೆಕ್ಟ್ರಿಕಲ್ಸ್ & ಹಾರ್ಡವೇರ್	3000	1460
266	ವಿಳ್ಳೆದೆಲೆ ,ಅಡಕಿ ಮತ್ತು ತೆಂಗಿನಕಾಯಿ ಮಾರಾಟ	1500	1095
267	ಸೂಪರ್ ಬಜಾರ್	5000	1095
268	ಡಿಜಿಟಲ್ ಆರ್ಟ್ಸ್ ಪ್ರಿಂಟರ್ಸ್ ಫ್ಲೆಕ್ಸ್ ಪ್ರಿಂಟಿಂಗ್ಸ್	1500	5475
269	ಫ್ರೇಮ್ ವರ್ಕ್ಸ್	2000	1095
270	ನಾಟಕ ನೃತ್ಯಗಳ ಉಡುಪುಗಳು ಬಾಡಿಗೆಗೆ	2000	1095
271	ಗೃಹಪಯೋಗಿ ವಸ್ತುಗಳ ಮಾರಾಟ	5000	1095
272	ಸಿ.ಸಿ ಕ್ಯಾಮೆರಾ ಮತ್ತು ಸೈರೆನ್ ಸೇಲ್ಸ್ & ಸರ್ವಿಸ್	3000	9125
273	ಕ್ಯಾಂಡೆಲ್ ತಯಾರಿಕಾ ಘಟಕ	2000	1460
274	ಹಾಲು ಖರೀದಿ ಮತ್ತು ಮಾರಾಟ ಮಾಡುವ ಬಗ್ಗೆ	3000	1095
275	ಪೇಪರ್,ಲೋಟ್,ತಟ್ಟೆ,ಇತರೆ ಸಾಮಾಗ್ರಿಗಳ ಮಾರಾಟ	2000	1095
276	ಪ್ಲಾಯವುಡ್ ಮತ್ತು ಹಾರ್ಡವೇರ್	3000	1095
277	ಲಾಜಿಸ್ಟಿಕ್ಸ್	2500	1095
278	ಇಲೆಕ್ಟ್ರೀಕಲ ರಿವೈಂಡಿಗ್ ವರ್ಕ್ಸ್	2000	1095
279	Optical Shop	3000	1095
280	ಪ್ಲೈವುಡ್ ಡೋರ್	2500	1095
281	ಹಾಲಿನ ಉತ್ಪನ್ನಗಳ ತಯಾರಿಕಾ ಘಟಕ	5000	1095
282	ಎಳೆ ನೀರು ವ್ಯಾಪಾರ	2000	1095
283	ಗೋಡಾನ್	3000	1095
284	ನೀರು ಶುದ್ಧೀಕರಣ ಘಟಕ ಮತ್ತು ಮಾರಾಟ (Non Packaging)	5000	1095
285	Online Services	3000	1460

286	ಕೃಷಿ ಉಪಕರಣ ಮತ್ತು ಬಿಡಿಭಾಗಗಳ ಮಾರಾಟ	2000	1095
287	ಕನ್ ಸ್ಟ್ರಕ್ಷನ್ ಆ್ಯಂಡ್ ಕನ್ಸಲ್ಟೆನ್ಸಿ	3000	1095
288	ಮಲ್ಟಿ ಸ್ಪೆಷಾಲಿಟಿ ಕ್ಲೀನಿಕ್	5000	1095
289	ಬ್ಯಾಟರಿ ಇನ್ ವರ್ಟರ್ & ಸೋಲಾರ್ ಸಿಸ್ಟಮ್ ಸೇಲ್ಸ್ & ಸರ್ವೀಸ	2500	1095
290	ಫೋಟೋ ಸ್ಟುಡಿಯೋ	2000	1095
291	ಗ್ಯಾರೇಜ್ & ಸರ್ವಿಸ್ ಸ್ಟೇಷನ್	3000	1095
292	ದಿನ ಪತ್ರಿಕೆ ವ್ಯಾಪಾರ	1000	1095
293	Curtains & Furnishing	2500	1460
294	ಪ್ಯಾಕೆಜಿಂಗ್ ಮೆಟೀರಿಯಲ್ಸ್	2000	1825
295	Printing, Packaging, Sign Board & Stationery Suppliers	2500	1095
296	ಲಾಂಡ್ರಿ ದೊಡ್ಡದು	3000	1095
297	ಅಗ್ರೋ ಕೆಮಿಕಲ್ ಸಂಗ್ರಹ & ಮಾರಾಟ ಸಣ್ಣದು	1500	1095
298	Sports Activity on Chargeable Basis	3000	1095
299	Pets Shop	2000	1095
300	ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರ	2000	1095
301	ಗ್ಯಾಸ್ ದಾಸ್ತಾನು ಮತ್ತು ವಿತರಣೆ	5000	1095
302	ಸೇವಾ ಕೇಂದ್ರ	2000	1095
303	ಡಿಸ್ಟ್ರಿಬ್ಯೂಟರ್ ಲೈನ್‌ಸೇಲ್	2000	1095
304	Footwear Shop	2500	1095
305	ಡಿಜಿಟಲ್ ಪ್ರಿಂಟಿಂಗ್ ಯೂನಿಟ್	2500	1095
306	ಇಲೆಕ್ಟ್ರಿಕಲ್ ಸ್ಕೂಟರ್ ಸೇಲ್	5000	1095
307	Steel Furniture Works (01 HP - 05 HP)	3000	1095
308	Steel Furniture Works (06 HP - 10 HP)	5000	1095
309	LPG ಆಟೋ ಗ್ಯಾಸ್ ಪಂಪ್	5000	1095
310	ವಿದ್ಯುತ್ ಗುತ್ತಿಗೆ ಕಛೇರಿ	2500	1095
311	Juice / Lassie Point And Snacks	2000	1095
312	ಎಂಬ್ರಾಯ್ಡರಿ ಮತ್ತು ಹೊಲಿಗೆ	1000	1095
313	ಸ್ಟೇಷನರಿ ಹಾಗೂ ಝೆರಾಕ್ಸ್	1500	1095
314	ಯಂತ್ರೋಪಕರಣಗಳ ಮಾರಾಟ ಮತ್ತು ಸೇವೆ	2000	1095
315	Alluminium Works (16HP-20HP)	2000	1825
316	ಇಲೆಕ್ಟ್ರಾನಿಕ್ ಸೇಲ್ಸ್ ಮತ್ತು ರಿಪೇರಿ ಬಗ್ಗೆ	2000	1095
317	Pets Shop	1000	1095
318	ಗ್ಲಾಸ್ ಕಟಿಂಗ್ ಶಾಪ್	2000	1095
319	ಇಲೆಕ್ಟ್ರೀಕಲ್ ಉದ್ಯಮೆ	3000	1095
320	LPG ಆಟೋ ಗ್ಯಾಸ್ ಪಂಪ್	2500	1095
321	ಸ್ಕ್ರೀನ್ ಪ್ರಿಂಟಿಂಗ್ಸ್	1000	1095
322	ಪೇಪರ್,ಲೋಟ್,ತಟ್ಟೆ,ಇತರೆ ಸಾಮಾಗ್ರಿಗಳ ಮಾರಾಟ	1000	1460
323	ಕಾಸ್ಮೆಟಿಕ್ ಮಾರಾಟ	1000	1095
324	Cafe	1000	1460
325	ಗುತ್ತಿಗೆದಾರರ ಕಛೇರಿ	2000	1095
326	ಸೆಂಟ್ರಿಂಗ್ ಮೆಟ್ರಿಲ್ ಶಾಪ್ಸ್ ಎ-ವರ್ಗ	2000	1095

327	ಸಂಚಾರಿ ವ್ಯಾಪಾರ	1000	1095
328	ಬ್ಯೂಟಿ ಪಾರ್ಲರ್	2000	1095
329	ಗೊಬ್ಬರದ ಅಂಗಡಿ	1500	1460
330	ತರಕಾರಿ ಅಂಗಡಿ	1000	1095
331	ವಾಚ್ಸ್ ಮಾರಾಟ/ ರಿಪೇರಿ	3000	1095
332	ಬಳೆಗಳ ಅಂಗಡಿ	750	1095
333	ವೆಲ್ಡಿಂಗ್ ಶಾಪ್	1000	1095
334	ಸೈಕಲ್ ಸರ್ವೀಸಸ್ ಮತ್ತು ರಿಪೇರಿ	750	1095
335	ಗ್ಯಾಸ್ ಸ್ಟೋವ್ ದುರಸ್ತಿ ಮತ್ತು ಬಿಡಿಭಾಗಗಳ ಮಾರಾಟ	3000	1095

336	ತಾತ್ಕಾಲಿಕವಾಗಿ ನಡೆಸುವ ಉದ್ದಿಮೆ (1 ತಿಂಗಳವರೆಗೆ)	500
337	ತಾತ್ಕಾಲಿಕವಾಗಿ ನಡೆಸುವ ಉದ್ದಿಮೆ (1 ತಿಂಗಳ ಮೇಲ್ಪಟ್ಟು 3 ತಿಂಗಳವರೆಗೆ)	1000
338	ತಾತ್ಕಾಲಿಕವಾಗಿ ನಡೆಸುವ ಉದ್ದಿಮೆ (3 ತಿಂಗಳ ಮೇಲ್ಪಟ್ಟು 6 ತಿಂಗಳವರೆಗೆ)	2000

ಶರ್ತಗಳು/ ದಂಡನೆಗಳು :

1. ಈ ನಿಯಮವು 2026–27 ನೇ ಸಾಲಿನ ಎಪ್ರೀಲ್ 01 ರಿಂದ ಅನ್ವಯ ಆಗುತ್ತದೆ.
2. ಬೈಲಾ ಅನುಮೋದನೆಗೊಂಡ ದಿನಾಂಕದಿಂದ ಪ್ರತಿ ಮೂರು ವರ್ಷಕೊಮ್ಮೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಶೇಕಡಾ 10% ಹೆಚ್ಚಿಸಲಾಗುವುದು.
3. ಸರ್ಕಾರದ ಬರುವ ನಿರ್ದೇಶನ/ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ಪಟ್ಟಣ ಪಂಚಾಯತ್‌ಗೆ ಇರುತ್ತದೆ.
4. ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಉದ್ಯಮಗಳಿಗೆ ಉದ್ದಿಮೆದಾರರು ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ ಅಂತಹ ಉದ್ದಿಮೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಆರೋಗ್ಯ ಅಧಿಕಾರಿಯವರು ಪರಿಶೀಲಿಸಿ ಅಂತಹ ಉದ್ದಿಮೆಗಳಿಗೆ ತಮ್ಮ ವಿವೇಚಾನಾಧಿಕಾರ ಬಳಸಿ ಪ್ರತ್ಯೇಕ ಶುಲ್ಕ ನಿಗಧಿಪಡಿಸಿ ವಸೂಲಾತಿ ಪಡೆಯಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.
5. ವ್ಯಾಪಾರಸ್ಥರು ಅವರ ಕೇಂದ್ರದದಲ್ಲಿ ಅವರ ವ್ಯಾಪಾರಕ್ಕೆ ಸಂಬಂಧಿಸಿದಂತೆ 01 ನಾಮಫಲಕವನ್ನು ಹೊರತಪಡಿಸಿ ಹೆಚ್ಚುವರಿಯಾಗಿ ಅಳವಡಿಸಲು ಯಾವುದೇ ನಾಮಫಲಕ ಯಾ ಜಾಹೀರಾತುಗಳಿಗೆ ಪ್ರತ್ಯೇಕ ಶುಲ್ಕ ಅನ್ವಯಿಸುತ್ತದೆ.
6. ಯಾವುದೇ ನಾಮಫಲಕ ಮತ್ತು ಜಾಹೀರಾತು ಫಲಕದಲ್ಲಿ ಪ್ರಥಮ ಆದ್ಯತೆಯಲ್ಲಿ ಕನ್ನಡವನ್ನು ಬಳಕೆ ಮಾಡತಕ್ಕದ್ದು.
7. ಉದ್ದಿಮೆ ಪರವಾನಿಗೆಯ ನಕಲು ಪ್ರತಿಯ ಅವಶ್ಯಕತೆವಿದ್ದಲ್ಲಿ ರೂ 300 ಮೊತ್ತವನ್ನು ಪಾವತಿಸಿ ಪಡೆದುಕೊಳ್ಳತಕ್ಕದ್ದು.
8. ಅರ್ಜಿದಾರರು ಗೃಹಬಳಕೆ/ಮನೆ ಉತ್ಪನ್ನಗಳ/ಕಛೇರಿ ವ್ಯವಹಾರ ಇತರೆ ಹಾನಿಯುಂಟು ಮಾಡದಂತಹ ಉದ್ದಿಮಯನ್ನು ವಸತಿ ಪ್ರದೇಶ/ಕಟ್ಟಡದಲ್ಲಿ ನಡೆಸಲು ಅರ್ಜಿ ಸಲ್ಲಿಸಿದಲ್ಲಿ ಪಟ್ಟಣ ಪಂಚಾಯಿತಿಯು ಈ ಬಗ್ಗೆ ಕೂಲಂಕುಷವಾಗಿ ಪರಿಶಿಲಿಸಿ ಸಮಂಜಸವಿದ್ದಲ್ಲಿ ಮುಖ್ಯಾದಿಕಾರಿ ವಿವೇಚನೆ/ಅಧಿಕಾರ ವ್ಯಾಪ್ತಿಯಲ್ಲಿ ಷರತ್ತು ವಿಧಿಸಿ, ಪರವಾನಿಗೆ ಶುಲ್ಕವನ್ನು ವಿಧಿಸಿ ತಾತ್ಕಾಲಿಕ ಪರವಾನಿಗೆಯನ್ನು ನೀಡಲು ಕ್ರಮವಹಿಸಬಹುದಾಗಿದೆ

9. ಕಟ್ಟಡ ಸಂಖ್ಯೆಯಿಲ್ಲದ ಅಥವಾ ತೆರೆದ ಸ್ಥಳದಲ್ಲಿ ತಾತ್ಕಾಲಿಕ ಶೆಡ್/ಕಟ್ಟಡದಲ್ಲಿ ಅಥವಾ ತಾತ್ಕಾಲಿಕ ಕಟ್ಟಡ ಸಂಖ್ಯೆ ಹೊಂದಿದ ಕಟ್ಟಡದಲ್ಲಿ ಉದ್ದಿಮೆ ಪರವಾನಿಗೆಯನ್ನು ಪಡೆಯಲು ಇಚ್ಛಿಸಿದಲ್ಲಿ ಪಟ್ಟಣ ಪಂಚಾಯತ್ ವು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸಮಂಜಸವಿದ್ದಲ್ಲಿ ಮುಖ್ಯಾಧಿಕಾರಿ ವಿವೇಚನೆ/ಅಧಿಕಾರ ವ್ಯಾಪ್ತಿಯಲ್ಲಿ ಷರತ್ತು ವಿಧಿಸಿ ಪರವಾನಿಗೆ ಶುಲ್ಕವನ್ನು ವಿಧಿಸಿ ತಾತ್ಕಾಲಿಕ ಪರವಾನಿಗೆಯನ್ನು ನೀಡಲು ಕ್ರಮವಹಿಸಬಹುದಾಗಿದೆ.
10. ಸರ್ಕಾರದ ಆದೇಶದಂತೆ ಉದ್ದಿಮೆದಾರರು ಪರವಾನಿಗೆಯನ್ನು 05 ವರ್ಷದ ತನಕದ ಅವಧಿಗೆ ಪಡೆಯಬಹುದು. ಯಾವುದೇ ಉದ್ದಿಮೆ ಪರವಾನಿಗೆಯ ಊರ್ಜಿತ ಅವಧಿಯು ಪ್ರತೀ ವರ್ಷದ ಮಾರ್ಚ್ ಅಂತ್ಯದವರೆಗೆ ಇರುತ್ತದೆ. ಅನಂತರ ಕಡ್ಡಾಯವಾಗಿ ನವೀಕರಣ ಮಾಡಬೇಕು.
11. ಉದ್ಯಮ ಪರವಾನಿಗೆ ದಂಡ ರಹಿತವಾಗಿ ನವೀಕರಣಕ್ಕೆ ಅರ್ಜಿ ಸಲ್ಲಿಸಲು ಮಾರ್ಚ್ ತಿಂಗಳ ಅಂತ್ಯದವರೆಗೆ ಇರುತ್ತದೆ ಎಂದು ತಿಳಿಯತಕ್ಕದ್ದು.
12. ಉದ್ದಿಮೆ ಪರವಾನಿಗೆ ರದ್ದುಗೊಳಿಸಲು ಒಂದು ತಿಂಗಳು ಮುಂಚಿತವಾಗಿ ಲಿಖಿತ ಅರ್ಜಿಯನ್ನು ಸಲ್ಲಿಸಬೇಕು.
13. ಒಂದು ವೇಳೆ ಉದ್ದಿಮೆ ಪರವಾನಿಗೆ ರದ್ದುಗೊಳಿಸದೆ ಉದ್ದಿಮೆಯನ್ನು ಮುಚ್ಚಿದಲ್ಲಿ ಪರವಾನಿಗೆ ಶುಲ್ಕ ಬಾಕಿ ಎಂದು ಪರಿಗಣಿಸಲಾಗುವುದು. ಸಂಬಂಧಿಸಿದ ಕಟ್ಟಡದ ಮಾಲೀಕರು/ಉದ್ದಿಮೆದಾರರು ಈ ಬಾಕಿಯನ್ನು ದಂಡ ಸಹಿತವಾಗಿ ಪಾವತಿಸುವುದು.
14. ಜುಲೈ ತಿಂಗಳ ನಂತರ ಶೇ. 25ರಂತೆ ದಂಡ ಮತ್ತು ಪ್ರತಿ ತಿಂಗಳಿಗೆ ಶೇ. 10ರಂತೆ ಏರಿಕೆಯಂತೆ ದಂಡವನ್ನು ಪಾವತಿಸಿ 06 ತಿಂಗಳೊಳಗೆ ನವೀಕರಿಸಿಕೊಳ್ಳತಕ್ಕದ್ದು. 06 ತಿಂಗಳ ನಂತರ ನವೀಕರಣ ಶುಲ್ಕ ದುಪ್ಪಟ್ಟು ದರದಲ್ಲಿ ಪಾತಿಸುವುದು.
15. ಪರವಾನಿಗೆ ರದ್ದುಗೊಂಡ ನಂತರ ಉದ್ದಿಮೆದಾರರು ಹೊಸದಾಗಿ ದಾಖಲೆಗಳನ್ನು ಸಲ್ಲಿಸಿ ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿ ಪರವಾನಿಗೆ ಪಡೆದುಕೊಳ್ಳತಕ್ಕದ್ದು ಎಂದು ತಿಳಿಯತಕ್ಕದ್ದು.
16. ಉದ್ಯಮ ಪರವಾನಿಗೆಯ ಪ್ರಮಾಣ ಪತ್ರ ನಮೂನೆ KMF ನಂ. 31 ನಿಯಮ (61)ರಲ್ಲಿ ಕಾಣಿಸಲಾದ ಎಲ್ಲಾ ಶರ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.
17. ಕಾಲಕಾಲಕ್ಕೆ ಪಟ್ಟಣ ಪಂಚಾಯತ್ ವಿಧಿಸುವ ಎಲ್ಲಾ ಶರ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.
18. ಉದ್ದಿಮೆ ಪರವಾನಿಗೆದಾರರು ಈ ಮೇಲಿನ ಉಪವಿಧಿಯ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ/ವ್ಯಾಪಾರ/ ವಹಿವಾಟು ನಡೆಸಿದ್ದಲ್ಲಿ ಅಂತಹ ಪ್ರಕರಣಗಳಿಗೆ ಅನಧಿಕೃತವೆಂದು ಪರಿಗಣಿಸಿ ಸ್ಥಗಿತಗೊಳಿಸುವ ಅಥವಾ ಕಾಲಾವಕಾಶ ನೀಡಿ ನಿಯಮ ಪ್ರಕಾರ ನೋಟಿಸು ಜ್ಯಾರಿಗೊಳಿಸಿ ನಿಗಧಿತ ಶುಲ್ಕದೊಂದಿಗೆ ದುಪ್ಪಟ್ಟು ದಂಡ ವಿಧಿಸುವ ಹಕ್ಕು ಪಂಚಾಯತ್‌ಗೆ ಇರುತ್ತದೆ ಎಂದು ತಿಳಿಯತಕ್ಕದ್ದು
19. ದಂಡ ಪಾವತಿಸದೇ ಇದ್ದು ವ್ಯವಹಾರ/ವ್ಯಾಪಾರ/ಉದ್ದಿಮೆಯನ್ನು ಮುಂದುವರಿಸಿದ್ದಲ್ಲಿ ನಿಯಮಾನುಸಾರ ಅಂತಹ ಉದ್ದಿಮೆಗಳನ್ನು ಮುಚ್ಚಲಾಗುವುದು.
20. ಯಾವುದೇ ವ್ಯಾಪಾರಕ್ಕೆ ಪರವಾನಿಗೆ ನೀಡಿಕೆಯು ಕಟ್ಟಡಗಳ ಸೂಕ್ತತೆ ಮತ್ತು ಉಪನಿಬಂಧನೆಗಳ ಹಾಗೂ ಚಾಲ್ತಿಯಲ್ಲಿರುವ ಇತರ ನಿಯಮಗಳಿಗೊಳಪಟ್ಟಿರುತ್ತದೆ.

ಪರಿಶಿಷ್ಟದಲ್ಲಿ ನಮೂದಿಸಲಾದ ಯಾವುದೇ ವ್ಯಾಪಾರಕ್ಕೆ ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಗೆ ಪರವಾನಿಗೆ ಬೇಕಿದ್ದಲ್ಲಿ ಈ ಕೆಳಗಿನ ದರದಲ್ಲಿ ಪರವಾನಿಗೆ ಶುಲ್ಕವನ್ನು ವಿಧಿಸಲಾಗುವುದು.

- ಆರು ತಿಂಗಳಿಗೆ ಮೀರದ ಅವಧಿಗೆ ಪೂರ್ಣ ನಿಗಧಿತ ಶುಲ್ಕ.
- ಆರು ತಿಂಗಳಿಗೆ ಮೀರದ ಅವಧಿಗೆ ನಿಗಧಿತ ಶುಲ್ಕದ 75 ಶೇಕಡಾ.
- 30 ದಿನಗಳಿಗೂ ಕಡಿಮೆ ಅವಧಿಗೆ ಅಥವಾ ಜಾತ್ರೆ, ಹಬ್ಬ ಇತ್ಯಾದಿ ವೇಳೆಗೆ ತಾತ್ಕಾಲಿಕ ಪರವಾನಿಗೆ ಶೇ. ನಿಗದಿತ ಶುಲ್ಕದ ಶೇಕಡಾ 50.

ಒಂದು ಕಟ್ಟಡ ಅಥವಾ ಗೋದಾಮಿನಲ್ಲಿ ಅಥವಾ ಯಾವುದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯಾಪಾರವನ್ನು ನಡೆಸಿದಲ್ಲಿ ಅಂತಹ ಪ್ರತಿಯೊಂದು ವ್ಯಾಪಾರಕ್ಕೂ ನಿಗಧಿತ ಶುಲ್ಕವನ್ನು ಪಾವತಿಸಿ ಪರವಾನಿಗೆಯನ್ನು ಪಡೆಯಬೇಕು. ಇದಕ್ಕೆ ಕಡ್ಡಾಯವಾಗಿ ಒಂದೇ ಕಟ್ಟಡದಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯಾಪಾರವನ್ನು

ನಡೆಸುವ ಸಂದರ್ಭದಲ್ಲಿ ಪ್ರತಿಯೊಂದು ವ್ಯಾಪಾರಕ್ಕೂ ವಿಧಿಸಲಾಗುವ ಶುಲ್ಕವನ್ನು ಸೇರಿಸಿ ಒಟ್ಟು ಮೊತ್ತವನ್ನು ವಸೂಲಿ ಮಾಡಿ ಪ್ರಮುಖ ವ್ಯಾಪಾರದ ವಿವರದ ಉದ್ದಿಮೆ ಪರವಾನಿಗೆ ನೀಡಲಾಗುವುದು.

5) "ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು (ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ತಡೆಗಟ್ಟುವಿಕೆ ಹಾಗೂ ತ್ಯಾಜ್ಯ ಬೇರ್ಪಡಿಕೆ, ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಕ್ರಮಬದ್ಧಗೊಳಿಸುವ) ನಿರ್ವಹಣೆ ಉಪವಿಧಿ–2026"

ಭಾಗ –1 ಬೃಹತ್ ತ್ಯಾಜ್ಯೋತ್ಪಾದಕರನ್ನು ಹೊರತು ಪಡಿಸಿ ತ್ಯಾಜ್ಯೋತ್ಪದಕರಿಂದ ಸಂದಾಯವಾಗಬೇಕಾದ ಘನತ್ಯಾಜ್ಯ ನಿರ್ವಹಣೆಯ ಸೇವಾಶುಲ್ಕ

ಕ್ರ ಸಂ	ತ್ಯಾಜ್ಯೋತ್ಪಾದಕರ ವಿಧ(ಬೃಹತ್ ತ್ಯಾಜ್ಯೋತ್ಪಾದಕರನ್ನು ಹೊರತು ಪಡಿಸಿ)	ಘನತ್ಯಾಜ್ಯ ಸೇವಾ ಶುಲ್ಕ	
		ವಾರ್ಷಿಕ	ಪರಿಷ್ಕರಣೆ ವಾರ್ಷಿಕ
ಎ)	**ವಸತಿ ಕಟ್ಟಡಗಳು (ವಾರ್ಷಿಕ ಶುಲ್ಕ)**		
1	500 ಚದರ ಅಡಿ ವರೆಗಿನ ವಿಸ್ತೀರ್ಣದ ವಾಸದ ಮನೆಗಳಿಗೆ	360/–	200.00
2	501 ರಿಂದ 1000 ಚದರ ಅಡಿ ವಿಸ್ತೀರ್ಣದ ವಾಸದ ಮನೆಗಳಿಗೆ	360/	300.00
3	1001 ರಿಂದ 2000 ವರೆಗೆ ಚದರ ಅಡಿ ವಿಸ್ತೀರ್ಣದ ವಾಸದ ಮನೆಗಳಿಗೆ	360/	480.00
4	2001 ಚದರ ಅಡಿ ವ್ಯಾಪ್ತಿಗಿಂತ ಹೆಚ್ಚಿನ ವಿಸ್ತೀರ್ಣದ ವಾಸದ ಮನೆಗಳಿಗೆ	360/	600.00
ಬಿ)	**ಖಾಲಿ ನಿವೇಶನ (ಒಂದು ವರ್ಷಕ್ಕೆ ವಿಸ್ತರಿಸಲಾದ ಶುಲ್ಕಗಳು)**		
	ಖಾಲಿ ನಿವೇಶನ (ವರ್ಷಕ್ಕೆ ಶುಲ್ಕ)	**0.10 ಪ್ರತಿ ಚದರ ಅಡಿಗೆ ಪ್ರತಿ ವರ್ಷ**	
ಸಿ)	**ವಾಣಿಜ್ಯೇತರ ಕಟ್ಟಡಗಳ (ವಾರ್ಷಿಕ ಶುಲ್ಕ)**	**ವಾರ್ಷಿಕ**	ಪರಿಷ್ಕರಣೆ **ವಾರ್ಷಿಕ**
1	1000 ಚದರ ಅಡಿ ವರೆಗಿನ ವಿಸ್ತೀರ್ಣದ ಕಟ್ಟಡಗಳು	360/–	600.00
2	1001 ರಿಂದ 3000 ಚದರ ಅಡಿ ವಿಸ್ತೀರ್ಣದ ಕಟ್ಟಡಗಳು	360/	1800.00
3	3001 ರಿಂದ 5000 ಚದರ ಅಡ ವಿಸ್ತೀರ್ಣದ ಕಟ್ಟಡಗಳು	360/	3000.00
4	5000 ಚದರ ಅಡಿ ವ್ಯಾಪ್ತಿಗಿಂತ ಹೆಚ್ಚಿನ ವಿಸ್ತೀರ್ಣದ ಕಟ್ಟಡಗಳು	360/	4200.00
ಡಿ)	**ವಾಣಿಜ್ಯ ಕಟ್ಟಡಗಳು (ಮಾಸಿಕ)**		
1	**ಉಪಹಾರ ಗೃಹಗಳು /ಹೋಟೆಲ್ ಗಳು /ಡಾಬಾಗಳು**		
	ಅ) 25 ಆಸನವುಳ್ಳವು	210.00	2520.00
	ಆ) 25 ಕ್ಕಿಂತ ಹೆಚ್ಚು ಆಸನವುಳ್ಳವು	350.00	4200.00
2	ಊಟದ ಮೆಸ್ಸುಗಳು, ಕ್ಯಾಂಟಿನ್‌ಗಳು/ಮೊಬೈಲ್ ಕ್ಯಾಂಟಿನ್	125.00	1500.00
3	ಬೇಕರಿ/ಬೇಕರಿ/ಜ್ಯೂಸ್ ಸೆಂಟರ್	125.00	1500.00
4	ಕಾಫೀ/ಟೀ ಸ್ಟಾಲ್/ಸಿಹಿ ತಿಂಡಿ ಮಾರಾಟಗಾರರು	50.00	600.00
5	ಫಾಸ್ಟ್ ಪುಡ್ ಅಂಗಡಿ	100.00	1200.00
6	ಕೈಗಾಡಿ/ತಳ್ಳುಗಾಡಿ/ಬೀದಿ ಬದಿ ವ್ಯಾಪಾರ	50.00	600.00
7	ಮದುವೆ ಹಾಲ್, ಸಭೆ ಸಮಾರಂಭಗಳನ್ನು ನಡೆಸುವ ಹಾಲ್, ಸಮುದಾಯ ಭವನಗಳು	1 ಕಾರ್ಯಕ್ರಮಕ್ಕೆ ರೂ. 500.00ರಂತೆ	

8	ವಸತಿ / ಗೃಹಲಾಡ್ಜ್	350.00	4200.00
9	ವೈನ್ / ಲಿಕ್ಕರ್ ಶಾಫ್	150.00	1800.00
10	ಪಬ್ ಗಳು, ಬಾರ್ & ರೆಸ್ಟೋರೆಂಟ್‌ಗಳು, ಕ್ಲಬ್ಬುಗಳು ಮತ್ತು ಅಂತಹ ಇತರೆ ಸ್ಥಳಗಳು	375.00	4500.00
11	ಎಲ್ಲಾ ವಿಧದ ಮಾಂಸದ ಅಂಗಡಿ (ಮಾಂಸ ತ್ಯಾಜ್ಯ ಹೊರತು ಪಡಿಸಿ)	150.00	1800.00
12	ಚಪ್ಪಲಿ, ಶೂ ಮಾರಾಟ ಮಳಿಗೆ	150.00	1800.00
13	ಬಟ್ಟೆ ಮಾರಾಟ ಅಂಗಡಿ	150.00	1800.00
14	**ಆಸ್ಪತ್ರೆ / ನರ್ಸಿಂಗ್ ಹೋಂ**		
	25 ಹಾಸಿಗೆಯವರೆಗೆ	200.00	2400.00
	25 ಹಾಸಿಗೆಯವರೆಗೆ ಮೀರಿದಂತಹ	400.00	4800.00
15	ಕ್ಲಿನಿಕ್	125.00	1500.00
16	ಮೆಡಿಕಲ್ ಸ್ಟೋರ್	75.00	900.00
17	ಹಾರ್ಡ್ ವೇರ್ ಅಂಗಡಿ	100.00	1200.00
18	ಸಿನಿಮಾ ಥಿಯೇಟರ್ / ಮಲ್ಟಿಪ್ಲೆಕ್ಸ್	250.00	3000.00
19	ಎಲ್ಲಾ ವಿಧದ ವಾಹನಗಳ ಶೋ ರಂ (ಹಾನಿಕಾರಕ ತ್ಯಾಜ್ಯ ಹೊರತುಪಡಿಸಿ)	250.00	3000.00
20	ಸರ್ವೀಸ್ ಸ್ಟೇಷನ್ / ಆಟೋ ಗ್ಯಾರೇಜ್ (ಹಾನಿಕಾರಕ ತ್ಯಾಜ್ಯ ಹೊರತುಪಡಿಸಿ)	170.00	2040.00
21	ಆಟೋ ಮೊಬೈಲ್ ಅಂಗಡಿ	75.00	900.00
22	ಹಣ್ಣು/ತರಕಾರಿ /ಹೂವು / ಎಳನೀರು ಹೋಲ್ ಸೇಲ್ ವರ್ತಕರು	500.00	6000.00
23	ತರಕಾರಿ ಅಂಗಡಿಗಳು	250.00	3000.00
24	ಹೂವಿನ ಅಂಗಡಿಗಳು	125.00	1500.00
25	ಹಣ್ಣು / ಎಳನೀರು ಅಂಗಡಿ	175.00	2100.00
26	ಜನರಲ್ ಸ್ಟೋರ್	100.00	1200.00
27	ಹೋಲ್ ಸೇಲ್ / ಸೂಪರ್ ಮಾರ್ಕೆಟ್ ಗಳು	250.00	3000.00
28	ಎಲ್ಲ ಬಗೆಯ ಗಿರಣಿಗಳು (ಮಿಲ್ ಗಳು) ವೀಟ್ ಗ್ರೈಂಡರ್	125.00	1500.00
29	ಸಾಮಿಲ್	250.00	3000.00
30	ಅಡಿಕೆ ಗಾರ್ಬಲ್	200.00	2400.00
31	ವಿದ್ಯಾರ್ಥಿ ನಿಲಯ (ಖಾಸಗಿ ಸಂಸ್ಥೆ / ಸಂಘಟನೆ)	300.00	3600.00
32	**ಪೇಯಿಂಗ್ ಗೆಸ್ಟ್**		
	ಅ) 15 ಬೆಡ್ ವರೆಗೆ	200.00	2400.00
	ಆ) 15 ಬೆಡ್ ಮೀರಿದ	400.00	4800.00
33	ಗ್ರಾನೈಟ್ ಅಂಗಡಿ	150.00	1800.00
34	ಬ್ಯಾಂಕುಗಳು,ಕಾರ್ಪೋರೇಟ್ ಕಛೇರಿಗಳು, ಶಿಕ್ಷಣ ಸಂಸ್ಥೆಗಳು, ಸಂಕೀರ್ಣಗಳು, ಹಣಕಾಸು ಸಂಸ್ಥೆಗಳು	100.00	1200.00
35	**ಅಂಗಡಿ ಮಳಿಗೆಗಳ ಸಂಕೀರ್ಣಗಳು , ಮಲ್ಟಿಪ್ಲೆಕ್ಸ್ ಗಳು , ಮಾರುಕಟ್ಟೆ ಸಂಕೀರ್ಣಗಳು , ಮಾಲ್ ಗಳು**		

	ಅ) 2500 ಚದರ ಅಡಿ ವರೆಗಿನ ಆವೃತ ಪ್ರದೇಶದ ವಿಸ್ತೀರ್ಣ	300.00	3600.00
	ಆ) 2501 ರಿಂದ 5000 ಚದರ ಅಡಿ ಆವೃತ ಪ್ರದೇಶದ ವಿಸ್ತೀರ್ಣ	600.00	7200.00
	ಇ) 5001 ರಿಂದ 10000 ಚದರ ಅಡಿ ಆವೃತ ಪ್ರದೇಶದ ವಿಸ್ತೀರ್ಣ	1250.00	15000.00
	ಈ) 10000 ಚದರ ಅಡಿ ವ್ಯಾಪ್ತಿಗಿಂತ ಹೆಚ್ಚಿನ ಆವೃತ ಪ್ರದೇಶದ ವಿಸ್ತೀರ್ಣ	2500.00	30000.00
36	ಗೋದಾಮುಗಳ ಮತ್ತು ಶೀತಲ ಕೇಂದ್ರಗಳ (ಹಾನಿಕಾರಕವಲ್ಲದ ತ್ಯಾಜ್ಯಗಳನ್ನು ಮಾತ್ರ ಒಳಗೊಡಿಂರುವಂತಹ	250.00	3000.00
37	ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಕಾರ್ಯಗಾರಗಳು(ಹಾನಿಕಾರಕಗಳಲ್ಲದವು ಮಾತ್ರ)	250.00	3000.00
38	**ಸಾರ್ವಜನಿಕ ಸ್ಥಳಗಳಲ್ಲಿ (ಒಂದು ಬಾಡಿಗೆ) ಸಮಾರಂಭಗಳು ಮತ್ತು ಸಭೆಗಳ ಸಂಬಂಧ ಮರುಪಾವತಿಸಬಹುದಾದ ಸ್ವಚ್ಛತಾ ಶೇವಣಿ (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ)**		
	ಅ) 100 ರಿಂದ 1000 ಜನ ಸಂದಣಿ	ಕಾರ್ಯಕ್ರಮಕ್ಕೆ ರೂ. 1250.00	
	ಆ) 1001 ರಿಂದ 10000 ಜನ ಸಂದಣಿ	ಕಾರ್ಯಕ್ರಮಕ್ಕೆ ರೂ. 3000.00	
	ಇ) 10000 ಕ್ಕಿಂತ ಹೆಚ್ಚಿನ ಜನ ಸಂದಣಿ	ಕಾರ್ಯಕ್ರಮಕ್ಕೆ ರೂ.12,500.00	
39	**ಸಾರ್ವಜನಿಕ ಸ್ಥಳಗಳಲ್ಲಿ (ಒಂದು ಬಾಡಿಗೆ) ಆಯೋಜಿಸಲಾಗುವ ಸಮಾರಂಭ ಮತ್ತು ಸಭೆಗಳಲ್ಲಿ ಉತ್ಪಾದನೆಯಾದ ಘನತ್ಯಾಜ್ಯದ ಸಂಗ್ರಹಣೆ , ಸಾಕಣೆ ಮತ್ತು ಸಂಸ್ಕರಣೆಗಾಗಿ ಸೇವಾಶುಲ್ಕ (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ)**		
	ಅ) 100 ರಿಂದ 1000 ಜನ ಸಂದಣಿ	ಕಾರ್ಯಕ್ರಮಕ್ಕೆ ರೂ. 500.00	
	ಆ) 1001 ರಿಂದ 10000 ಜನ ಸಂದಣಿ	ಕಾರ್ಯಕ್ರಮಕ್ಕೆ ರೂ. 1250.00	
	ಇ) 10000 ಕ್ಕಿಂತ ಹೆಚ್ಚಿನ ಜನ ಸಂದಣಿ	ಕಾರ್ಯಕ್ರಮಕ್ಕೆ ರೂ. 5000.00	
40	**ಕಟ್ಟಡ ನಿರ್ಮಾಣ ಹಾಗೂ ಕೆಡವುವಿಕೆ ತ್ಯಾಜ್ಯಗಳ ಸಂಗ್ರಹಣೆ , ಸಾಗಣೆ ಮತ್ತು ಸಂಸ್ಕರಣೆ**	ಸಾಮಾನ್ಯ ವಿಶೇಷ ಆದೇಶ / ಅಧಿಸೂಚನೆಯ ಮೇರೆಗೆ ನಗರ ಸ್ಥಳೀಯ ಸಂಸ್ಥೆಯ ಅಧಿಕೃತ ಆದೇಶ ಪ್ರಕಾರ / ವಿಶೇಷ ನಿಯಮದಂತೆ / ತೀರ್ಮಾನಿಸಿದಂತೆ	
41	**ಕಲ್ಯಾಣ ಮಂಟಪ , ಸಮುದಾಯ ಭವನ , ಹೋಟೆಲ್ , ಸಂಪೂರ್ಣವಾಗದ ಕಟ್ಟಡ / ತೆರೆದ ಸ್ಥಳಗಳು ಮಳಿಗೆ ಇತ್ಯಾದಿ ಪ್ರದೇಶಗಳ್ಲಿ ತಾತ್ಕಾಲಿಕವಾಗಿ ನಡೆಸುವ ಉದ್ದಿಮೆ ವಸ್ತು ಪ್ರದರ್ಶನ / ಮನೋರಂಜನೆ ಕಾರ್ಯಕ್ರಮದ ತ್ಯಾಜ್ಯ ವಿಲೇವಾರಿಗೆ**		
	ಅ) ಒಂದು ವಾರದ ಅವಧಿಗೆ	2500.00	
	ಆ) ಒಂದು ವಾರದ ಮೇಲೆ ಒಂದು ತಿಂಗಳ ಒಳಗೆ	10000	
	ಇ) ಒಂದು ತಿಂಗಳ ಮೇಲೆ	ಪ್ರತಿ ತಿಂಗಳಿಗೆ ₹10000.00ರಂತೆ	
42	**ನಗರಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ವಾಣಿಜ್ಯ ಕಟ್ಟಡಗಳಲ್ಲಿ ನಡೆಸುತ್ತಿರುವ ಎಲ್ಲಾ ವಿಧದ ಉದ್ದಿಮೆಗಳಿಗೆ (ಬಲ್ಕ್ ತ್ಯಾಜ್ಯ ಉತ್ಪಾದಕರನ್ನು ಹಾಗೂ ಮೇಲ್ಕಂಡ ಕ್ರ. ಸಂ 1 ರಿಂದ 40 ವರೆಗಿನ ವಿಧಗಳನ್ನು ಹೊರತು ಪಡಿಸಿ)**		
	ಅ) 250 ಚ.ಅಡಿ ವರೆಗೆ	61.00	730.00
	ಆ) 251 ರಿಂದ 500 ಚ .ಅಡಿ ವರೆಗೆ	70.00	840.00
	ಇ) 501 ರಿಂದ 1000 ಚ.ಅಡಿ ವರೆಗೆ	85.00	1020.00

	ಈ) 1001 ರಿಂದ 2000 ಚ.ಅಡಿ ವರೆಗೆ	110.00	1320.00
	ಉ) 2000 ಚ.ಅಡಿ ಗಿಂತ ಮೇಲ್ಪಟ್ಟು	ಪ್ರತಿ 500 ಚ.ಅ.ಗೆ 10% ಹೆಚ್ಚಳ	
43	**ಬೃಹತ್ ತ್ಯಾಜ್ಯೋತ್ಪಾದಕರಲ್ಲದವರಿಂದ ಅಂದರೆ ವಸತಿ ಪ್ರದೇಶ , ವಾಣಿಜ್ಯ ಹಾಗೂ ವಾಣಿಜ್ಯೇತರ ಚಟುವಟಿಕೆಗಳ ಬೃಹತ್ ತ್ಯಾಜ್ಯ (ಉಪವಿಧಿ 3(ಇ)ಮತ್ತು 6(9)ನೋಡಿ**	ಪ್ರತಿ ಕೆ.ಜಿ.ಗೆ 1.00	
44	**ಮೇಲಿನಂತೆ ಗುರುತಿಸಲಾದಂತಹ ಇತರ ಸ್ಥಳಗಳು ಮತ್ತು ಕಾರ್ಯ ಚಟುವಟಿಕೆಗಳು**	ಸಾಮಾನ್ಯ ವಿಶೇಷ ಆದೇಶ / ಅಧಿಸೂಚನೆಯ ಮೇರೆಗೆ ನಗರ ಸ್ಥಳೀಯ ಸಂಸ್ಥೆಯ ಅಧಿಕೃತ ಆದೇಶ ಪ್ರಕಾರ / ವಿಶೇಷ ನಿಯಮದಂತೆ / ತೀರ್ಮಾನಿಸಿದಂತೆ	
45	ನಗರ ಸ್ಥಳೀಯ ಸಂಸ್ಥೆಯಿಂದ ಹೊರತುಪಡಿಸಿದ ಪ್ರದೇಶ ಅಂದರೆ ಬಂದರು ಪ್ರಾಧಿಕಾರ , ವಿಶೇಷ ಆರ್ಥಿಕ ವಲಯ , ಕಂಟೋನ್ ಮೆಂಟ್, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇತ್ಯಾದಿಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯದ ಸಂಸ್ಕರಣೆ ಹಾಗೂ ವಿಲೇವಾರಿ ಶುಲ್ಕ	ಪ್ರತಿ ಕೆ ಜಿ ಗೆ 2.00	

ಭಾಗ –II ಬೃಹತ್ ತ್ಯಾಜ್ಯೋತ್ಪಾದಕರಿಂದ ಸಂದಾಯವಾಗಬೇಕಾದ ಘನತ್ಯಾಜ್ಯ ನಿರ್ವಹಣಾ ಸೇವಾಶುಲ್ಕ

[ಉಪವಿಧಿ6(2), 13(3)(iii), 20(3) 20(4)(iii), 20(5)(ii)ಮತ್ತು 25(1)ಗಳನ್ನು ನೋಡಿ]

ತಮ್ಮ ಆವರಣಗಳಲ್ಲಿ ತಮ್ಮ ಘನತ್ಯಾಜ್ಯವನ್ನು ಸಂಸ್ಕರಣೆ ಮಾಡಲಾರದಂತಹ ಅಥವಾ ಘನತ್ಯಾಜ್ಯ ನಿರ್ವಹಣಾ ಸೇವೆಗಳಿಗಾಗಿ ಅಧಿಕೃತ ಸೇವಾದಾತರನ್ನು ನೇಮಕ ಮಾಡಿಕೊಳ್ಳಲಾರದಂತಹ ಬೃಹತ್ ತ್ಯಾಜ್ಯೋತ್ಪಾದಕರುಗಳು ಸಂದಾಯ ಮಾಡಬೇಕಾದ ಘನತ್ಯಾಜ್ಯ ನಿರ್ವಹಣಾ ಸೇವಾ ಶುಲ್ಕವು ಕೆಳಕಂಡಂತಿರತಕ್ಕದ್ದು:

ಕ್ರ. ಸಂ	**ಘನತ್ಯಾಜ್ಯ ನಿರ್ವಹಣಾ ಸೇವೆಯ ವಿಧ**	**ಪ್ರತಿಯೊಬ್ಬ ಬೃಹತ್ ಘನತ್ಯಾಜ್ಯೋತ್ಪಾದಕನು ಪ್ರತಿ ತಿಂಗಳು ಸಂದಾಯ ಮಾಡಬೇಕಾದ ಶುಲ್ಕವು ಕೆಳಗೆ ವಿಧಿಸಿದಕ್ಕಿಂತ ಕಡಿಮೆ ಇರತಕ್ಕದ್ದಲ್ಲ.**
1	ಕೊಳೆಯಬಹುದಾದ ಜೈವಿಕ ತ್ಯಾಜ್ಯ, ಕೊಳೆಯಲಾದ ಜೈವಿಕ ತ್ಯಾಜ್ಯ, ಗೃಹೋತ್ಪಾದಿತ ಹಾನಿಕಾರಕ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	ಪ್ರತಿ ದಿನವೊಂದಕ್ಕೆ ಪ್ರತಿ ಕೆ.ಜಿ.ಗೆ ರೂ.3.00
2	ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	ಪ್ರತಿ ದಿನವೊಂದಕ್ಕೆ ಪ್ರತಿ ಕೆ.ಜಿ.ಗೆ ರೂ.2.00
3	ಕೊಳೆಯಲಾದ ಜೈವಿಕ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	ಪ್ರತಿ ದಿನವೊಂದಕ್ಕೆ ಪ್ರತಿ ಕೆ.ಜಿ.ಗೆ ರೂ. 1.00
4	ಗೃಹೋತ್ಪಾದಿತ ಹಾನಿಕಾರಕ ಮತ್ತು ನೈರ್ಮಲ್ಯ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	ಪ್ರತಿ ದಿನವೊಂದಕ್ಕೆ ಪ್ರತಿ ಕೆ.ಜಿ.ಗೆ ರೂ.1.00
5	ಬೃಹತ್ ತ್ಯಾಜ್ಯಗಳ ಸಂಗ್ರಹಣೆ , ಸಾಗಣೆ ಮತ್ತು ಸಂಸ್ಕರಣೆಗಾಗಿ	ಪ್ರತಿ ದಿನವೊಂದಕ್ಕೆ ಪ್ರತಿ ಕೆ.ಜಿ.ಗೆ ರೂ.1.00

ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳೂ ಸಹ ತಮ್ಮ ಕೊಳೆಯಬಹುದಾದ ಜೈವಿಕ ತ್ಯಾಜ್ಯವನ್ನು ಕಾಂಪೋಸ್ಟಿಂಗ್, ಬಯೋಮಿಥೆನೇಷನ್ ಅಥವಾ ಕೆಎಸ್‌ಪಿಸಿಬಿ/ಸಿಪಿಸಿಬಿಯಿಂದ ಅನುಮೋದಿಸಲ್ಪಟ್ಟ ಇತರ ಯಾವುದೇ ವಿಧಾನದಲ್ಲಿ ತಮ್ಮ ಆವರಣಗಳಲ್ಲಿ ಸಂಸ್ಕರಣೆ ಮಾಡಬಹುದು, ಅಥವಾ ತಮ್ಮ ಕೊಳೆಯುವಂತಹ ಜೈವಿಕ ತ್ಯಾಜ್ಯಗಳನ್ನು ತಾವೇ ನೇಮಿಸಿಕೊಂಡಂತಹ ಪಟ್ಟಿಯಲ್ಲಿರುವ ಸೇವಾದಾರರಿಂದ ನಿಗದಿ ಪಡಿಸಿದ ಸ್ಥಳಗಳಲ್ಲಿ ಸಂಸ್ಕರಣೆಗೊಳಿಸಬಹುದು. ಈ ಉಪನಿಯಮಗಳು ಜಾರಿಗೆ ಬಂದ ದಿನಾಂಕದಿಂದ ನಿಗಧಿತ ಅವಧಿಯೊಳಗೆ ಒಂದು ವೇಳೆ ಸ್ಥಳಾಭಾವದ ಕಾರಣದಿಂದಾಗಿ, ಬೃಹತ್ ತ್ಯಾಜ್ಯೋತ್ಪಾದಕರು ತಮ್ಮ ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳನ್ನು ಸಂಸ್ಕರಿಸಲು ಸಾಧ್ಯವಾಗದಿದ್ದಲ್ಲಿ, ಅಥವಾ ಪಟ್ಟಿಯಲ್ಲಿರುವಂತಹ ಸೇವಾದಾರನನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗಿದ್ದಲ್ಲಿ, ನಗರ ಸ್ಥಳೀಯ ಸಂಸ್ಥೆಯು ತಾನೇ ಸ್ವತಃ ಅಥವಾ ತನ್ನ ನಿಯೋಜಿಸಲ್ಪಟ್ಟ ವ್ಯಕ್ತಿ/ ಏಜನ್ಸಿಯ ಮೂಲಕ ಕೊಳೆಯಬಹುದಾದ ಜೈವಿಕ ತ್ಯಾಜ್ಯವನ್ನು ಬೃಹತ್ ತ್ಯಾಜ್ಯೋತ್ಪಾದಕರಿಂದ ಮನೆಬಾಗಿಲಿನಿಂದಲೇ ಸಂಗ್ರಹಣೆ ಮಾಡುವ ವ್ಯವಸ್ಥೆಯಡಿಯಲ್ಲಿ ದುಪ್ಪಟ್ಟು ಸೇವಾ ಶುಲ್ಕವನ್ನು ಪಾವತಿಸಿ ಸೇವೆಯನ್ನು ಪಡೆಯಬಹುದಾಗಿರುತ್ತದೆ.

- ತಮ್ಮದೇ ಆದ ವ್ಯವಸ್ಥೆಯಡಿಯಲ್ಲಿ ಕೊಳೆಯದ ಜೈವಿಕ ರಹಿತ ತ್ಯಾಜ್ಯವನ್ನು ಈ ಉಪನಿಯಮಗಳು ಮತ್ತು SWM ನಿಯಮಗಳಡಿಯಲ್ಲಿ ಸಂಸ್ಕರಣೆ ಮಾಡಬಹುದು.
- ಪಟ್ಟಿಯಲ್ಲಿರುವಂತಹ ಸೇವಾದಾರರನ್ನು ಅವರುಗಳು ಕೊಳೆಯದಂತಹ ಜೈವಿಕ ರಹಿತ ತ್ಯಾಜ್ಯವನ್ನು ಪರಸ್ಪರ ಒಪ್ಪಿಕೊಂಡ ನಿಬಂಧನೆಗಳಡಿಯಲ್ಲಿ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ ನೇಮಕ ಮಾಡಿಕೊಳ್ಳಬಹುದು.
- ಅವರುಗಳ ಜೈವಿಕ ರಹಿತ ತ್ಯಾಜ್ಯಗಳನ್ನು ಮನೆ ಬಾಗಿಲಿನಿಂದಲೇ ಸಂಗ್ರಹಣೆ ವ್ಯವಸ್ಥೆಯಡಿಯಲ್ಲಿನ ಭಾಗವಾಗಿ ನಗರ ಸ್ಥಳೀಯ ಸಂಸ್ಥೆಯ ಸಂಗ್ರಹಣಾ ವಾಹನಕ್ಕೆ SWM ಸೇವಾ ಶುಲ್ಕದ ಪಾವತಿಯ ಆಧಾರದ ಮೇಲೆ ನಿರೂಪಿಸಿರುವಂತೆ ಹಸ್ತಾಂತರಿಸಬಹುದು.

ಅನುಸೂಚಿ VIII

[ಉಪನಿಧಿ 5(2), 18(2)(i), 19(3), 24, 25(1) ಮತ್ತು 25(2) ಗಳನ್ನು ನೋಡಿ]
ಜುಲ್ಮಾನೆಗಳ ಪಟ್ಟಿ (ರೂ . ಗಳಲ್ಲಿ)

ಕ್ರ ಸಂ	ಪಾಲನೆ ಮಾಡದಿರುವಿಕೆ ಮತ್ತು ತ್ಯಾಜ್ಯೋತ್ಪಾದಕನ ವಿಧಿ	ದಂಡ/ ಜುಲ್ಮಾನೆಯು ಮೊದಲನೆ ಅಪರಾಧಕ್ಕೆ	ಎರಡನೆ ಮತ್ತು ನಂತರದ ಅಪರಾಧಕ್ಕೆ ದಂಡ
1	ಕಸ ಎಸೆಯುವುದು, ಉಗುಳುವುದು, ಸ್ನಾನ ಮಾಡುವುದು, ಮೂತ್ರವಿಸರ್ಜನೆ ಮತ್ತು ಬಯಲು ಮಲವಿಸರ್ಜನೆ ಮಾಡಿ ಸಾರ್ವಜನಿಕ ಉಪದ್ರವವನ್ನುಂಟು ಮಾಡುವುದು.	50.00	100.00
2	ಈ ಉಪವಿಧಿಗಳ ಅಡಿಯ ಅನ್ವಯ ಬೃಹತ್ ತ್ಯಾಜ್ಯ ಉತ್ಪಾದಕರು ಘನತ್ಯಾಜ್ಯದ ವಿಂಗಡಣೆ ಮಾಡಲು ವೈಪಲ್ಯ	200.00	300.00
3	ಈ ಉಪವಿಧಿಗಳ ಅನ್ವಯ ಬೃಹತ್ ತ್ಯಾಜ್ಯ ಉತ್ಪಾದಕರಲ್ಲದ ತ್ಯಾಜ್ಯೋತ್ಪಾದಕರುಗಳು ತ್ಯಾಜ್ಯಗಳನ್ನು ವಿಂಗಡಣೆ ಮಾಡದ / ಅಥವಾ ಹಸ್ತಾಂತರ ಮಾಡಲು ವಿಫಲತೆ	500.00	1000.00

4	ಕಟ್ಟುವಿಕೆ ಮತ್ತು ಕೆಡಹುವಿಕೆ ತ್ಯಾಜ್ಯವನ್ನು ವಿಂಗಡಿಸಿ ಹಸ್ತಾಂತರಿಸಲು ವಿಫಲರಾದ ಸಂಧರ್ಭದಲ್ಲಿ ಅಥವಾ ಕಟ್ಟುವಿಕೆ ಮತ್ತು ಕೆಡಹುವಿಕೆ ತ್ಯಾಜ್ಯವನ್ನು ನಿಯಮಾನುಸಾರ ನಿಗಧಿತ ರೀತಿಯಲ್ಲಿ ಶೇಖರಣೆ ಮಾಡಲು ವಿಫಲರಾದಲ್ಲಿ	ಪ್ರತಿ ಟನ್ 500.00	
5	ಬೃಹತ್ ತ್ಯಾಜ್ಯೋತ್ಪಾದಕನಿಂದ ಘನತ್ಯಾಜ್ಯವನ್ನು ಸುಡುವುದು, ಸುರಿಯುವುದು ಮತ್ತು ಅಥವಾ ಅನಧಿಕೃತವಾಗಿ ಹೂಳುವ ಮೂಲಕ ವಿಲೇವಾರಿ ಮಾಡಿದ್ದಲ್ಲಿ .	25,000.00 ವರೆಗೆ	
6	ಬೃಹತ್ ತ್ಯಾಜ್ಯೋತ್ಪಾದಕನಲ್ಲದ ಇತರ ಯಾರೇ ತ್ಯಾಜ್ಯೋತ್ಪಾದಕನಿಂದ ಘನತ್ಯಾಜ್ಯವನ್ನು ಸುಡುವುದು, ಸುರಿಯುವುದು ಮತ್ತು ಅಥವಾ ಅನಧಿಕೃತವಾಗಿ ಹೂಳುವ ಮೂಲಕ ವಿಲೇವಾರಿ ಮಾಡಿದ್ದಲ್ಲಿ .	5000.00 ವರೆಗೆ	
7	(ಗ್ರಹೋತ್ಪಾದಿತವಲ್ಲದ) ಮೀನು, ಕೋಳಿ ಮತ್ತು ಕಸಾಯಿಖಾನೆಯ ತ್ಯಾಜ್ಯವನ್ನು ಈ ಉಪವಿಧಿಗಳಡಿಯಲ್ಲಿ ನಿರ್ದಿಷ್ಟಪಡಿಸಿರುವ ಮಾದರಿಯಲ್ಲಿ ವಿಂಗಡಿಸಲು ಅಥವಾ ಸುರಿಯಲು ವಿಫಲತೆ ಮತ್ತು (ಗ್ರಹೋತ್ಪಾದಿತವಲ್ಲದ) ಮೀನು, ಕೋಳಿ ಮತ್ತು ಕಸಾಯಿಖಾನೆಯ ತ್ಯಾಜ್ಯಗಳನ್ನು ಸಾಮುದಾಯಿಕ ತೊಟ್ಟಿ, ಬುಟ್ಟಿಗಳು, ಸಾರ್ವಜನಿಕ ಸ್ಥಳ ಅಥವಾ ಇತರ ಯಾವುದೇ ಅನಧಿಕೃತ ಸ್ಥಳದಲ್ಲಿ ಸುರಿದಲ್ಲಿ.	50.00	100.00
8	ಬೀದಿ ಬದಿಯ ವ್ಯಾಪಾರಿಯು ಯಾವಯದೇ ಕಸದ ಬುಟ್ಟಿ / ತೊಟ್ಟಿಯಿಲ್ಲದೆ ಇರುವುದು ಮತ್ತು ಅಥವಾ ಅಂತಹ ವ್ಯಕ್ತಿಯು ಘನತ್ಯಾಜ್ಯವನ್ನು ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ವಿಂಗಡಣೆ ಮಾಡದೆ ಹಸ್ತಾಂತರಿಸದಿದ್ದಲ್ಲಿ.	100.00	200.00
9	ಬೃಹತ್ ತ್ಯಾಜ್ಯೋತ್ಪಾದಕನಾಗಿ ವರ್ಗೀಕರಣ ಮಾಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಉಪವಿಧಿಗಳ ಅಧ್ಯಾಯ VII ರಡಿಯಲ್ಲಿ ಸುಳ್ಳು ಸ್ವಯಂ ಘೋಷಣೆಯನ್ನು ಮಾಡಿಕೊಂಡಲ್ಲಿ	1000.00	
10	ಪೌರಾಯುಕ್ತರು / ಮುಖ್ಯಾಧಿಕಾರಿಗಳು ಕಾಲಕಾಲಕ್ಕೆ ರಸ್ತೆಗಳ , ಬಸ್ ನಿಲ್ದಾಣಗಳ ರೈಲ್ವೆ ಸ್ಟೇಷನ್ ಗಳ, ಬೀದಿಗಳ , ಆಟದ ಮೈದಾನಗಳ , ಪಾರ್ಕ್ ಗಳ ಹಾಗೂ ಇತರೆ ಸಾರ್ವಜನಿಕ ಸೌಲಭ್ಯದ ಆವರಣಗಳ್ಲಿ ಸ್ವಚ್ಛತೆ ಹಾಗೂ ಶುಚಿತ್ವ ಕಾಪಾಡುವ ನಿಟ್ಟಿನಲ್ಲಿ ಹೊರಡಿಸುವ ಕಾನೂನು ಬದ್ದ ನಿರ್ದೇಶನಗಳ ಪಾಲನೆ ಮಾಡಲು	100.00	200.00
11	ಕೊಳೆತ ಅಥವಾ ಕಳಪೆ ಅಥವಾ ಇತರೆ ಘನತ್ಯಾಜ್ಯ ವಸ್ತುಗಳ ಅನಿಯಮಿತ ಶೇಖರಣೆ	50.00	100.00
12	ಕಟ್ಟುವಿಕೆ ಮತ್ತು ಕೆಡವುವಿಕೆ ತ್ಯಾಜ್ಯದ ಅನಧಿಕೃತವಾಗಿ ಸುರಿಯುವುದು	500.00	1000.00

ಕಟ್ಟಡ ನಿರ್ಮಾಣ ಮತ್ತು ಕೆಡಹುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (Construction and Demolition Waste Management Rules (C&D) 2016) ರನ್ವಯ ಅ&ಆ ತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆಗೆ ಪರ್ಯಾಯ ಜಾಗದ ವ್ಯವಸ್ಥೆಯಾಗುವವರೆಗೂ ನೆಲಭರ್ತಿ ಜಾಗದಲ್ಲಿ C&D ತ್ಯಾಜ್ಯ ನಿರ್ವಹಣೆಗಾಗಿ ಅಗತ್ಯ ಜಾಗವನ್ನು ಮೀಸಲಿಡುವುದು.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಶೌಚಾಲಯ ಶುಚಿತ್ವಕ್ಕೆ ಸಕ್ಕಿಂಗ್ ವಾಹನ ಬಳಸುವಾಗ ಅಥವಾ ಸಕ್ಕಿಂಗ್ ವಾಹನ ಬಾಡಿಗೆ ನೀಡುವಾಗ ಈ ಕೆಳಗಿನ ಶರ್ತಗಳನ್ನು ಪಾಲಿಸುವುದು ಕಡ್ಡಾಯಗೊಳಿಸಿದೆ.

1) ಸಕ್ಕಿಂಗ್ ಮಾಡುವ ವಾಹನ ಬಾಡಿಗೆ ನೀಡುವ ಉದ್ಯಮಗೆ ಪಟ್ಟಣ ಪಂಚಾಯತಿನ ಪೂರ್ವಾನುಮತಿ ಪಡೆಯುವುದು.
2) ತ್ಯಾಜ್ಯ ನೀರು/ವಸ್ತುಗಳು ವಿಲೇವಾರಿ ಮಾಡುವ ಸ್ಥಳದ ಬಗ್ಗೆ ಪಟ್ಟಣ ಪಂಚಾಯತ್‌ಗೆ ಮಾಹಿತಿ ನೀಡುವುದು.
3) ಸಕ್ಕಿಂಗ್ ಮಾಡಿದ ತ್ಯಾಜ್ಯ ನೀರು /ವಸ್ತುವನ್ನು ವೈಜ್ಞಾನಿಕ ವಿಲೇವಾರಿ ಮಾಡಲಾಗುತ್ತಿದೆ ಎಂದು ದೃಡೀಕರಣ ಪತ್ರ ನೀಡುವುದು.
4) ಯಾವುದೇ ಸಾರ್ವಜನಿಕ ಕುಡಿಯುವ ನೀರು ಮೂಲಗಳಿಗೆ ಸೇರದಂತೆ ಎಚ್ಚರ ವಹಿಸುವುದು.
5) ಸಕ್ಕಿಂಗ್ ತ್ಯಾಜ್ಯಗಳಿಂದ ಸಾಂಕ್ರಮಿಕ ರೋಗಗಳು ಹರಡಿದಲ್ಲಿ ವಾಹನ ಮಾಲಕರೇ ಜವಾಬ್ದಾರಾಗಿರುತ್ತಾರೆ.
6) ಅನುಮತಿ/ಪರವಾನಿಗೆ ಪಡೆಯಲು ನಿಗದಿತ ಶುಲ್ಕ ಪಟ್ಟಣ ಪಂಚಾಯತಗೆ ಪಾವತಿಸುವುದು.
7) ಶೌಚಾಲಯ ಸ್ವಚ್ಚತೆಗೆ ಮಾನವರನ್ನು ಬಳಕೆ ಮಾಡುವುದು ಕಡ್ಡಾಯವಾಗಿ ನಿಷೇಧಿಸಿದೆ. ಯಂತ್ರಗಳ ಮೂಲಕ ಮಾತ್ರ ಸಕ್ಕಿಂಗ್/ಸ್ವಚ್ಚತೆ ನಿರ್ವಹಿಸುವುದು.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2026 ಈ ಕೆಳಗಿನ ಶರ್ತಗಳನ್ನು ಪಾಲಿಸುವುದು ಕಡ್ಡಾಯಗೊಳಿಸಿದೆ.

ರಾಜ್ಯ ಅಭಿಯಾನ ನಿರ್ದೇಶಕರು ಸ್ವಚ್ಛ ಭಾರತ ಮಿಷನ್ (ನಗರ) ಅಭಿವೃದ್ಧಿ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: 2117604/ಪೌ.ನಿ/ಘ.ವ.ನಿ/ಸಿ.ಸಿ/1/2026 ದಿ:07/05/2026 ರಲ್ಲಿ ಸೂಚಿಸಿರುವಂತೆ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಲ್ಲಿ **ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2026** ಜಾರಿಗೊಳಿಸಲು ನಿರ್ಣಯಿಸಲಾಗಿದೆ.(ಈ ನಿಯಮಗಳು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸುವ ಕುರಿತು ಸರ್ವೋಚ್ಚ ನ್ಯಾಯಲಯದಲ್ಲಿ ಸಿವಿಲ್ ಅಪೀಲ್‌ಅನ್ನು 6174/2023 ಪ್ರಕರಣದ ಆದೇಶದಲ್ಲಿ ಘನ ಸರ್ವೋಚ್ಚ ನ್ಯಾಯಲಯ ಆದೇಶದಲ್ಲಿ ನಿರ್ದೇಶಿಸಲಾಗಿರುತ್ತದೆ.

ನಿಯಮ: 1) ಸಾರ್ವಜನಿಕರು (ಮನೆ/ವಾಣಿಜ್ಯ/ಕೈಗಾರಿಕೆ) ಪಟ್ಟಣ ಪಂಚಾಯತ್ ನೀಡುವ ತ್ಯಾಜ್ಯವಸ್ತುಗಳನ್ನು ಕಡ್ಡಾಯವಾಗಿ ನಾಲ್ಕು ವಿಧದಲ್ಲಿ ಕಸದ ವಿಂಗಡನೆ ಮಾಡಬೇಕಾಗಿದೆ. (ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ಸ್ಪೆಷಲ್ ಕೇರ್ ತ್ಯಾಜ್ಯ)

ನಿಯಮ: 2) ಘನ ತ್ಯಾಜ್ಯ ನಿರ್ವಹಣ ನಿಯಮ 2026 ರನ್ವಯ ಬೃಹತ್ ತ್ಯಾಜ್ಯ ಉತ್ಪಾದಕರು(BWGS) ತಮ್ಮ ವ್ಯಾಪ್ತಿಯಲ್ಲಿ ಉತ್ಪಾದನೆಯಗುವ 'ತ್ಯಾಜ್ಯವನ್ನು ಸ್ವಂತ ಸ್ಥಳದಲ್ಲಿ ಸೂಕ್ತ ರೀತಿಯಲ್ಲಿ ಸಂಸ್ಕರಿಸುವುದು ಕಡ್ಡಾಯವಾಗಿರುತ್ತದೆ. ಸಂಸ್ಕರಣಾ ಸೌಲಭ್ಯವಿಲ್ಲದೇ ಇದ್ದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ನ ವಾರ್ಷಿಕಾಣುಸಾರ ಸಾಮಾನ್ಯ ಸಭೆಯ ನಿರ್ಣಯದಂತೆ ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು. ಈ ನಿಯಮಗಳನ್ನು ಉಲ್ಲಂಘಿಸುವ '(BWGS) ಗಳ ನೀರು/ವಿದ್ಯುತ್ ಸೇವೆಗಳನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ರೂ.10,000 ದಂಡ ವಿಧಿಸಲಾಗುವುದು.

ನಿಯಮ:3)ಮನೆ/ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ್ತವ್ಯವಿರುವರಲ್ಲಿಉತ್ಪತ್ತಿಯಾಗುವ ಸ್ಯಾನಿಟರಿ ತ್ಯಾಜ್ಯವನ್ನು Incinerators or common biomedical waste treatment facilities ಮೂಲಕ ವೈಜ್ಞಾನಿಕ

ರೀತಿಯಲ್ಲಿ ವಿಲೇಮಾಡುವುದು ಕಡ್ಡಾಯಗೊಳಿಸಿದೆ. ಸೂಕ್ತ ಸೌಲಭ್ಯವಿಲ್ಲದೇ ಇದ್ದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಕಾಲಕಾಲಕ್ಕೆ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇ ಮಾಡಲುಅವಕಾಶವಿದೆ.

ನಿಯಮ:4) ಸಾರ್ವಜನಿಕರು special care wasteಅನ್ನು ಸುರಕ್ಷಿತವಾಗಿ ಸಂಗ್ರಹಿಸಿ ವೈಜ್ಞಾನಿಕ ವಿಲೇವಾರಿ ಮಾಡುವುದು ಕಡ್ಡಾಯಗೊಳಿಸಿದೆ. ವಿಲೇವಾರಿಗೆ ಸೂಕ್ತ ಸೌಲಭ್ಯವಿಲ್ಲದೇ ಇದ್ದಲ್ಲಿ ಪಟ್ಟಣ ಪಂಚಾಯತ್‌ಗೆ ಕಾಲಕಾಲಕ್ಕೆ ನಿಗದಿಗೊಳಿಸಿದ ಶುಲ್ಕವನ್ನು ಪಾವತಿಸಿ ಪಟ್ಟಣ ಪಂಚಾಯತ್ ಸಂಗ್ರಹಣಾ ಕೇಂದ್ರಕ್ಕೆ ನೀಡುವುದು.

ನಿಯಮ:5) ಸಾರ್ವಜನಿಕರು (ವ್ಯಾಪಾರಸ್ಥರು/ವಸತಿ/ಅಪಾರ್ಟ್‌ಮೆಂಟ್/ಕೈಗಾರಿಕೆ) ಕಸವನ್ನು ಕಡ್ಡಾಯವಾಗಿ ನಿಯಮ 1ರಲ್ಲಿ ಸೂಚಿಸಿರುವಂತೆ ಕಸವನ್ನು/ತ್ಯಾಜ್ಯವಸ್ತುಗಳನ್ನು ವಿಂಗಡಿಸಿ ನೀಡುವುದು ಕಡ್ಡಾಯಗೊಳಿಸಿದೆ. ತಪ್ಪಿದಲ್ಲಿ ರೂ.500 ರಿಂದ 5000 ವರೆಗೂ ದಂಡ ವಿಧಿಸಲಾಗವುದು. ಅಲ್ಲದೇ ತಪ್ಪಿತಸ್ಥರ ಕಟ್ಟಡಕ್ಕೆ ನೀಡಿರುವ ವಿದ್ಯುತ್/ನೀರು ಸೌಲಭ್ಯವು ಸ್ಥಗಿತಗೊಳಿಸಲು ನಿರ್ಣಯಿಸಲಾಗಿದೆ.

ನಿಯಮ:6) ಸಾರ್ವಜನಿಕರ ರಸ್ತೆ ಬದಿಯಲ್ಲಿ/ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಎಸೆಯುವುದು/ಹಾಕುವುದು ನಿಷೇದಿಸಲಾಗಿದ್ದು, ತಪ್ಪಿತಸ್ಥರಿಗೆ ರೂ.500 ರಿಂದ 5000 ರ ವರೆಗೆದಂಡ ವಿಧಿಸಲಾಗುವುದು.

ನಿಯಮ:7) ಯಾವುದೇ ಸಾರ್ವಜನಿಕ ಸ್ಥಳಗಳಿಗೆ/ಮಳೆ ನೀರು ಚರಂಡಿಗಳಿಗೆ, ತ್ಯಾಜ್ಯ ನೀರನ್ನು ಹರಿಯಬಿಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ನಿಯಮ ಉಲ್ಲಂಘಿಸಿದ್ದಲ್ಲಿ ರೂ.5000 ರಿಂದ 50,000 ರವರೆಗೆ ದಂಡ ವಿಧಿಸುವುದಲ್ಲದೇ ವಿದ್ಯುತ್ ಹಾಗೂ ನೀರಿನ ಸಂಪರ್ಕವನ್ನು ಕಡಿತಗೊಳಿಸಲು ನಿರ್ಣಯಿಸಲಾಗಿದೆ.

ಅಧ್ಯಕ್ಷರು
ಕಿನ್ನಿಗೋಳಿ ಪಟ್ಟಣ ಪಂಚಾಯತ್
ಪಂಚಾಯತ್

ಮುಖ್ಯಾಧಿಕಾರಿ
ಕಿನ್ನಿಗೋಳಿ ಪಟ್ಟಣ

6) "ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಕಟ್ಟಡ ವಿನ್ಯಾಸಕಾರರ (ವಿವಿಧ ವರ್ಗ) ಪರವಾನಿಗೆ ನೀಡುವಿಕೆ ಮತ್ತು ನಿಯಂತ್ರಣ ಉಪವಿಧಿ–2026"

ವರ್ಗೀಕರಣ ಮತ್ತು ವಿದ್ಯಾರ್ಹತೆ: ವಿವಿಧ ತಾಂತ್ರಿಕ ಪರಿಣತಿ ಹೊಂದಿರುವ ವ್ಯಕ್ತಿಗಳು ಕಟ್ಟಡ ವಿನ್ಯಾಸಕಾರರಾಗಿ ಪರವಾನಿಗೆ ಪಡೆಯಲು ನಿಗಧಿ ನಮೂನೆಯಲ್ಲಿ ಸೂಕ್ತವೆಂದು ಕಂಡುಬರುವ ದಾಖಲೆಗಳನ್ನು ಪಟ್ಟಣ ಪಂಚಾಯತ್‌ಗೆ ಸಲ್ಲಿಸಿ ಪರವಾನಿಗೆ ಶುಲ್ಕಗಳನ್ನು ಪಾವತಿಸತಕ್ಕದ್ದು ಎಂದು ತಿಳಿಯುವುದು.

ವರ್ಗ	ತಾಂತ್ರಿಕ ಪರಿಣಿತಿ ಮತ್ತು ಅನುಭವ	ಕಟ್ಟಡ ನಿರ್ಮಾಣದ ಮಿತಿ	ಹಾಲಿದರ (ರೂ.)	ನಿಗಧಿಪಡಿಸಿದ ಪರವಾನಿಗೆ ಶುಲ್ಕ ವಾರ್ಷಿಕ
ಎಲ್.ಬಿ.ಡಿ. ಇಂಜಿನಿಯರ್	ಅಂಗೀಕೃತ ಸಂಸ್ಥೆ/ಮಂಡಳಿ/ ವಿಶ್ವವಿದ್ಯಾನಿಲಯದಿಂದ ಪಡೆದ ಬಿ.ಇ.(ಆರ್ಕ್) ಪದವಿ ಮತ್ತು ಹೆಚ್ಚಿನ	ಎಲ್ಲಾ ವಿಧಧ ಕಟ್ಟಡಗಳು, ಪರವಾನಿಗೆಗೆ	ರೂ. 2500/–	ರೂ. 3000/–

	ವಿದ್ಯಾರ್ಹತೆ, ಅಥವಾ ಇಂಡಿಯನ್ ಇನ್ಸ್‌ಟ್ಯೂಟ್ ಸಂಸ್ಥೆಯ ಸದಸ್ಯತ್ವ ಹೊಂದಿರುವ ವಾಸ್ತು ಶಿಲ್ಪ ಅಂತಹ ಸದಸ್ಯತ್ವ ಪಡೆಯಲು ಅರ್ಹತೆ ನೀಡಬಲ್ಲ ಡಿಗ್ರಿ ಅಥವಾ ಡಿಪ್ಲೋಮ ಪದವಿ ಹೊಂದಿರುವ ಅಥವಾ ವಾಸ್ತು ಶಿಲ್ಪ ಹುದ್ದೆ ಕರ್ನಾಟಕ ಲೋಕಸೇವಾ ಆಯೋಗದಿಂದ ಮಾನ್ಯತೆ ಪಡೆದ ವಿದ್ಯಾರ್ಹತೆ ಹಾಗೂ ಕಟ್ಟಡ ನಿರ್ಮಾಣ ಮತ್ತು ವಿನ್ಯಾಸ ತಯಾರಿಯಲ್ಲಿ ಕನಿಷ್ಠ 2 ವರ್ಷದ ಅನುಭವ ಅಂಗೀಕೃತ ಸಂಸ್ಥೆ/	ಸಂಬಂಧಿಸಿದ ಎಲ್ಲಾ ನಕ್ಷೆಗಳ ಮತ್ತು ಸಂಬಂಧಪಟ್ಟ ಎಲ್ಲಾ ಮಾಹಿತಿಗಳು ಮತ್ತು ಏಕ ನಿವೇಶನ, ಬಹು ನಿವೇಶನ ನೀಲಿನಕ್ಷೆ.		
	ಮಂಡಳಿ/ವಿಶ್ವವಿದ್ಯಾನಿಲಯ/ ದಿಂದ ಪಡೆದ ಡಿಪ್ಲೋಮಾ ಇನ್ ಸಿವಿಲ್ ಇಂಜಿನಿಯರ್/ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪ್ರಮಾಣ ಪತ್ರ ಕಟ್ಟಡ ನಿರ್ಮಾಣ ಮತ್ತು ವಿನ್ಯಾಸ ತಯಾರಿಯಲ್ಲಿ ಕನಿಷ್ಟ 3 ವರ್ಷದ ಅನುಭವ			
	ಅಂಗೀಕೃತ ಸಂಸ್ಥೆ/ ಮಂಡಳಿ/ ವಿಶ್ವವಿದ್ಯಾನಿಲಯ/ ದಿಂದ ಪಡೆದ ಸಿವಿಲ್ ಡ್ರಾಫ್ಟ್ ಮೆನ್ ಕೋರ್ಸ್, ಪ್ರಮಾಣ ಪತ್ರ, ಕಟ್ಟಡ ನಿರ್ಮಾಣ ಮತ್ತು ವಿನ್ಯಾಸ ತಯಾರಿಯಲ್ಲಿ ಕನಿಷ್ಟ 5 ವರ್ಷದ ಅನುಭವ			

ಶರ್ತಗಳು ಮತ್ತು ದಂಡನೆಗಳು

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14, 15, 17 ಮತ್ತು 73 ಹಾಗೂ ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 170 ಮತ್ತು 187 ರ ಪ್ರಕಾರ ಮತ್ತು ಕರ್ನಾಟಕ ಪುರಸಭೆಗಳ ಕಟ್ಟಡ ನಿಯಮಗಳು 1981 ಪ್ರಕಾರ ಖಾಸಗಿ ಸ್ಥಳವನ್ನು, ರಸ್ತೆಯ ಭಾಗವನ್ನು ಹಾಗೂ ಸ್ಥಳದ ನಕ್ಷೆಯನ್ನು ಸಹಾ ಸ್ಪಷ್ಟವಾಗಿ ಒದಗಿಸಲು ಬದ್ಧರಾಗಿರುತ್ತಾರೆ ಎಂದು ತಿಳಿಯತಕ್ಕದ್ದು.
2. ತಮಗೆ ನೀಡಲಾದ ಈ ಪರವಾನಿಗೆಯಂತೆ ಪರವಾನಿಗೆ ನಂಬ್ರವನ್ನು ಈ ಕಛೇರಿಗೆ ಸಲ್ಲಿಸುವ ಕಟ್ಟಡ ಪರವಾನಿಗೆಯ ನಕ್ಷೆಯಲ್ಲಿ ಕಡ್ಡಾಯವಾಗಿ ಅಳವಡಿಸುವುದು ಎಂದು ತಿಳಿಯತಕ್ಕದ್ದು. ಪರವಾನಿಗೆಗೆ ಅರ್ಜಿ ಸಲ್ಲಿಸುವವರು ನಿಗಧಿತ ನಮೂನೆ 1 ರಲ್ಲಿ ಅರ್ಜಿ ಸಲ್ಲಿಸತಕ್ಕದ್ದು, ಪರವಾನಿಗೆ ಮಾನ್ಯತೆಯು ಒಂದು ವರ್ಷದವರೆಗೆ ಇರುವುದು ಅಂದರೆ ಪತಿ ವರ್ಷ ಎಪಿಲ್ 01 ರಿಂದ ಮಾರ್ಚ್ 31ರ ವರೆಗೆ ಆಗಿರುತ್ತದೆ ಎಂದು ತಿಳಿಯತಕ್ಕದ್ದು.
3. ಪ್ರತಿ ವರ್ಷ ಪರವಾನಿಗೆಯನ್ನು ನವೀಕರಿಸುವುದು ಮತ್ತು ನವೀಕರಣ ಶುಲ್ಕವು ಪ್ರತಿ ಒಂದು ವರ್ಷದ ನವೀಕರಣಕ್ಕೆ ಮೇಲೆ ಕಾಣಿಸಿದ ಪ್ರಮಾಣದಲ್ಲಿರುವುದು ಪ್ರತಿ ವರ್ಷ ಎಪ್ರಿಲ್ 30ನೇ ತಾರೀಕಿಗೆ ಮುಂಚಿತವಾಗಿ ಮುಂದಿನ ವರ್ಷಕ್ಕೆ ನವೀಕರಿಸತಕ್ಕದ್ದು. ನವೀಕರಿಸದೆ ಇದ್ದಲ್ಲಿ ಪರವಾನಿಗೆಯು ರದ್ದುಗೊಂಡಿದೆ ಎಂದು ತಿಳಿಯತಕ್ಕದ್ದು. ಪರವಾನಿಗೆ ಪಡೆಯಲು ನಿಯಮದಂತೆ ಅರ್ಜಿಸಲ್ಲಿಸತಕ್ಕದ್ದು.

4. ಪರವಾನಿಗೆ ನಕ್ಷೆಗಳನ್ನು ಪುತ್ತೂರು ನಗರ ಯೋಜನಾ ಪ್ರಾಧಿಕಾರದ ವಲಯ ನಿಯಮಾವಳಿಯಂತೆ ಕಡ್ಡಾಯವಾಗಿ ರಚಿಸತಕ್ಕದ್ದು. ತಮ್ಮ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
5. ಜಾರಿಯಲ್ಲಿರುವ ಕಟ್ಟಡ ಪರವಾನಿಗೆಯ ನಿಯಮಗಳನ್ನು ಯಾವುದೇ ವ್ಯಕ್ತಿಯು ಪ್ರಾರಂಭದಲ್ಲಿ ಉಲ್ಲಂಘಿಸಿದಲ್ಲಿ ಪಟ್ಟಣ ಪಂಚಾಯತಿಯ ಪರವಾನಿಗೆಯನ್ನು ನಿಶ್ಚಿತ ಅವಧಿಯವರೆಗೆ ರದ್ದುಗೊಳಿಸಲಾಗುವುದು ಎಂದು ತಿಳಿಯತಕ್ಕದ್ದು.
6. ಅನುಮೋದಿತ ಪರವಾನಿಗೆ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸತಕ್ಕದ್ದು, ಪಟ್ಟಣ ಪಂಚಾಯತಿಯ ಪೂರ್ವಾನುಮತಿ ಇಲ್ಲದ ಅನುಮೋದಿತ ನಕ್ಷೆಗಳನ್ನು ಬದಲಾಯಿಸತಕ್ಕದ್ದಲ್ಲ ಎಂದು ತಿಳಿಯತಕ್ಕದ್ದು.
7. ಅನುಮೋದಿತ ನಕ್ಷೆಯ ವ್ಯತಿರಿಕ್ತವಾಗಿ ನಿರ್ಮಾಣ ಮಾಡತಕ್ಕದ್ದಲ್ಲ. ಅಧಿನಿಯಮದ ಉಪಬಂಧದ ನಿಯಮಗಳನ್ನು ಉಲ್ಲಂಘನೆ ಮಾಡುವುದರಿಂದ ಭರಿಸಬೇಕಾಗಿರುವ ತೊಂದರೆಗಳನ್ನು ಮಾಲಕರಿಗೆ ಮನವರಿಕೆ ಮಾಡುವುದು ಎಂದು ತಿಳಿಯತಕ್ಕದ್ದು.
8. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಕಾರ್ಯ ಪೂರ್ಣತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವ ಕಾರ್ಯ ಪೂರ್ಣತಾ ಪ್ರಮಾಣ ಪತ್ರ ಬಗ್ಗೆ ನಿಗಧಿತ ಅವಧಿಯೊಳಗಾಗಿ ನಗರಸಭೆಯ ಅಗತ್ಯತೆಗಳನ್ನು ಪೂರ್ಣಗೊಳಿಸತಕ್ಕದ್ದು.
9. ತಾವು ಮುಂದುವರಿಯುದಿಲ್ಲವೆಂದು ಪಂಚಾಯತ್‌ಗೆ ಲಿಖಿತವಾಗಿ ತಿಳಿಸುವವರೆಗೂ ಮೇಲ್ವಿಚಾರಣೆ ಕಾರ್ಯವನ್ನು ಮುಂದುವರಿಸಿರುವುದಾಗಿ ಭಾವಿಸಲಾಗುವುದು ಮತ್ತು ನಿರ್ಗಮನವನ್ನು ಪಟ್ಟಣ ಪಂಚಾಯತ್ ಒಪ್ಪಿಕೊಳ್ಳುವವರೆಗೆ ಕಾರ್ಯಗತಗೊಳಿಸಲಾದ ಕಟ್ಟಡ ಕಾಮಗಾರಿಗೆ ಪರವಾನಿಗೆದಾರರು ಹೊಣೆಗಾರರಾಗಿರುತ್ತಾರೆ ಎಂದು ತಿಳಿಯತಕ್ಕದ್ದು.
10. ಪ್ರತಿಯೊಂದು ಕಟ್ಟಡ ಪರವಾನಿಗೆಗೆ ಅರ್ಜಿ ಸಲ್ಲಿಸುವಾಗ ಮೇಲಿನ ಎಲ್ಲಾ ನಿಯಮಗಳನ್ನು ಪಾಲಿಸಲಾಗುವುದು ಎಂಬುದಾಗಿ ಪಟ್ಟಣ ಪಂಚಾಯತ್‌ಗೆ ಕರಾರು ಪತ್ರ ಸಲ್ಲಿಸತಕ್ಕದ್ದು.
11. ಅನುಮೋದಿತ ನಕ್ಷೆಗಿಂತ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣವಾದಲ್ಲಿ ಎಲ್.ಬಿ.ಡಿ. ಇಂಜಿನಿಯರ್ ಅದಕ್ಕೆ ಪೂರ್ಣ ಜವಾಬ್ದಾರರಾಗಿರುತ್ತಾರೆ.

7) "ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ವಿವಿಧ ರೀತಿಯ ಕಟ್ಟಡ ನಿರ್ಮಾಣ, ನಿವೇಶನ ಬಡಾವಣೆ ವಿನ್ಯಾಸ ಮತ್ತು ಇತರ ರಚನೆಗಳಿಗೆ ಅನುಮತಿ ನೀಡುವಿಕೆ ಹಾಗೂ ನಿಯಂತ್ರಣ ಉಪವಿಧಿ–2026"

	ಕಟ್ಟಡ ಪರವಾನಿಗೆ	ಹಾಲಿ	ಪರಿಷ್ಕೃತ
1	**ಕಟ್ಟಡ ಪರವಾನಿಗೆ ಅವಧಿ ಮತ್ತು ಶುಲ್ಕ ಪಾವತಿ**		
	ವಸತಿ	30.00 (ಚ.ಮೀ)	1 ವರ್ಷ ರೂ 35.00 ಚ.ಮೀ
	ವಸತಿ ಸಮುಚ್ಚಯ	30.00 (ಚ.ಮೀ)	1 ವರ್ಷ ರೂ 40.00 ಚ.ಮೀ
	ವಾಣಿಜ್ಯ	40.00 (ಚ.ಮೀ)	1 ವರ್ಷ ರೂ 45.00 ಚ.ಮೀ
	ಕೈಗಾರಿಕೆ	50.00 (ಚ.ಮೀ)	1 ವರ್ಷ ರೂ 50.00 ಚ.ಮೀ
	ಧಾರ್ಮಿಕ ಶೈಕ್ಷಣಿಕೆ ಕಟ್ಟಡ	15.00 (ಚ.ಮೀ)	1 ವರ್ಷ ರೂ 25.00 ಚ.ಮೀ
	ಆವರಣ ಗೋಡೆ	15.00 (ಮೀ)	1 ವರ್ಷ ರೂ 20.00 ಮೀ
	ಕೊಳಚೆ ನಿರ್ಮೂಲನದ ಬಗ್ಗೆ	ಚ.ಮೀ 1.00 ರೂ.	ಚ.ಮೀ ರೂ 1.00 ರಂತೆ
	ಕಾರ್ಮಿಕ ಕಲ್ಯಾಣ ನಿಧಿ	ಶೇ.1 ರಂತೆ (ಕಟ್ಟಡ	ಶೇ.1 ರಂತೆ (ಕಟ್ಟಡ ಮೌಲ್ಯ

		ಮೌಲ್ಯ 10 ಲಕ್ಷ ಮೇಲ್ಪಟ್ಟು)	10 ಲಕ್ಷ ಮೇಲ್ಪಟ್ಟು)
	ನಿವೇಶನ ಅಭಿವೃದ್ಧಿ ಶುಲ್ಕ	10.00 (ಚ.ಮೀ)	ರೂ.10.00 ಚ.ಮೀ ವಸತಿ) ರೂ.20 ಚ.ಮೀ (ವಾಣಿಜ್ಯ)
	ಪರಿಶೀಲನಾ ಶುಲ್ಕ	ಚ.ಮೀ 2.00 ರೂ	ರೂ.500
	ಅರಣೀಕರಣ	–	ಚ.ಮೀ ರೂ 5.00 ರಂತೆ
	ಕಟ್ಟಡ ಪೂರ್ಣತಾ ವರದಿ (occupancy Certificate)	ರೂ.500	ರೂ.1000 (ವಸತಿ) ರೂ.2000 (ವಾಣಿಜ್ಯ)
	ಪರವಾನಿಗೆ ಪಡೆಯದೆ ಕಾಮಗಾರಿ ಪ್ರಾರಂಭಿಸುವ ಬಗ್ಗೆ ದಂಡನಾ ಶುಲ್ಕ (ವಸತಿ)	–	ರೂ.2000
	ಪರವಾನಿಗೆ ಪಡೆಯದೆ ಕಾಮಗಾರಿ ಪ್ರಾರಂಭಿಸುವ ಬಗ್ಗೆ ವಾಣಿಜ್ಯ ಶುಲ್ಕ(ವಾಣಿಜ್ಯ)	–	ರೂ.10000
2	**ಪರವಾನಿಗೆ ನವೀಕರಣ ಅವಧಿ ಹಾಗೂ ಶುಲ್ಕ ಪಾವತಿ**		
	ವಸತಿ	30.00 (ಚ,ಮೀ)	1 ವರ್ಷ ರೂ 35.00 ಚ.ಮೀ
	ವಸತಿ ಸಮುಚ್ಚಯ	30.00 (ಚ,ಮೀ)	1 ವರ್ಷ ರೂ 40.00 ಚ.ಮೀ
	ವಾಣಿಜ್ಯ	40.00 (ಚ.ಮೀ)	1 ವರ್ಷ ರೂ 45.00 ಚ.ಮೀ
	ಕೈಗಾರಿಕೆ	50.00 (ಚ.ಮೀ)	1 ವರ್ಷ ರೂ 50.00 ಚ.ಮೀ
	ಧಾರ್ಮಿಕ, ಶೈಕ್ಷಣಿಕೆ ಕಟ್ಟಡ	15.00 (ಚ.ಮೀ)	1 ವರ್ಷ ರೂ 25.00 ಚ.ಮೀ

ಶರ್ತಗಳು:

- ನಿವೇಶನಗಳಿಗೆ ಖಾತೆ ದಾಖಲಿಸುವ ಸಂದರ್ಭದಲ್ಲಿ ಅಭಿವೃದ್ಧಿ ಶುಲ್ಕ ಪಾವತಿಸಿದ ರಶೀದಿಯನ್ನು ಕಟ್ಟಡ ಪರವಾನಿಗೆ ಪಡೆಯುವ ಸಂದರ್ಭದಲ್ಲಿ ಹಾಜರುಪಡಿಸುವುದು. ಹಾಜರುಪಡಿಸದೇ ಇದ್ದಲ್ಲಿ ಕಟ್ಟಡ ಪರವಾನಿಗೆ ಸಂದರ್ಭದಲ್ಲಿ ನಿವೇಶನಗಳಿಗೆ ವಿಧಿಸುವ ರಸ್ತೆ ಅಭಿವೃದ್ಧಿ ಶುಲ್ಕವನ್ನು ಪಾವತಿಸುವುದು.
- ಅಭಿವೃದ್ಧಿ ಹೊಂದದೇ ಇರುವ ಪ್ರದೇಶಗಳಲ್ಲಿ ಏಕನಿವೇಶನ ಅನುಮೋದನೆ ನೀಡುವ ಸಂದರ್ಭ ಅರ್ಥಿಕವಾಗಿ ಹಿಂದುಳಿದವರಿಗೆ ಶುಲ್ಕ ಪಾವತಿಸಲು ಕಷ್ಟಸಾಧ್ಯವಾಗುವುದನ್ನು ಪರಿಗಣನೆಗೆ ತೆಗೆದುಕೊಂಡು ಅವರಿಗೆ ಅನೂಕೂಲ ಆಗುವಂತೆ 0.05ಎಕ್ರೆ ವರೆಗಿನ ವಸತಿ ಉದ್ದೇಶದ ನಿವೇಶನಗಳಿಗೆ ಚದರ ಮೀಟರ್‌ಗೆ ₹50.00 ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳುವುದು

ಶರ್ತಗಳು:

1. ವಾಣಿಜ್ಯ ವಸತಿ ಸಮುಚ್ಚಯ ಹಾಗೂ ಕೈಗಾರಿಕಾ ಕಟ್ಟಡಗಳಿಗೆ ಫೌಂಡೇಶನ್ ಹಂತದಲ್ಲಿ ತಾತ್ಕಾಲಿಕ ಪರವಾನಿಗೆ ಪಡೆದು ಕಾಲಕಾಲಕ್ಕೆ ಪರವಾನಿಗೆ ಪ್ರಾಧಿಕಾರದಿಂದ ಪರಿಶೀಲನೆ ಮಾಡಿಸತಕ್ಕದ್ದು.
2. ರಸ್ತೆ ಅಗಲೀಕರಣಕ್ಕಾಗಿ ಮೀಸಲಿಟ್ಟ ಜಾಗವನ್ನು ಪಟ್ಟಣ ಪಂಚಾಯತಿಗೆ ಪರಿತ್ಯಾಜನಾ ಪತ್ರ ಮೂಲಕ ಕಡ್ಡಾಯವಾಗಿ ಹಸ್ತಾಂತರಿಸತಕ್ಕದ್ದು.

3. ಅಭಿವೃದ್ಧಿ ಶುಲ್ಕವನ್ನು ಆಯಾ ವರ್ಷದ ಲೋಕೋಪಯೋಗಿ ಇಲಾಖಾ ದರದಂತೆ ಬದಲಾವಣೆ ಮಾಡಲಾಗುವುದು.
4. 3000 ಚದರ ಅಡಿ ಹೆಚ್ಚಿನ ಕಟ್ಟಡಕ್ಕೆ ಮಳೆ ನೀರು ಕೊಯ್ಲು ಕಡ್ಡಾಯವಾಗಿ ಅಳವಡಿಸತಕ್ಕದ್ದು.
5. ಗಾಳಿ ಬೆಳಕಿನ ಮುಕ್ತ ಅವಕಾಶವನ್ನು ಕಟ್ಟಡಗಳಲ್ಲಿ ಕಲ್ಪಿಸಿ ಕೊಡುವಿಕೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
6. ಚರಂಡಿ, ಬಸಿಗಾಲುವೆ, ಹರಿಯುವ ನೀರು, ಪಾಯಿಖಾನೆ, ಶೌಚಾಲಯ ಮೂತ್ರಾಲಯ, ಇಂಗು ಗುಂಡಿ ಮುಂತಾದವುಗಳನ್ನು ಅಳವಡಿಸತಕ್ಕದ್ದು.
7. ಹೊಸ ಕಟ್ಟಡ, ಬಡಾವಣೆ, ಹೊಸ ಬೀದಿ ನಿರ್ಮಾಣ ಕುರಿತು ಮಾಹಿತಿ ಮತ್ತು ನಕಾಶೆ ನಿರ್ಧರಣೆ (ಕಲಂ.170, 187)ರಂತೆ ಮಾಡತಕ್ಕದ್ದು.
8. ಪಟ್ಟಣ ಪಂಚಾಯತ್ ನಿಯಂತ್ರಣದಲ್ಲಿರುವ ಸಾರ್ವಜನಿಕ ಉದ್ಯಾನವನ ಮತ್ತು ತೆರೆದ ಸ್ಥಳಗಳ ಅತಿಕ್ರಮಣ ಮಾಡಕೂಡದು.
9. ಪರವಾನಿಗೆ ಅನುಮತಿ, ಮಂಜೂರಾತಿ ಅವುಗಳ ನಕಲು ದಾಖಲೆಗಳ ಪರಿಶೀಲನೆ, ದಾಖಲೆ ಪತ್ರಗಳ ನಕಲು ನೀಡಿಕೆ ಆಕರಿಸುವ ಶುಲ್ಕವನ್ನು ಪಾವತಿಸತಕ್ಕದ್ದು.
10. ಬೈಲಾವನ್ನು ಉಲ್ಲಂಘಿಸಿದರೆ ತಪ್ಪಿತಸ್ಥನಿಗೆ ಕಲಂ:187ರಂತೆ ದಂಡ ಪಾವತಿಸತಕ್ಕದ್ದು, ಒಮ್ಮೆ ತಪ್ಪು ಮುಂದುವರಿಸುವಲ್ಲಿ ದಿನವಹಿ ದಂಡವನ್ನು ವಿಸ್ತರಿಸಲಾಗುತ್ತದೆ ಎಂದು ತಿಳಿಯತಕ್ಕದ್ದು.
(ಪಟ್ಟಣ ಪಂಚಾಯತಿ ನೋಟೀಸು ತಲುಪಿದ ನಂತರವೂ ತಪ್ಪು ಮುಂದುವರಿಸಿದಲ್ಲಿ ಪ್ರತಿ ದಿನ 100.00 ರೂಪಾಯಿಗಳಿಗೆ (ಕಲಂ 324 ಕೆ.ಮು.ಅ) ದಂಡ ಹಾಕಬಹುದು.)
11. ಅನುಮೋದನೆಗೊಂಡ ನಕ್ಷೆಯ ಫಲಕವನ್ನು ವಿವರಗಳೊಂದಿಗೆ ಕಡ್ಡಾಯವಾಗಿ ನಿರ್ಮಾಣ ಸ್ಥಳದಲ್ಲಿ ಸಾರ್ವಜನಿಕರಿಗೆ ತಿಳಿಯುವ ರೀತಿ ಪ್ರದರ್ಶಿಸತಕ್ಕದ್ದು.
12. ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸ ಬಡಾವಣೆ ನಿರ್ಮಿಸುವ ಬಗ್ಗೆ ಲಿಖಿತವಾಗಿ ಪೂರ್ವಾನುಮತಿ ಪಡೆದು ಯಾವುದೇ ವ್ಯಕ್ತಿ ನಿರ್ಮಿಸಬಹುದು. ಈ ಕೆಳಗಿನ ವಿವರಗಳನ್ನೊಳಗೊಂಡಂತೆ ಅರ್ಜಿಯೊಂದನ್ನು ಸಲ್ಲಿಸಬೇಕು. (ಯೋಜನಾ ಪ್ರಾಧಿಕಾರದ ನಿಯಮಾವಳಿಯಂತೆ)
    ಅ) ನಿವೇಶನ, ರಸ್ತೆ, ಬೀದಿ ಅಥವಾ ಮುಕ್ತ ಸ್ಥಳಾವಕಾಶಗಳನ್ನು ಕಲ್ಪಿಸತಕ್ಕದ್ದು.
    ಆ) ರಸ್ತೆಗಳ ಮೇಲ್ಮಟ್ಟದ ದಿಕ್ಕು ಮತ್ತು ವಿಸ್ತಾರ ಗುರುತಿಸತಕ್ಕದ್ದು,
    ಇ) ರಸ್ತೆಗಳ ಹೊಂದಾಣಿಕೆ ಮತ್ತು ಕಟ್ಟಡದ ಸಾಲು ಹಾಗೂ ರಸ್ತೆಗಳಿಗೆ ಹೊಂದಿಕೊಂಡಿರುವ ಪ್ರಸ್ತಾವಿಕ ನಿವೇಶನಗಳನ್ನು ನಕ್ಷೆಯಲ್ಲಿ ಗುರುತಿಸತಕ್ಕದ್ದು.
    ಈ) ಸಮತಟ್ಟು ನೆಲಗಟ್ಟು ಜೆಲ್ಲಿ ಹಾಸು ಮುಂಚಾಚು ತೋಡು, ಚರಂಡಿ, ಬಸಿಗಾಲುವೆ, ಸಂರಕ್ಷಣೆ ರಸ್ತೆ ದೀಪಗಳು ಮತ್ತು ಸಾಕಷ್ಟು ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಲಿರುವ ವ್ಯವಸ್ಥೆಗಳನ್ನು ನಕ್ಷೆಯಲ್ಲಿ ಗುರುತಿಸತಕ್ಕದ್ದು.
    ಉ) ರಸ್ತೆಯ ವಿಸ್ತಾರ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರ ಹಾಗೂ ಮೇಲೆ ವಿವರಿಸಿರುವ ಅಂಶಗಳು ಕಲಂ:170ರ ನಿಯಮಗಳ ಪ್ರಕಾರವಿರತಕ್ಕದ್ದು.
    ಊ) ಚರಂಡಿ ನಿರ್ಮಾಣವನ್ನು ಕಟ್ಟಡದ ಮಾಲಿಕರೇ ಮಾಡಿಕೊಳ್ಳುವುದು ಹಾಗೂ ಈ ಬಗ್ಗೆ ಕಛೇರಿಗೆ ಅಫಿದಾವಿತ್ ನೀಡತಕ್ಕದ್ದು.
13. ಹೊಸ ಬಡಾವಣೆ ನಿರ್ಮಾಣಕ್ಕೆ ಪಟ್ಟಣ ಪಂಚಾಯತಿಯು ಈ ಕೆಳಗಿನಂತೆ ತನ್ನ ಅನುಮತಿಯನ್ನು ನಿರಾಕರಿಸಬಹುದು.
    ಅ) ಪಟ್ಟಣ ಪಂಚಾಯತ್ ರಸ್ತೆ ಅಭಿವೃದ್ಧಿ ಯೋಜನೆಗಳು ಅಥವಾ ಇತರ ವಿಸ್ತರಣಾ ಅಭಿವೃದ್ಧಿ ಯೋಜನೆಗಳ ಕಾರ್ಯಾನುಷ್ಠಾನದಲ್ಲಿ ಇದು ತೊಡಕುಂಟು ಮಾಡುವುದೆಂದು ಅಭಿಪ್ರಾಯ ವ್ಯಕ್ತವಾಗಿರುವುದು.
    ಆ) ಈ ಅಧಿನಿಯಮ ಅಥವಾ ನಿಯಮಗಳು ಅಥವಾ ಬೈಲಾದ ಉಪಬಂಧಗಳ ಅನುಸಾರ ಪ್ರಾಸ್ತಾವಿಕ ರಸ್ತೆಗಳು ಇಲ್ಲದಿರುವುದು.
    ಇ) ಈಗಾಗಲೇ ತೆರೆದಿರುವ ರಸ್ತೆಯ ಒಂದು ಕೊನೆಗೆ ಪ್ರಸ್ತಾವಿಕ ರಸ್ತೆ ಸಂಪರ್ಕಿಸುವಂತೆ ವಿನ್ಯಾಸಗೊಳಿಸಿರುವುದು.

ಈ) ಪಟ್ಟಣ ಪಂಚಾಯತಿಯ ಹಾಲಿ ಅಥವಾ ಪ್ರಸ್ತಾವಿಕ ಅಥವಾ ಅಭಿವೃದ್ಧಿ ಯೋಜನೆಯೊಂದಿಗೆ ಪ್ರಶ್ನಿತ ಬಡಾವಣೆ ಸರಿಹೊಂದದೆಂದು ಅಭಿಪ್ರಾಯ ವ್ಯಕ್ತವಾಗಿರುವುದು(ಕಲಂ 170)

14. ಹೊಸ ಬಡಾವಣೆ ನಿರ್ಮಾಣಕ್ಕೆ ಅನುಮತಿ ಕೋರಿ ಸಲ್ಲಿಸಿದ ಅರ್ಜಿ ವಿಲೆವಾರಿಗೆ ಅರ್ಜಿ ಸಲ್ಲಿಸಿದ ದಿನಾಂಕದಿಂದ 06 ತಿಂಗಳ ಒಳಗಾಗಿ ಪಟ್ಟಣ ಪಂಚಾಯತ್ ಅನುಮತಿ ನೀಡಿ ಅಥವಾ ತಿರಸ್ಕರಿಸಿ ವಿಲೇವಾರಿ ಮಾಡಲಾಗುವುದು. (ಕಲಂ 170)

15. ಪೂರ್ವಾನುಮತಿಯನ್ನು ಪಡೆಯದೆ ಬಡಾವಣೆ ಬೀದಿ ಕಟ್ಟಡ ಮುಂತಾದವುಗಳ ನಿರ್ಮಾಣ ಬದಲಾವಣೆ ಅಥವಾ ನಾಶ ಪಡಿಸಿದರೆ ಆ ವ್ಯಕ್ತಿಗೆ ಷೋಕಾಸ್ ನೋಟೀಸ್ ನೀಡಿ ವಿವರಣೆ ಕೋರಿ ವಿಚಾರಣೆ ನಡೆಸಿ ಅಂತಹ ಲೋಪವನ್ನು ಸರಿಪಡಿಸುವಂತೆ ಆದೇಶಿಸಬಹುದು. ಜೊತೆಗೆ ದಿನವೊಂದರ ರೂ 100/–ರಂತೆ ದಂಡ ವಿಧಿಸಬಹುದು.(ಕಲಂ 170, 171)

ಹೊಸ ಬಡಾವಣೆ ನಿರ್ಮಾಣಕ್ಕೆ ಅನುಮತಿ ಪಡೆದ ನಂತರ ನಿಯಮಾನುಸಾರ ಕಾಮಗಾರಿ ನಡೆಯದಿದ್ದಲ್ಲಿ ಅಂತಹವರಿಗೆ ನೋಟೀಸು ಜ್ಯಾರಿ ಮಾಡಿ ಆಗಿರುವ ಲೋಪವನ್ನು ಗೊತ್ತು ಪಡಿಸಿದ ಅವಧಿಯಲ್ಲಿ ಪರಿವರ್ತಿಸುವಂತೆ ತಿಳಿಸಬಹುದು. ಅವರು ನಿಗದಿತ ಅವಧಿಯಲ್ಲಿ ಸರಿಪಡಿಸದಿದ್ದಲ್ಲಿ ಸ್ವತಃ ಸೂಕ್ತ ಕ್ರಮ ಜರುಗಿಸಿ ಭರಿಸಿದ ಖರ್ಚು ವೆಚ್ಚಗಳನ್ನು ತುಂಬಿಕೊಡುವಂತೆ ತಪ್ಪಿತಸ್ಥ ವ್ಯಕ್ತಿಗೆ ಆದೇಶಿಸಲಾಗುವುದು.(ಕಲಂ 170, 172)

16. ಬೀದಿ ಮೂಲೆ ನಿವೇಶನದಲ್ಲಿನ ಕಟ್ಟಡ ನಿರ್ಮಿಸಲು ಅನುಮತಿ ನೀಡುವಾಗ ಸಾರ್ವಜನಿಕ ಅನುಕೂಲತೆ, ಸೌಕರ್ಯವನ್ನು ಗಮನಿಸಿ ಅಗತ್ಯ ಎತ್ತರದವರೆಗೆ ಮತ್ತು ವಿಸ್ತೀರ್ಣದವರೆಗೆ ಜಾಗವನ್ನು ಸ್ವಾಧೀನಪಡಿಸಿಕೊಂಡು ನಿವೇಶನದ ಮಾಲಕರಿಗೆ ಪ್ರಮಾಣಾನುಸಾರ ನಷ್ಟ ಪರಿಹಾರವನ್ನು ವಸೂಲು ಪಡೆಯಲಾಗುವುದು, (ಕಲಂ 183)

17. ಪಟ್ಟಣ ಪಂಚಾಯತಿಯಿಂದ ಲಿಖಿತ ಒಪ್ಪಿಗೆ ಪಡೆಯದೆ ಕಟ್ಟಡದ ಮೇಲ್ಚಾವಣೆ ಮತ್ತು ಗೋಡೆಗಳನ್ನು ಹುಲ್ಲು ಮರ, ಬಟ್ಟೆ ಕ್ಯಾನ್ವಾಸ್, ಎಲೆ, ಚಾಪ ಅಥವಾ ಇವರ ದಹಿಸುವ ಪದಾರ್ಥಗಳಿಂದ ನಿರ್ಮಿಸಬಾರದು ಯಾವುದೇ ವ್ಯಕ್ತಿ ಈ ನಿಯಮ ಉಲ್ಲಂಘಿಸಿದಲ್ಲಿ ಯೋಗ್ಯ ಕಾಲಾವಧಿಯಲ್ಲಿ ಅದನ್ನು ತೆಗೆದು ಹಾಕುವಂತೆ ನೋಟೀಸು ನೀಡಲಾಗುವುದು ಹಾಗೂ ಆ ವ್ಯಕ್ತಿಗೆ ರೂ 2000,00 ದಂಡ ವಿಧಿಸಲಾಗುವುದು. ಒಮ್ಮೆ ಮುಂದುವರೆದಲ್ಲಿ ಲೋಪ ಸರಿಪಡಿಸುವರೆಗೆ ದಿನಂಪ್ರತಿ 100.00 ರೂಪಾಯಿಗಳಿಗೆ ದಂಡ ವಿಧಿಸಲಾಗುವುದು(ಕಲಂ 184)

18. ಕಟ್ಟಡದ ಮಟ್ಟ: ಯಾವುದೇ, ಕಟ್ಟಡ ಚರಂಡಿ ಮಟ್ಟಕ್ಕಿಂತ ಕೆಳಗಿರಬಾರದು ಅದರ ನೀರಿನ ಅಥವಾ ತ್ಯಾಜ್ಯದ ಹರಿವು ಚರಂಡಿ ಅಥವಾ ಒಳಚರಂಡಿ ಸಂಪರ್ಕಿಸುವಂತೆಬೇಕು (ಕಲಂ 185).

19. ಕಟ್ಟಡದ ಅಥವಾ ಪುನರ್ ನಿರ್ಮಾಣ ಅಥವಾ ನವೀಕರಣ ಅಥವಾ ಬದಲಾವಣೆ ಮಾಡಬೇಕಾದರೆ ಕಾಮಗಾರಿಯನ್ನು ಆರಂಭಿಸುವ ಮೊದಲು ಪಟ್ಟಣ ಪಂಚಾಯತಿಗೆ ಪ್ರಸ್ತಾವಿತ ಕಟ್ಟಡಕ್ಕೆ ಸಂಬಂಧಿಸಿದ ನಿವೇಶನ ನಕ್ಷೆ, ಅಡಿಪಾಯದ ಮಟ್ಟ, ಕಟ್ಟಡ ವಿಸ್ತೀರ್ಣ ವಿನ್ಯಾಸ, ಗಾಳಿ, ಬೆಳಕು ವ್ಯವಸ್ಥೆ, ನೆಲಮಾಳಿಗೆಯ ಮಟ್ಟ, ಚರಂಡಿ, ಪಾಯಿಖಾನೆ, ಇಂಗುಗುಂಡಿ ಮತ್ತು ಕಟ್ಟಡಕ್ಕೆ ಬಳಸಲು ಸಾಮಗ್ರಿಗಳು ವಿವರಗಳನ್ನು ಒದಗಿಸಿ ಅದರ ಅನುಮತಿ ಪಡೆದು ಕಾಮಗಾರಿ ಆರಂಭಿಸಬೇಕು.(ಕಲಂ 187)

20. ಅರ್ಜಿದಾರನು ಅನುಮತಿ ಪಡೆದ ಅಥವಾ ಪಡೆಯಲಾಗಿದೆಯೆಂದು ಪರಿಭಾವಿಸಿದ ದಿನದಂದು ಒಂದು ವರ್ಷದ ಒಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. (ಕಲಂ 187 ಕ.ಮು.ಅ)

21. ಪರವಾನಿಗೆ ಪಡೆದ ಒಂದು ವರ್ಷದೊಳಗೆ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದು, ಇಲ್ಲವಾದಲ್ಲಿ ಪರವಾನಿಗೆ ಶುಲ್ಕದ ಜೊತೆ ಶೇ.10ರಂತೆ ಹೆಚ್ಚುವರಿಯಾಗಿ ಪ್ರತಿ ವರ್ಷಕ್ಕೆ ದಂಡ ವಸೂಲಿ ಪಡೆದು ನವೀಕರಿಸಲಾಗುವುದು ಈ ನಿಯಮ ಕಾಮಗಾರಿ ಪ್ರಾರಂಭಿಸದ ಪರವಾನಿಗೆದಾರರಿಗೆ ಅನ್ವಯಿಸುತ್ತದೆ.

22. ಖಾಸಗಿ ವಿನ್ಯಾಸ ಅನುಮೋದನೆಗೆ ಅಭಿವೃದ್ಧಿ ಪಡಿಸುವಿಕೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಸರ್ಕಾರದ ಸುತ್ತೋಲೆ ಸಂ:ನಇ.08/ಟಿಟಿಪಿ.2013 ದಿನಾಂಕ:24–05–2014ರಂತೆ ಕ್ರಮವಹಿಸಲಾಗುವುದು.

23. ಹೊಸ ಬಡಾವಣೆ ನಿರ್ಮಾಣದಲ್ಲಿ ಬಡಾವಣೆ ಒಳಗಿನ ರಸ್ತೆಗಳು ನಕ್ಷೆ ಸಹಿತ ದಾನ ಪತ್ರ ಮಾಡಿ ಪಟ್ಟಣ ಪಂಚಾಯತ್‌ಗೆ ಹಸ್ತಾಂತರಿಸುವುದು ಕಡ್ಡಾಯಗೊಳಿಸಿದೆ.

1) ಕಟ್ಟಡ ನಿರ್ಮಾಣ ಅಥವಾ ಪುನರ್ ನಿರ್ಮಾಣ ಇತ್ಯಾದಿ ಕುರಿತಾಗಿ ಪಟ್ಟಣ ಪಂಚಾಯತಿಯು ಕಲಂ 187ರಂತೆ ನಿರ್ಬಂಧ ಅನ್ವಯಿಸುತ್ತದೆ.

ಈ ಅಧಿನಿಯಮ, ನಿಯಮಗಳು ಹಾಗೂ ಅದರ ಬೈಲಾ ನಿಯಮಗಳನುಸಾರ ಕಟ್ಟಡದ ಮಟ್ಟ, ಬಸಿಗಾಲುವೆ, ನೈರ್ಮಲ್ಯ ವಿನ್ಯಾಸ, ಸಾಮಗ್ರಿಗಳು, ಕೊಠಡಿ, ಬಾಗಿಲು, ಕಿಟಕಿಗಳ ಅಳತೆ ಮತ್ತು ಗಾತ್ರಾಂಶ (ಕ್ಯೂಬಿಕಲ್ ಕೌಂಟೆಂಟ್) ಮಹಡಿಗಳ ಸಂಖ್ಯೆ ಇತ್ಯಾದಿ ವಿಷಯಗಳ ಕುರಿತಾಗಿ ಪಟ್ಟಣ ಪಂಚಾಯತಿಯ ನಿರ್ಬಂಧಗಳನ್ನು ವಿಧಿಸಿ ಅನುಮತಿ ನೀಡಬಹುದು, ವಿಧಿಸಿರುವ ನಿಬಂಧನೆಯನ್ನು ಪಾಲಿಸದ ಏನಾ ಕಾಮಗಾರಿಯನ್ನು ಮುಂದುವರೆಸಕೂಡದೆಂದು ಸಹ ಆದೇಶಿಸಬಹುದು ಈ ಆದೇಶದ ಅವಧಿ ಒಂದು ವರ್ಷ ಮಾತ್ರ (ಕಲಂ 187ಕ.ಮು.ಅ)

2) ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣ ಅಥವಾ ನವೀಕರಣ ಅಥವಾ ಬದಲಾವಣೆಯ ಕಾಮಗಾರಿಗೆ ಕೆಳಕಾಣಿಸಿದ ಸಂದರ್ಭಗಳಲ್ಲಿ ಅನುಮತಿಯನ್ನು ತಿರಸ್ಕರಿಸಲಾಗುತ್ತದೆ.

ಅ. ಪ್ರಶ್ನಿತ ಕಾಮಗಾರಿ ಅಥವಾ ಆ ಕಾಮಗಾರಿಗಾಗಿ ಬಳಸುತ್ತಿರುವ ನಿವೇಶನ ಅಥವಾ ನಿವೇಶನ ನಕ್ಷೆಯಲ್ಲಿ ಯಾವುದೇ ವಿವರಗಳು ಯಾವುದೇ ಕಾನೂನು ಅಥವಾ ಯಾವುದೇ ಕಾನೂನಿನಡಿಯಲ್ಲಿ ಮಾಡಿರುವ ಕೆಲವು ನಿಶ್ಚಿತ ಆದೇಶ, ನಿಯಮ ಘೋಷಣೆ ಅಥವಾ ಬೈಲಾಕ್ಕೆ ವಿರುದ್ಧವಾಗಿರುವುದು;

ಆ. ನಿಯಮ ಅಥವಾ ಬೈಲಾ ಆಪೇಕ್ಷಿಸುವ ವಿವರಗಳು ಅನುಮತಿ ಕೋರಿರುವ ಅರ್ಜಿಯಲ್ಲಿ ಇಲ್ಲದಿರುವುದು ಅಥವಾ ಅದನ್ನು ಈ ನಿಯಮಗಳ ಪ್ರಕಾರ ಸಿದ್ಧಪಡಿಸದಿರುವುದು;

ಇ. ನಿಯಮ ಅಥವಾ ಬೈಲಾ ಅಗತ್ಯಪಡಿಸಿರುವಂತೆ ದಾಖಲೆ ಪತ್ರಗಳಿಗೆ ಸಹಿ ಹಾಕದಿರುವುದು;

ಈ ನಿಯಮ ಅಥವಾ ಬೈಲಾ ಅಗತ್ಯಪಡಿಸಿರುವ ಯಾವುದೇ ಮಾಹಿತಿ ಅಥವಾ ದಾಖಲೆ ಪತ್ರಗಳನ್ನು ಒದಗಿಸದಿರುವುದು;

ಉ. ಕಲಂ 170 ಅಗತ್ಯಪಡಿಸಿರುವಂತೆ ಬೀದಿ ಅಥವಾ ರಸ್ತೆಯನ್ನು ನಿರ್ಮಿಸದಿರುವುದು ಹಾಗೂ ಸರ್ಕಾರಿ ಅಥವಾ ಪಟ್ಟಣ ಪಂಚಾಯತಿ ಭೂಮಿಯನ್ನು ಅತಿಕ್ರಮಿಸಿರುವುದು.

ಊ. ಅಂತಹ ಕಟ್ಟಡದ ನಿವೇಶನಕ್ಕೆ ಹೋಗಿ ಬರಲು, ಕನಿಷ್ಠ ವಾಸ್ತವ್ಯ 7.50 ಮೀಟರ್ ಹಾಗೂ ವಾಣಿಜ್ಯ 9.00 ಮೀಟರ್ ಅಗಲವಿರುವ ರಸ್ತೆಯನ್ನು ಕಡ್ಡಾಯವಾಗಿ ನಕ್ಷೆಯಲ್ಲಿ ಗುರುತಿಸದಿರುವುದು.

ಋ. ಬಡಾವಣೆ ನಕ್ಷೆಯಲ್ಲಿ ಯೋಜನಾ ಪ್ರಾಧಿಕಾರದ ನಿಯಮಾವಳಿಯಂತೆ ಮೂಲಭೂತ ಸೌಕಯ್ಯಗಳನ್ನು ಕಲ್ಪಿಸಿದ ಬಗ್ಗೆ ಸಂಬಂಧಿಸಿದ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಹಾಜರು ಪಡಿಸದಿದ್ದಲ್ಲಿ ಹಾಗೂ ಸರಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳನ್ನು ಪಾಲಿಸದೆ ಇದ್ದಲ್ಲಿ.

3) ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿದವರ ಪುನರ್ ನಿರ್ಮಿಸಿದವರ ವಿರುದ್ಧ ಕಲಂ 187ರಂತೆ ಈ ಕೆಳಗಿನ ಕ್ರಮವನ್ನು ಜರುಗಿಸಲಾಗುತ್ತದೆ.

ಅನುಮತಿ ಪಡೆಯದೆ ಅಥವಾ ವಿಧಿಸಿರುವ ನಿಬಂಧನೆ ಉಲ್ಲಂಘಿಸಿ ತನ್ನ ಭೂಮಿಯಲ್ಲಿ ಕಟ್ಟಡ ನಿರ್ಮಾಣ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ ಸಂಬಂಧಿಸಿದ ಕಾನೂನಿನಡಿ ಅನುಮೋದನೆ ಪಡೆಯದೆ ತನ್ನ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮತ್ತು ಈ ಅಧಿನಿಯಮ, ನಿಯಮಗಳು ಅಥವಾ ಬೈಲಾ ಅಥವಾ ಅದರಡಿ ನೀಡಿರುವ ನಿರ್ದೇಶನ ಉಲ್ಲಂಘಿಸಿ ತನ್ನ ಭೂಮಿಯಲ್ಲಿ ಕಟ್ಟಡ ನಿರ್ಮಾಣ ಮಾಡಿದ ಪ್ರಕರಣಗಳಲ್ಲಿ ವಿಧಿಸಬಹುದಾದ ಆಸ್ತಿ ತೆರಿಗೆ ಮೊಬಲಗಿನ ದುಪ್ಪಟ್ಟಿಗೆ ಸಮನಾದ ಮೊತ್ತವನ್ನು ಆ ಲೋಪ ಸರಿಪಡಿಸುವವರೆಗೆ, ಪ್ರತಿ ವರ್ಷ ಜುಲ್ಮಾನೆಯಾಗಿ ವಿಧಿಸಬಹುದು. ಈ ಜುಲ್ಮಾನೆ ಸದರಿ ಅಕ್ರಮವನ್ನು ಸಕ್ರಮಗೊಳಿಸುವುದಿಲ್ಲ ಎಂದು ತಿಳಿಯತಕ್ಕದ್ದು ಮತ್ತು ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮಾರ್ಗಸೂಚಿಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

ಎ) ಅನುಮತಿ ಪಡೆಯುವರೇ ಕಟ್ಟಡ ನಿರ್ಮಾಣ ಮಾಡುತ್ತಿರುವ ಮಾಲೀಕನ ಮೇಲೆ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಬೈಲಾ ಉಲ್ಲಂಘಿಸಿ ಕಟ್ಟಡ ರಚನೆ ಮಾಡುತ್ತಿರುವ ಕಟ್ಟಡ

ಮಾಲೀಕನ ಮೇಲೆ ಕಾಮಗಾರಿ ಸ್ಥಗಿತ ನೋಟೀಸನ್ನು ಮೊದಲು ಜ್ಯಾರಿ ಮಾಡಿ ಕಟ್ಟಡ ರಚನೆಯನ್ನು ಮುಂದುವರಿಸಿದಲ್ಲಿ ಅಂತಹವರ ವಿರುದ್ಧ ನಿಯಮ ಪ್ರಕಾರ ನೋಟೀಸು ಜ್ಯಾರಿಗೊಳಿಸಿ ದಂಡನಾ ಶುಲ್ಕವನ್ನು ವಿಧಿಸಿ ಅಂತಹ ಹೆಚ್ಚುವರಿ ಅಥವಾ ಅನಧಿಕೃತ ನಿರ್ಮಾಣವನ್ನು ಕಾರ್ಯಾಚರಣೆ ನಡೆಸಿ ನೆಲಸಮಗೊಳಿಸಲು ಅವಕಾಶವಿರುತ್ತದೆ ಎಂದು ತಿಳಿಯತಕ್ಕದ್ದು.

4) ಅನುಮತಿ ಪ್ರಾಧಿಕಾರ ಈ ಕೆಳಗಿನ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಅಧಿಕಾರ ಹೊಂದಿರುತ್ತದೆ

ಅ. ಕಾಮಗಾರಿ ನಡೆಯುವ ಸ್ಥಳಕ್ಕೆ ಆಗಾಗ ಬೇಟಿ ನೀಡಿ ಪರಿಶೀಲನೆ ಮಾಡುವುದು

ಆ. ಒಮ್ಮೆ ಕಾಮಗಾರಿ ನಿಯಮಾನುಸಾರ ಅಥವಾ ಅನುಮೋದಿತ ನಕ್ಷೆಯ ಪ್ರಕಾರ ಇಲ್ಲದಿರುವಾಗ ಲೋಪವನ್ನು ಸರಿಪಡಿಸುವಂತೆ ಸೂಚಿಸುವುದು. ಆ ಕೂಡಲೇ ಲೋಪ ಸರಿಪಡಿಸಲು ತಪ್ಪಿದಲ್ಲಿ ನೀಡಿರುವ ಅನುಮತಿಯನ್ನು ರದ್ದು ಪಡಿಸುವುದು.

ಇ. ಪ್ರಗತಿಯಲ್ಲಿರುವ ಕಾಮಗಾರಿ ಮಾನವನ ಜೀವಕ್ಕೆ ಅಪಾಯಕರವೆಂದು ಕಂಡು ಬಂದಾಗ ಕಾಮಗಾರಿಯನ್ನು ಸ್ಥಗಿತಗೊಳಿಸುವುದು.

ಈ. ಒಮ್ಮೆ ಕಟ್ಟಡ ಕಾಮಗಾರಿಯನ್ನು ಅನುಮತಿ ಪಡೆಯದೆ ಅಥವಾ ಅನುಮೋದಿಸಿರುವ ನಕ್ಷೆ ಅಥವಾ ಇತರ ವಿವರದ ವಿರುದ್ಧ ಕಾಮಗಾರಿ ನಡೆಸುತ್ತಿರುವುದು ಅಥವಾ ಮುಗಿಸಿರುವುದು ಅಥವಾ ಈ ಅಧಿನಿಯಮ ಅಥವಾ ಅದರೆದೆ ಕಾಮಗಾರಿ ಆರಂಭಿಸಿರುವುದು ಅಥವಾ ಪೂರೈಸಿರುವುದು ಅಥವಾ ಯಾವುದೇ ನೋಟೀಸಿನಲ್ಲಿ ಸೂಚಿಸಿರುವಂತೆ ಯಾವುದೇ ಬದಲಾವಣೆ ಮಾಡದಿದ್ದಲ್ಲಿ ಸದರಿ ಕಟ್ಟಡವನ್ನು ನಾಶಪಡಿಸುವಂತೆ ಅಥವಾ ನಿಯಮಾನುಸಾರ ಲೋಪ ಸರಿಪಡಿಸುವಂತೆ ಸೂಚಿಸಬಹುದು.

ಉ. ಮೇಲಿನ ವಿಷಯ ಕುರಿತಾಗಿ ಮೂರು ಸ್ಪಷ್ಟ ದಿನಗಳ ಲಿಖಿತ ನೋಟೀಸನ್ನು ನೀಡುವುದು.

ಊ. ಹಾಗೊಮ್ಮೆ ಕಟ್ಟಡದ ಮಾಲೀಕ ನೋಟೀಸಿಗೆ ಸ್ಪಂದಿಸದಿದ್ದರೆ, ಈ ಹಿಂದೆ ನೀಡಿರುವ ಆದೇಶವನ್ನು ಸ್ಥಿರೀಕರಿಸಬಹುದು.

ಋ. ಯೋಗ್ಯ ಕಾಲದ ಒಳಗಾಗಿ ನೀಡಿರುವ ಆದೇಶವನ್ನು ಕಟ್ಟಡದ ಮಾಲೀಕ ಪಾಲಿಸದಿದ್ದಲ್ಲಿ ಆ ಆದೇಶವನ್ನು ಜಾರಿಗೊಳಿಸಿ ಈ ನಿಮಿತ್ತ ಭರಿಸಲಾಗಿರುವ ಖರ್ಚುಗಳನ್ನು ಆತನಿಂದ ವಸೂಲಿ ಮಾಡಿಕೊಳ್ಳಬಹುದು (ಕಲಂ 187 ಕ.ಮು.ಅ)

5) ಭೂಮಿ ಸ್ವಾಧೀನ ಪಡಿಸಿಕೊಳ್ಳುವ ನಿಮಿತ್ತ ನಿರಾಕರಿಸಿದಾಗ ಕಲಂ 188 ರಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಅಂತಹ ಪ್ರಸಂಗದಲ್ಲಿ ಆರು ತಿಂಗಳ ಒಳಗಾಗಿ ಸದರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಅಥವಾ ಭೂಸ್ವಾಧೀನ ಅಧಿನಿಯಮ, 1894ರನ್ವಯ ಕಡ್ಡಾಯ ಸ್ವಾಧೀನಪಡಿಸಿಕೊಳ್ಳುವಿಕೆಗಾಗಿ ಕ್ರಮ ಜರುಗಿಸುವಂತೆ ಕೋರಿ ಅರ್ಜಿ ಸಲ್ಲಿಸಿರಬೇಕು. ತಪ್ಪಿದಲ್ಲಿ ಕಟ್ಟಡ ನಿರ್ಮಿತಿ ಅಥವಾ ಪುನರ್ ನಿರ್ಮಿತಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಗುಣಾತ್ಮಕ ಅಂಶ ಆಧರಿಸಿ ಅರ್ಜಿಯನ್ನು ವಿಲೇವಾರಿ ಮಾಡಲಾಗುವುದುದೆಂದು ಅನುಮತಿ ನಿರಾಕರಿಸಲಾಗಿರುವ ವ್ಯಕ್ತಿಗೆ ತಿಳಿಯಪಡಿಸಬೇಕು. (ಕಲಂ 187 ಕ.ಮು.ಅ.)

6) ಒಂದು ವೇಳೆ ಅನುಮತಿಯನ್ನು ವಂಚಿಸಿ ಪಡೆದಿದ್ದ ಕಲಂ 188 ರಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಅನುಮತಿಗಾಗಿ ಸಲ್ಲಿಸಿರುವ ಅರ್ಜಿಯಲ್ಲಿ ಅಥವಾ ಒದಗಿಸಿರುವ ಮಾಹಿತಿಯಲ್ಲಿ ಯಾವುದೇ ಗುರುತರವಾದ ತಪ್ಪು ನಿರೂಪಣೆ ಅಥವಾ ತಪ್ಪು ಹೇಳಿಕೆಯನ್ನು ನೀಡಿರುವುದು ಮನವರಿಕೆಯಾದಲ್ಲಿ ಸಂಬಂಧಿತ ವ್ಯಕ್ತಿಯನ್ನು ಆಲಿಸಿ, ಕಾರಣಗಳನ್ನು ದಾಖಲಿಸಿ ಅನುಮತಿಯನ್ನು ಲಿಖಿತ ಆದೇಶದ ಮೂಲಕ ಮುಖ್ಯಾಧಿಕಾರಿ ರದ್ದುಗೊಳಿಸಬಹುದು. (ಕಲಂ. 188 ಕ.ಮು.ಅ)

7) ಗೊತ್ತುಪಡಿಸಿದ ಪ್ರದೇಶದಲ್ಲಿ ಕಟ್ಟಡ ನಿರ್ಮಾಣವನ್ನು ಪಟ್ಟಣ ಪಂಚಾಯತಿಯು ನಿಷೇಧಿಸುವ ಅಧಿಕಾರ ಹೊಂದಿರುತ್ತದೆ.

ಸರ್ಕಾರದ ಅನುಮತಿ ಪಡೆದು ನಿಗದಿತ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ನಿಷೇಧಿಸಿ, ಅಧಿಸೂಚನೆಯನ್ನು ಪಟ್ಟಣ ಪಂಚಾಯತಿಯು ಹೊರಡಿಸಬಹುದು. ಒಮ್ಮೆ ಯಾರಾದರೂ ಈ ನಿಷೇಧವನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣಕ್ಕೆ ಮುಂದಾದಲ್ಲಿ ಉರುಳಿಸಬಹುದು. ಆದರೆ ಈ ನಿಷೇಧ ವಿಧಿಸುವ ಮೊದಲು

ಸರ್ಕಾರ ಅಥವಾ ಪಟ್ಟಣ ಪಂಚಾಯತಿಯು ಭೂಮಿಯನ್ನು ಕಟ್ಟಡ ನಿವೇಶನಗಳಿಗಾಗಿ ಮೀಸಲಿರಿಸಿದ್ದರೆ ಅನುಮತಿಯನ್ನು ನಿರಾಕರಿಸಬಾರದು. (ಕಲಂ 189 ಕ.ಮು.ಅ.)

8) ಕಟ್ಟಡ ನಿರ್ಮಾಣ ಮುಗಿದ ಕೂಡಲೇ ಅದರಲ್ಲಿ ವಾಸಿಸಲು ಅಥವಾ ಅದನ್ನು ಬಳಸಲು ಆರಂಭಿಸುವ ಕುರಿತು.

ಕಟ್ಟಡ ನಿರ್ಮಾಣ ಮುಗಿದ ನಂತರ ತತ್ಸಂಬಂಧ ಕಾಮಗಾರಿ ಪೂರ್ಣತೆ ಮತ್ತು ವಾಸ ಅಥವಾ ಬಳಕೆ ಯೋಗ್ಯ ಪತ್ರ ನೀಡುವಂತೆ ಕೋರಿ ಅದರ ಮಾಲೀಕ ಅಥವಾ ಸಂಬಂಧಿತ ವ್ಯಕ್ತಿ ಪಟ್ಟಣ ಪಂಚಾಯತ್‌ಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕು. ಅದನ್ನು ಸ್ವೀಕರಿಸಿದ ಒಂದು ತಿಂಗಳ ಒಳಗಾಗಿ ಆ ಪತ್ರ ನೀಡಿ ಅಥವಾ ತಿರಸ್ಕರಿಸಿ ಪಟ್ಟಣ ಪಂಚಾಯತಿ ಆದೇಶಿಸಬೇಕು. ತಪ್ಪಿದಲ್ಲಿ ಅದು ಅನುಮತಿ ನೀಡಿದೆಯೆಂದು ತಿಳಿಯಬಹುದು. (ಕಲಂ 190 ಕ.ಮು.ಅ)

9) ಕಟ್ಟಡ ಹಾಗೂ ಇನ್ನಿತರ ನಿರ್ಮಾಣ ಕಾಮಗಾರಿಗಳಲ್ಲಿ ಬಾಕಿಯಾಗಿರುವ ಕಾರ್ಮಿಕರ ಭವಿಷ್ಯತ್ತಿಗಾಗಿ ಪಟ್ಟಣ ಪಂಚಾಯತಿಯು ಕ್ರಮ ಕೈಗೊಳ್ಳುವ ಬಗ್ಗೆ.

ಕಟ್ಟಡ ಹಾಗೂ ಇನ್ನಿತರ ನಿರ್ಮಾ ಕಾಮಗಾರಿಗಳಲ್ಲಿ ಅಂದರೆ, ಕಟ್ಟಡ, ಈದಿ, ರಸ್ತೆ, ರೈಲುದಾರಿ, ವಿಮಾನ ನಿಲ್ದಾಣ, ನೀರಾವರಿ, ಒಳಚರಂಡಿ, ಅಣೆಕಟ್ಟು, ಕೆರೆ ಏರಿ, ಒಟ್ಟು ಕಾಲುವೆ, ಜಲಯಾನ ಕಾಮಗಾರಿ, ಪ್ರವಾಹ ನಿಯಂತ್ರಣ ಮುಂತಾದ ಕೆಲಸಗಳಲ್ಲಿ ಭಾಗಿಯಾಗುವ ಕಾರ್ಮಿಕರ ಜೀವ ವಿಪತ್ತಿಗೆ ಸಿಲುಕುವ ಸಾಧ್ಯತೆಯಿರುವುದರಿಂದ, ಅವರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಕಟ್ಟಡದ ಮಾಲೀಕನಿಂದ ನಿಯೋಜಕರಿಂದ ಗುತ್ತಿಗೆದಾರನಿಂದ ಸದರಿ ಕಟ್ಟಡದ ಅಥವಾ ಕಾಮಗಾರಿ ವೆಚ್ಚದ ಶೇಕಡಾ 1 ರಷ್ಟು ಹಣವನ್ನು ತೆರಿಗೆ ರೂಪದಲ್ಲಿ ವಸೂಲು ಮಾಡಿ ಈ ಕೆಳಗಿನ ಪ್ರಾಧಿಕಾರಕ್ಕೆ ಪಾವತಿಸಬೇಕು. ಕಟ್ಟಡ ಕಾಮಗಾರಿಯ ವೆಚ್ಚ ಹಾಕುವಾಗ ಭೂಮಿಯ ಮೌಲ್ಯ ಮತ್ತು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923ರ ಪ್ರಕಾರ ಪಾವತಿಸಿದ ಪರಿಹಾರದ ಮೊತ್ತವನ್ನು ಪರಿಗಣಿಸಬಾರದು. ಕಾರ್ಯದರ್ಶಿ ಮುಖ್ಯ ನಿರ್ವಹಣಾಧಿಕಾರಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, 3ನೇ ಹಂತ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029 ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ಅಧಿನಿಯಮ, 1996 ಅಧಿಸೂಚನೆ ಸಂಖ್ಯೆ ಎಸ್.ಓ.2899, ದಿನಾಂಕ 26 ಸೆಪ್ಟೆಂಬರ್ 1996 ಭಾರತದ ರಾಜ್ಯ ಪತ್ರ, ವಿಶೇಷ ದಿನಾಂಕ:12–10–1996, ಸರ್ಕಾರಿ ಆದೇಶ ಸಂಖ್ಯೆ ಎಲ್‌ಡಿ 300 ಎಲ್‌ಇಟಿ 2006, ಬೆಂಗಳೂರು ದಿನಾಂಕ 18 ಜನವರಿ 2007 ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಯೋಜನೆಯ ನಿಯಂತ್ರಣ ಮತ್ತು ಸೇವಾ ಷರತ್ತುಗಳ ನಿಯಮಗಳು, 2006 (ಕಲಂ 191, 192 ಕ.ಮು.ಅ).

10) ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ಅಧಿನಿಯಮ, 1996 ಅನ್ವಯಿಸುವ ಬಗ್ಗೆ.

ಕಟ್ಟಡ ಅಥವಾ ಇನ್ನಿತರ ನಿರ್ಮಾಣ ಕಾಮಗಾರಿಯ ಮಾಲಿಕ ನಿಯೋಜಕ ಬಿಲ್ಡರ್ ಗುತ್ತಿಗೆದಾರನು ಕಳೆದ 12 ತಿಂಗಳುಗಳಲ್ಲಿ ಯಾವುದೇ ದಿನದಂದು 10 ಅಥವಾ ಅಧಿಕ ಕಾರ್ಮಿಕರನ್ನು ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದಾಗ ಈ ಅಧಿನಿಯಮವು ಅನ್ವಯಿಸುವುದು, ಒಂದು ವೇಳೆ ವಾಸದ ಮನೆಯ ಒಟ್ಟು ವೆಚ್ಚ ರೂ 10ಲಕ್ಷ ಮೀರದಿದ್ದಲ್ಲಿ ಈ ನಿಯಮ ಅನ್ವಯಿಸುವುದಿಲ್ಲ. (ಕಲಂ 2, 3 ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ಅಧಿನಿಯಮ, 1996)

11) ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ವಸೂಲು ಮಾಡುವುದರಿಂದ ಪಟ್ಟಣ ಪಂಚಾಯತಿಗಳಿಗೆ ಕಾ.ಕ.ತೆ.ಅಧಿನಿಯಮ 1996ರಂತೆ ಪ್ರಯೋಜನವಾಗುವುದು,

ಮೇಲಿನ ತೆರಿಗೆ ವಸೂಲಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಸಂಗ್ರಹಿಸಿರುವ ಒಟ್ಟು ಕಾರ್ಮಿಕರ ಕಲ್ಯಾಣ ತೆರಿಗೆಯಲ್ಲಿ ಶೇಕಡಾ 01ನ್ನು ಆಡಳಿತಾತ್ಮಕ ವೆಚ್ಚವಾಗಿ ಪಟ್ಟಣ ಪಂಚಾಯತ್ ಖಾತೆಗೆ ಜಮೆ ಮಾಡುವುದು. (ಕಲಂ2, 3 ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ಅಧಿನಿಯಮ, 1996)

12) ಈ ಅಧಿನಿಯಮ ಜಾರಿಗೆ ಬರುವ ಮೊದಲು ಅಥವಾ ಪಂಚಾಯತಿಯ ವ್ಯಾಪ್ತಿಯಲ್ಲಿ ಸೇರಿಕೊಳ್ಳುವ ಮೊದಲೇ ನಿರ್ಮಿಸಿರುವ ಗುಡಿಸಲು/ಜೋಪಡಿಗಳ ಬಗ್ಗೆ ಕಲಂ 192ರಂತೆ ಕ್ರಮ ಕೈಗೊಳ್ಳಲಾಗುವುದು.

ಇಂತಹ ಪ್ರಸಂಗಗಳಲ್ಲಿ ಅವನ್ನು ತೆಗೆದು ಹಾಕುವಂತೆ ಮುಖ್ಯಾಧಿಕಾರಿ ಸೂಚಿಸಬಹುದು. ಒಮ್ಮೆ ಅವರು ತಿರಸ್ಕರಿಸಿದಲ್ಲಿ ಈ ಅಧಿಕಾರಿಗಳು ಅವನ್ನು ತೆಗೆದು ಹಾಕಲು ಕ್ರಮ ಜರುಗಿಸಿ, ಪ್ರತಿ

ಗುಡಿಸಲು/ಜೋಪಡಿಯ ಸಾಮಗ್ರಿಗಳನ್ನು ಪ್ರತ್ಯೇಕವಾಗಿರಿಸಿ, ಮಾರಾಟ ಮಾಡಿ, ಈ ನಿಮಿತ್ತ ಭರಿಸಿರುವ ಖರ್ಚುಗಳನ್ನು ಭರ್ತಿ ಮಾಡಿಕೊಂಡು, ಉಳಿದ ಮೊಬಲಗು ಮತ್ತು ನಷ್ಟ ಪರಿಹಾರವನ್ನು ಮಾಲೀಕ ಅಥವಾ ಸಂಬಂಧಿತ ವ್ಯಕ್ತಿಗೆ ಪಂಚಾಯತಿ ಸಂದಾಯ ಮಾಡಬೇಕು. ಹಾಗೊಮ್ಮೆ ಯಾವುದೇ ಕ್ಷೇಮುದಾರ ಮುಂದೆ ಬರದಿದ್ದಲ್ಲಿ ಸದರಿ ಮೊಬಲಗನ್ನು ಪಟ್ಟಣ ಪಂಚಾಯತಿಯ ನಿಧಿಯಲ್ಲಿ ಠೇವಣಿಯಾಗಿರಿಸಬೇಕು. ಪಟ್ಟಣ ಪಂಚಾಯತಿ ನೀಡಿರುವ ಸೂಚನೆಯಿಂದ ಯಾವುದೇ ವ್ಯಕ್ತಿ ಬಾಧಿತನಾಗಿದ್ದರೆ, ಸದರಿ ಸೂಚನೆಯನ್ನು ರದ್ದು, ತಿದ್ದುಪಡಿ ಅಥವಾ ಪರಿಷ್ಕರಿಸುವಂತೆ ಕೋರಿ ಪಟ್ಟಣ ಪಂಚಾಯತಿಗೆ ಅರ್ಜಿ ಸಲ್ಲಿಸಬಹುದು. (ಕಲಂ 192 ಕ.ಮು.ಅ)

13) ಹೊರ ವಿನ್ಯಾಸ (ಸ್ಟ್ರಕ್ಚರ್ಸ್) ಮುಂತಾದವುಗಳಿಗೆ ಸಂಬಂಧಿಸಿದ ಅಧಿಕಾರಗಳು.

ಕಟ್ಟಡದ ಹೊರ ವಿನ್ಯಾಸ (ಸ್ಟ್ರಕ್ಚರ್ಸ್) ಮುಂಚಾಚಿಸಿ (ಪ್ರೊಜೆಕ್ಟ್) ನಿರ್ಮಿಸುವ ಬಗ್ಗೆ ಪಟ್ಟಣ ಪಂಚಾಯತಿಯಿಂದ ಲಿಖಿತ ಅನುಮತಿ ಪಡೆದು ಹೊರವಿನ್ಯಾಸವನ್ನು ಮುಂಚಾಚಿಸಿ ಉದಾ: ವರಾಂಡ, ಬಾಲ್ಕನಿ, ಕೊಠಡಿ, ಮಳೆಹಲಗೆ (ವೆದರ್ ಬೋರ್ಡ್) ಮಳಿಗೆ ಫಲಕ (ಷಾಪ್ ಬೋರ್ಡ್) ಇತ್ಯಾದಿ. ಕಟ್ಟಡದ ಮೇಲುಪಾಯ (ಪ್ಲಿನ್ತ್) ಅಥವಾ ಅಡಿಪಾಯದ (ಬೇಸ್‌ಮೆಂಟ್) ಗೋಡೆಯಿಂದ ನಾಲ್ಕು ಅಡಿಗಿಂತ ಜಾಸ್ತಿ ಮುಂಚಾಚಿರಬಾರದು ಹಾಗೂ ಬೀದಿಯ ನೆಲಮಟ್ಟದಿಂದ ಯಾವುದೇ ಮೇಲು ಮಹಡಿಯ ಮುಂಚಾಚು ಕಾಲದಿಂದ ಕಾಲಕ್ಕೆ ಮುನ್ಸಿಪಲ್ ಬೈಲಾ ನಿಯಮ ಗೊತ್ತುಪಡಿಸಿರುವ ಅಂತರವನ್ನು ಹೊಂದಿರಬೇಕು. ಜೊತೆಗೆ ಆ ಬೀದಿಯಲ್ಲಿ ಹಾದು ಹೋಗಲು ಮತ್ತು ಅಲ್ಲಿನ ಚರಂಡಿ, ಬಸಿಗಾಲುವೆ ಮುಂತಾದವುಗಳಿಗೆ ಆ ಮುಂಚಾಚು, ಅಡೆತಡೆ ಒಡ್ಡುವಂತಿರಬಾರದು. ಈ ನಿಯಮ ಉಲ್ಲಂಘಿಸಿ ಮುಂಚಾಚು ನಿರ್ಮಿಸಿದಲ್ಲಿ ತಪ್ಪಿತಸ್ಥರಿಗೆ 250.00 ರೂಪಾಯಿಗಳ ವರೆಗೆ ದಂಡ ವಿಧಿಸಬಹುದು. ಅಂತೆಯೇ ಈ ತಪ್ಪು ಮುಂದುವರೆದಲ್ಲಿ ಅದನ್ನು ಸರಿಪಡಿಸುವವರೆಗೆ ಪ್ರತಿನಿತ್ಯ 25.00 ರೂಪಾಯಿಗಳವರೆಗೆ ಹೆಚ್ಚುವರಿ ದಂಡವನ್ನು ಹಾಕಬಹುದು. ಒಂದು ವೇಳೆ ಪಟ್ಟಣ ಪಂಚಾಯತ್ ವ್ಯಾಪ್ತಿಗೆ ಸದರಿ ಕಟ್ಟಡ ಸೇರುವ ಮೊದಲು ಆ ಮುಚಾಚುಗಳನ್ನು ನಿರ್ಮಿಸಿದ್ದರೆ, ಅಥವಾ ಲಿಖಿತ ಅನುಮತಿ ಪಡೆದು ನಿರ್ಮಿಸಿದ್ದರೆ, ಸೂಕ್ತ ನಷ್ಟ ಪರಿಹಾರ ನೀಡಿ ಆ ಮುಂಚಾಚುಗಳನ್ನು ಪಟ್ಟಣ ಪಂಚಾಯತ್ ತೆಗೆದುಹಾಕಬಹುದು. (ಕಲಂ 208, 268 ಕ.ಮು.ಅ)

14) ಮಳೆ ನೀರು ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕಟ್ಟಡದ ಮಾಲೀಕರಿಗೆ ಕಲಂ 209ರಂತೆ ಕ್ರಮ ಕೈಗೊಳ್ಳುವುದು.

ಕಟ್ಟಡದ ಮೇಲ್ಚಾವಣಿ ಹಾಗೂ ಇತರ ಭಾಗಗಳಿಂದ ಶೇಖರವಾಗುವ ನೀರು ವಿಲೇವಾರಿಗೆ ಬೀದಿಯಲ್ಲಿ ಹಾದುಹೋಗುವ ಜನರಿಗೆ ತೊಂದರೆಯಾಗದಂತೆ ಮತ್ತು ರಸ್ತೆ ಹಾಳಾಗದ ರೀತಿಯಲ್ಲಿ ಸೂಕ್ತ ವ್ಯವಸ್ಥೆ ಮಾಡುವಂತೆ ಅದರ ಮಾಲೀಕರಿಗೆ ನೋಟೀಸು ನೀಡಿ ಅಗತ್ಯಪಡಿಸಬಹುದು. (ಕಲಂ 209 ಕ.ಮು.ಅ)

15) ಬೆಳಕಿನ ವ್ಯವಸ್ಥೆಗಾಗಿ ಗುಜ್ಜು ಬಂಕಗಳನ್ನು (ಬ್ರಾಕೆಟ್ಸ್) ಕಟ್ಟಡದ ಹೊರಭಾಗಕ್ಕೆ ಪಟ್ಟಣ ಪಂಚಾಯತಿಯು ಕಲಂ 210ರಂತೆ ಕ್ರಮವಹಿಸುವುದು.

ಕಟ್ಟಡದ ನಿವಾಸಿಗರಿಗೆ, ನೆರೆಹೊರೆಯವರಿಗೆ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ, ಟೆಲಿಫೋನ್, ಟೆಲಿಗ್ರಾಫ್ ವಿದ್ಯುತ್ ರೈಲು ಅಥವಾ ಇತರ ಉದ್ದೇಶಗಳಿಗೆ ಎಳೆದಿರುವ ತಂತಿಗಳಿಗೆ ತೊಡಕುಂಟಾಗದ ರೀತಿಯಲ್ಲಿ ಎಣ್ಣೆ, ಅನಿಲ, ವಿದ್ಯುತ್ ದೀಪಗಳಿಗಾಗಿ ಗುಜ್ಜುಬಂಕಗಳನ್ನು ಕಟ್ಟಡದ ಹೊರಭಾಗದಲ್ಲಿ ಜೋಡಿಸಬಹುದು. (ಕಲಂ 210 ಕ.ಮು.ಅ)

16) ಮನೆಗೆ ಸಂಖ್ಯೆ ಮತ್ತು ಬೀದಿಗಳಿಗೆ ಹೆಸರನ್ನು ಪಟ್ಟಣ ಪಂಚಾಯತಿ ಕಲಂ: 211ರಂತೆ ಕ್ರಮ ಜರುಗಿಸಲಾಗುವುದು.

ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರತಿ ಮನೆಗೆ ಪ್ರತ್ಯೇಕ ಸಂಖ್ಯೆಯನ್ನು ಅದು ನೀಡಿ ರಸ್ತೆಗೆ ಮುಖವಾಗಿ ಮನೆಯ ಎದುರುಗಡೆ ಎಲ್ಲರಿಗೂ ಕಾಣುವಂತೆ ಮನೆ ಸಂಖ್ಯೆಯನ್ನು ಅದು ಬರೆಸಬಹುದು. ಅಂತೆಯೇ, ಸರ್ಕಾರದಿಂದ ಪೂರ್ವಾನುಮೋದನೆ ಪಡೆದು ರಸ್ತೆ/ಬೀದಿಗೆ ಹೆಸರನ್ನಿಡಬಹುದು. (ಕಲಂ 211 ಕ.ಮು.ಅ)

17) ಮಾಲೀಕ ಅಥವಾ ಸ್ವಾಧೀನದಾರ ತನ್ನ ಕಟ್ಟಡ ಅಥವಾ ಭೂಮಿಯನ್ನು ಮಲಿನಕಾರಕವಾಗಿರಿಸಿ ಕೊಂಡರೆ ಈ ಕೆಳಗಿನ ಕ್ರಮ ಜರುಗಿಸಲಾಗುತ್ತದೆ.

ಅಂತಹ ಪ್ರಸಂಗ ನೆರೆಹೊರೆಯವರಿಗೆ ಅನಾರೋಗ್ಯಕರವೆಂದು ಪಟ್ಟಣ ಪಂಚಾಯತ್ ತಿಳಿಸಿದಲ್ಲಿ, ಅವನಿಗೆ ಆ ಕಟ್ಟಡ ಅಥವಾ ಭೂಮಿಯನ್ನು ಸ್ವಚ್ಛಗೊಳಿಸಿ ಮಲಿನ ಪದಾರ್ಥಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವಂತೆ ತಿಳಿಸಿ ನೋಟೀಸು ನೀಡಲಾಗುವುದು. ಒಮ್ಮೆ ನೋಟೀಸನ್ನು ಉಪೇಕ್ಷಿಸಿದಲ್ಲಿ ಅವನಿಗೆ 250/–

ರೂಪಾಯಿಗಳವರೆಗೆ ದಂಡ ವಿಧಿಸಲಾಗಿದ್ದು, ತಪ್ಪನ್ನು ಮುಂದುವರಿಸಿದಲ್ಲಿ ಪ್ರತಿ ದಿನ 25/–ರೂಪಾಯಿಗಳವರೆಗೆ ಮತ್ತಷ್ಟು ದಂಡ ಹಾಕಲಾಗುವುದು. ಒಂದು ವೇಳೆ ಆ ಕಟ್ಟಡ ಅಥವಾ ಸ್ಥಳ ಜನವಸತಿ ಅನುಚಿತವಾಗಿದ್ದಲ್ಲಿ ಅದರ ಬಳಕೆಯನ್ನು ನಿಷೇಧಿಸಲಾಗುವುದು. (ಕಲಂ 228 ಕ.ಮು.ಅ)

18) ಪಾಳು ಬಿದ್ದಿರುವ ಹಾಗೂ ಹಾನಿಕರ ಕಟ್ಟಡದ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

ಜನವಸತಿಯಿರದ, ತೊರೆದ, ನಿರ್ಲಕ್ಷಿತ, ಶಿಥಿಲಾವಸ್ಥೆಯಲ್ಲಿರುವ ಯಾವುದೇ ಕಟ್ಟಡ ಕಳ್ಳಕಾಕರ ಅನೈತಿಕ ಚಟುವಟಿಕೆಗಳ, ಅನೈರ್ಮಲ್ಯದ, ಹಾವು ಇಲಿ ಹೆಗ್ಗಣ, ಹಾನಿಕಾರ ಪ್ರಾಣಿ, ಹುಳು ಹುಪ್ಪಟೆಗಳ ತಾಣವಾಗಿ ನೆರೆಹೊರೆಯವರಿಗೆ ಸುಖ ಶಾಂತಿ ಹದಗೆಡಿಸುವಂತಿದ್ದರೆ, ಆ ಕೂಡಲೇ ಸದರಿ ಕಟ್ಟಡವನ್ನು ನಾಶಪಡಿಸಿ ಮರಮುಟ್ಟು ಹಾಗೂ ಇತರ ಸಾಮಗ್ರಿಗಳನ್ನು ವಿಲೇವಾರಿ ಮಾಡುವಂತೆ ಸೂಚಿಸಿ ನೋಟೀಸನ್ನು ಆ ಕಟ್ಟಡದ ಮಾಲೀಕರಿಗೆ ನೀಡಲಾಗುವುದು. ಒಂದು ವೇಳೆ ಅವನು ಈ ನೋಟೀಸು ತಲುಪಿದ ಏಳು ದಿನಗಳ ಪ್ರತಿಕ್ರಿಯಿಸದಿದ್ದರೆ, ಪಟ್ಟಣ ಪಂಚಾಯತಿಯೇ ಸ್ವತಃ ಆ ಕಟ್ಟಡ ಉರುಳಿಸಿ, ವಿಲೇವಾರಿ ಮಾಡಲಾಗುವುದು. ತತ್ಸಂಬಂಧ, ತಗುಲಿದ ಖರ್ಚು ವೆಚ್ಚಗಳನ್ನು ಅವನಿಂದ ತೆರಿಗೆ ರೂಪದಲ್ಲಿ ವಸೂಲು ಮಾಡಿಕೊಳ್ಳಲಾಗುವುದು. (ಕಲಂ 229 ಕ.ಮು.ಅ.)

19) ಯಾವುದೇ ಕಟ್ಟಡ ಜನವಸತಿಗೆ ಯೋಗ್ಯವಲ್ಲದಿದ್ದರೆ ಯುಕ್ತ ಕಂಡ ಕ್ರಮಜರುಗಿಸಲಾಗುತ್ತದೆ.

ಯಾವುದೇ ಕಟ್ಟಡ ಜನವಸತಿಗೆ ಅನುಚಿತವೆನಿಸಿದಾಗ ಪಟ್ಟಣ ಪಂಚಾಯತ್ ಅದರ ಮಾಲೀಕನಿಗೆ ನೋಟೀಸು ನೀಡಿ ಆಕ್ಷೇಪಣೆಯನ್ನು ಆಹ್ವಾನಿಸಲಾಗುವುದು ಒಮ್ಮೆ ಅವನು ನೀಡುವ ವಿವರಣೆ ಸ್ಥಾಯೀ ಸಮಿತಿಗೆ ತೃಪ್ತಿಕರವೆನಿಸದಿದ್ದಾಗ, ಸದರಿ ಕಟ್ಟಡ "ಜನವಸತಿಗೆ ಅನುಚಿತವೆಂದು"(Unfit for Human Habitation U.H.H) ಸಾರಿ, ಆದೇಶ ಹೊರಡಿಸಿ, ಅದರ ಪ್ರತಿಯನ್ನು ಆ ಕಟ್ಟಡದಲ್ಲಿ ಎಲ್ಲರಿಗೂ ಕಾಣುವಂತೆ ಅಂಟಿಸಬೇಕು. ಒಂದು ವೇಳೆ ಆ ಕಟ್ಟಡವನ್ನು ಉತ್ತಮಪಡಿಸಿ ಜನವಸತಿಗೆ ಯೋಗ್ಯವಾಗಿಸಲು ಮಾಲೀಕನು ಮುಂದೆ ಬಂದಲ್ಲಿ ಪಟ್ಟಣ ಪಂಚಾಯತಿಯು ಅವಕಾಶ ನೀಡಬೇಕು. (ಕಲಂ 230 ಕ.ಮು.ಅ)

20) ಜನವಸತಿ ಯೋಗ್ಯವಲ್ಲದ ಕಟ್ಟಡ.

ಕಟ್ಟಡದ ಜನವಸತಿ ಯೋಗ್ಯತೆ ಅಗತ್ಯ ದುರಸ್ತಿ ವಿನ್ಯಾಸ ಬದಲಾವಣೆ ಬೆಳಕಿಗೆ ಜಾಗ ಮತ್ತು ನಳ್ಳಿ ನೀರಿಗೆ ಅವಕಾಶ ಶೌಚಾಲಯ ಮತ್ತು ಮೂತ್ರಾಲಯಗಳ ಏರ್ಪಾಟು ಹೆಚ್ಚುವರಿ ಅಥವಾ ಸುಧಾರಿತ ಉಪಕರಣಗಳು (ಫಿಕ್ಸ್ ಚರ್) ಮತ್ತು ಪೂರಕ ಪದಾರ್ಥಗಳಿಗೆ (ಫಿಟಿಂಗ್ಸ್) ಏರ್ಪಾಡು ತ್ಯಾಜ್ಯ, ಕೊಳಕು ಹಾಗೂ ಇತರ ಕಲುಷಿತ ಮತ್ತು ಹಾನಿಕರ ಪದಾರ್ಥಗಳನ್ನು ತೆಗೆದುಹಾಕುವಿಕೆ ಮೇಲೆ ಹೆಸರಿಸಿದ ಕಾಮಗಾರಿಗಳ ಜೊತೆಗೆ ಪಟ್ಟಣ ಪಂಚಾಯತಿ ದೃಷ್ಟಿಯಲ್ಲಿ ಅಗತ್ಯ ವೆನಿಸುವ ಕಟ್ಟಡ ಅಥವಾ ಅದರ ಯಾವುದೇ ಭಾಗ ಕೆಡವಿಕೆಯೂ ಸೇರಿದಂತೆ ಅದು ಸೂಚಿಸುವ ಇತರ ಕಾಮಗಾರಿ ಮಾಡಿಸುವುದು. (ಕಲಂ 231 ಕ.ಮು.ಅ.)

21) ಪಟ್ಟಣ ಪಂಚಾಯತ್ ಅಧಿಕಾರಿಗಳು ಕಟ್ಟಡಗಳನ್ನು ಪ್ರವೇಶಿಸಿ ಪರಿವೀಕ್ಷಿಸುವ ಕುರಿತು.

ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿ ಅಥವಾ ಅಧಿಕಾರ ಪಡೆದಿರುವ ಇತರ ಯಾವುದೇ ಅಧಿಕಾರಿ, ಮುಂಚಿತವಾಗಿ ನೋಟೀಸ್ ನೀಡಿ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಟ್ಟಡ ಪ್ರವೇಶಿಸಿ, ಪರಿವೀಕ್ಷಿಸಿ ನೈರ್ಮಲ್ಯ ಕಾರಣದಿಂದಾಗಿ ಕಟ್ಟಡದ ಒಳಹೊರಗೆ ಸುಣ್ಣ ಬಳಿಯುವಂತೆ ಅಥವಾ ಇತರ ವಿಧದಲ್ಲಿ ಸ್ವಚ್ಛಗೊಳಿಸುವಂತೆ ಸೂಚಿಸಿ ನೋಟೀಸ್ ನೀಡಬಹುದು. (ಕಲಂ 232 ಕ.ಮು.ಅ)

22) ಪಟ್ಟಣ ಪಂಚಾಯತಿಯು ಅಗತ್ಯ ಪಡಿಸಿರುವ ಕಾಮಗಾರಿಯನ್ನು ಯಾವುದೇ ಕಟ್ಟಡದ ಅಥವಾ ಖಾಲಿ ಭೂಮಿಯ ಮಾಲೀಕ ಅಥವಾ ಸ್ವಾಧೀನದಾರ ಕಾರ್ಯಗತಗೊಳಿಸದಿದ್ದಲ್ಲಿ ಈ ಕೆಳಗಿನ ಕ್ರಮ ಅನ್ವಯಿಸುತ್ತದೆ.

ಅಂತಹ ಸನ್ನಿವೇಶದಲ್ಲಿ ಸದರಿ ಕಾಮಗಾರಿಯನ್ನು ಪಟ್ಟಣ ಪಂಚಾಯಿತಿಯು ಸ್ವತಃ ಕಾರ್ಯಗತಗೊಳಿಸಿ ತನ್ನಿಮಿತ್ತ ತಗುಲಿದ ಖರ್ಚು ವೆಚ್ಚಗಳನ್ನು ಸಂಬಂಧಿತ ಮಾಲೀಕನಿಂದ ಅಥವಾ ಸ್ವಾಧೀನದಾರನಿಂದ ವಸೂಲು ಮಾಡಿಕೊಳ್ಳಬಹುದು. ಹಾಗೊಮ್ಮೆ ಸ್ವಾಧೀನದಾರ ಆ ಖರ್ಚು ವೆಚ್ಚಗಳನ್ನು ಭರಿಸದಿದ್ದರೆ ಅದನ್ನು ಅವನು ಬಾಡಿಗೆಗೆ ವಜಾವಟ್ಟು (ಸೆಟ್ ಆಫ್) ಮಾಡಿಕೊಳ್ಳಬಹುದು. (ಕಲಂ 193, 195, 196, 200, 264, 265 ಮತ್ತು ಅಧ್ಯಾಯ VII ಕ.ಮು.ಅ) ಇಂತಹ ಸಮಯದಲ್ಲಿ ಅವನು ಅಗತ್ಯಪಡಿಸಿರುವ ಕಾಮಗಾರಿ ಅನುಷ್ಠಾನಗೊಳಿಸುವ ತನ್ನ ಇಚ್ಛೆಯನ್ನು ಪ್ರಕಟಿಸಿ ಸ್ವಾಧೀನದಾರನಿಗೆ ನೋಟೀಸನ್ನು ನೀಡಬೇಕು. ಇದಕ್ಕೆ ಸ್ವಾಧೀನದಾರನು ಸ್ಪಂದಿಸದಿದ್ದಾಗ ಅವನ ವಿರುದ್ಧ ದಂಡಾಧಿಕಾರಿಗೆ (ಮ್ಯಾಜಿಸ್ಟ್ರೇಟ್) ಅರ್ಜಿ ಸಲ್ಲಿಸಿ, ಸೂಕ್ತ ಆದೇಶ ಕೋರಬಹುದು. ಒಂದು ವೇಳೆ ಸ್ವಾಧೀನದಾರನು ಆದೇಶವನ್ನು ಎಂಟು ದಿನಗಳ ಒಳಗಾಗಿ ಗೌರವಿಸದಿದ್ದಲ್ಲಿ ಅವನಿಗೆ 500.00 ರೂಪಾಯಿಗಳವರೆಗೆ ದಂಡ ಹಾಕಬಹುದು. ಹಾಗೆಯೇ, ಈ ನಡವಳಿಗೆ ಸಂಬಂಧಿಸಿದಂತೆ ತಗುಲಿದ ಎಲ್ಲಾ ಖರ್ಚು ವೆಚ್ಚಗಳನ್ನು ಮಾಲೀಕನಿಗೆ ಪಾವತಿಸುವಂತೆ ಅವನಿಗೆ ನ್ಯಾಯಾಲಯ ನಿರ್ದೇಶಿಸಬಹುದು. ಇಂತಹ

ಸನ್ನಿವೇಶದಲ್ಲಿ ಮಾಲೀಕನಿಂದ ಯಾವುದೇ ಉಲ್ಲಂಘನೆಯಾಗಿಲ್ಲವೆಂದು ಕಾನೂನು ತಿಳಿಯುವುದು. (ಕಲಂ 266 ಕ.ಮು.ಅ)

23) ಈ ಅಧಿನಿಯಮದ ಉದ್ದೇಶಗಳಿಗಾಗಿ ಮುಖ್ಯಾಧಿಕಾರಿ ಅಥವಾ ಮುನಿಸಿಪಲ್ ಕೌನ್ಸಿಲ್ ಅಧಿಕಾರ ನೀಡಿರುವ ಇತರ ಯಾವುದೇ ಅಧಿಕಾರಿ ಯಾವುದೇ ಕಟ್ಟಡ ಅಥವಾ ಖಾಲಿ ಸ್ಥಳವನ್ನು ಪ್ರವೇಶಿಸಿ ಪರಿಶೀಲಿಸುವ ಕುರಿತು.

ಸದರಿ ಕಟ್ಟಡ ಅಥವಾ ಖಾಲಿ ಸ್ಥಳದ ಸ್ವಾಧೀನದಾರರಿಗೆ 24 ಗಂಟೆಗಳ ನೋಟೀಸು ನೀಡಿ, ಅವರ ಸಮ್ಮತಿ ಪಡೆದು ಸೂರ್ಯೋದಯವಾದ ನಂತರ, ಆದರೆ ಸೂರ್ಯಾಸ್ತದೊಳಗಾಗಿ ಅವರು ಪ್ರವೇಶಿಸಿ ಪರಿಶೀಲಿಸಬಹುದು. ಈ ಸಮಯದಲ್ಲಿ ಸ್ವಾಧೀನದಾರರ ಸಾಮಾಜಿಕ ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ಗೌರವಿಸಿ ವ್ಯವಹರಿಸಬೇಕು. ಒಮ್ಮೆ ಅಲ್ಲಿ ಸ್ತ್ರೀಯರು ವಾಸಿಸುತ್ತಿದ್ದರೆ ಅಲ್ಲಿಂದ ಹೊರಬರಲು ಸೂಕ್ತ ಅವಕಾಶ ಒದಗಿಸಬೇಕು. (ಕಲಂ 267 ಕ.ಮು.ಅ)

24) ಸಾರ್ವಜನಿಕ ಆರೋಗ್ಯ, ಸುರಕ್ಷತೆ (ಶಿಥಿಲವಾದ ಅಥವಾ ಅಪಾಯಕಾರಿಯಾಗಿರುವ ಕಟ್ಟಡಗಳು) ಮತ್ತು ಅನುಕೂಲತೆಯ ಪ್ರವರ್ತನೆಗಾಗಿ ಅಧಿಕಾರಗಳು.

ಯಾವುದೇ ಕಟ್ಟಡ ವಾಸಿಸಲು ಅದರ ಬಳಿ ಹಾದು ಹೋಗಲು ಅಥವಾ ಅದು ನೆರೆಹೊರೆಯವರಿಗೆ ಅಪಾಯಕಾರಿಯೆಂದು ಕಂಡು ಬಂದಾಗ, ಅದರ ಮಾಲೀಕರಿಗೆ ನೋಟೀಸ್ ನೀಡಿ ಸದರಿ ಕಟ್ಟಡದ ಮುಂದೆ ಅಪಾಯಕಾರಿ ಕಟ್ಟಡವೆಂದು ಬೋರ್ಡ್ ಬರೆಸಿ ನಿಲ್ಲಿಸುವಂತೆ ಅಥವಾ ಅದರ ಸುತ್ತ ಮುತ್ತ ಬೇಲಿ ಹಾಕಿಸುವಂತೆ ಸೂಚಿಸಬಹುದು. ನೋಟೀಸ್ ನೀಡಿದ ಎರಡು ದಿನಗಳ ಒಳಗಾಗಿ ಮಾಲೀಕರು ಕ್ರಮ ಕೈಗೊಳ್ಳದಿದ್ದರೆ, ಪಟ್ಟಣ ಪಂಚಾಯತಿಯೇ ಸ್ವತಃ ಆ ಕೆಲಸವನ್ನು ಮಾಡಿಸಬಹುದು. ಅಂತೆಯೇ, ಸದರಿ ಕಟ್ಟಡ ತೀರಾ ಅಪಾಯಕಾರಿಯಾಗಿದ್ದರೆ ಅದನ್ನು ಉರುಳಿಸುವಂತೆ ಕೋರಿ ನೋಟೀಸ್ ನೀಡಬಹುದು. ಇವೆರಡು ಸಂದರ್ಭದಲ್ಲಿ ಭರಿಸಲಾಗಿರುವ ಖರ್ಚನ್ನು ಆ ಮಾಲೀಕರಿಂದ ತೆರಿಗೆ ರೂಪದಲ್ಲಿ ವಸೂಲು ಮಾಡಿಕೊಳ್ಳಬಹುದು. (ಕಲಂ 213 ಕ.ಮು.ಅ)

25) ಸಾರ್ವಜನಿಕ ರಸ್ತೆ, ಚರಂಡಿ ಮುಂತಾದವುಗಳನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿದಲ್ಲಿ ಅಥವಾ ಅಕ್ರಮವಾಗಿ ಪದಾರ್ಥ, ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಲ್ಲಿ ಕಲಂ 216ರಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಅಂತಹ ಸನ್ನಿವೇಶದಲ್ಲಿ 5000/– ರೂಪಾಯಿಗಳವರೆಗೆ ದಂಡ ವಿಧಿಸಬಹುದು ಹಾಗೂ ಅನಧಿಕೃತ ಅತಿಕ್ರಮಣ ಅಥವಾ ಅಡೆತಡೆಗಳನ್ನು ತೆಗೆದು ಹಾಕಿ, ಈ ನಿಮಿತ್ತ ತಗುಲಿದ ಖರ್ಚು ವೆಚ್ಚಗಳನ್ನು ಅವನಿಂದ ತೆರಿಗೆ ರೂಪದಲ್ಲಿ ವಸೂಲು ಮಾಡಬಹುದು. ಒಂದು ವೇಳೆ ಪ್ರಶ್ನಿತ ಸ್ಥಳ ಸರ್ಕಾರಕ್ಕೆ ಸೇರಿದ್ದರೆ ಕ್ರಮ ಜರುಗಿಸುವ ಮೊದಲು ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯಬೇಕು (ಕಲಂ 216 ಕ.ಮು.ಅ)

26) ಮುನಿಸಿಪಾಲಿಟಿಗೆ ಸೇರಿದ ಜಾಗದಿಂದ ಮಣ್ಣು ಮರಳು, ಇತರ ಪದಾರ್ಥಗಳನ್ನು ಅಕ್ರಮವಾಗಿ ತೆಗೆದರೆ ಕಲಂ 216ರಂತೆ ಕ್ರಮ ಕೈಗೊಳ್ಳಲಾಗುವುದು.

ಈ ತೆರನಾದ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ 5000/– ರೂಪಾಯಿಗಳವರೆಗೆ ದಂಡ ವಿಧಿಸಬಹುದು. ಒಮ್ಮೆ ಅತಿಕ್ರಮಣ ಮುಂದುವರೆದರೆ, ಲೋಪ ಸರಿಪಡಿಸವವರೆಗೆ, ದಿನನಿತ್ಯ ಹತ್ತು ರೂಪಾಯಿಗಳವರೆಗೆ ವಿಧಿಸಬಹುದು. (ಕಲಂ 216 ಕ.ಮು.ಅ)

27) ಈ ಕೆಳಗಿನ ನಿಯಮಗಳು ಅನ್ವಯಿಸುತ್ತದೆ.

1. ಕರ್ನಾಟಕ ಪುರಸಭೆ ಕಾಯ್ದೆ 1964 ಮತ್ತು ಸರಕಾರ ಈ ಸಂಬಂಧ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಎಲ್ಲಾ ಕಾಯ್ದೆಗಳು.
2. ಕರ್ನಾಟಕ ಪೌರಸಭೆಗಳ (ಮಾದರಿ) ಕಟ್ಟಡ ಉಪವಿಧಿ 2017 (ಸಂಖ್ಯೆ ಯು.ಡಿ.ಡಿ.14.ಟಿ.ಟಿ.ಪಿ–2017(ಪಿ4) ಬೆಂಗಳೂರು ದಿನಾಂಕ 28/10/2017) ಮತ್ತು ಈ ಸಂಬಂಧ ಸರಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳು, ಮಾರ್ಗಸೂಚಿಗಳು.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2004 ಹಾಗೂ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳು ಜಾರಿಗೆ ಬರುತ್ತವೆ ಮತ್ತು ಈ ಮೇಲಿನ ಎಲ್ಲವುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment **WPP No. 297**

"ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ಟ್ಯಾಂಕರ್ ವಾಹನ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡುವ ಸೇವಾದಾರರ ವಾರ್ಷಿಕ ಅನುಮತಿ ನೀಡುವಿಕೆ ಹಾಗೂ ನಿಯಂತ್ರಣ ಉಪವಿಧಿ"

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಟ್ಯಾಂಕರ್ ವಾಹನ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡುವ ಸೇವಾದಾರರು ಈ ನಿಯಮ ಜಾರಿಯಾದ ದಿನಾಂಕದಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ಪಡೆಯತಕ್ಕದ್ದು.

ಕ್ರ.ಸಂ	ವಿವರ	ನಿಗದಿಪಡಿಸಲಾದ ಶುಲ್ಕ(ರೂ.)
1	3000 ಲೀ ಟ್ಯಾಂಕರ್ ವಾಹನ	ವಾರ್ಷಿಕ ರೂ.3000/– ಪ್ರತಿ ವಾಹನಕ್ಕೆ
2	6000 ಲೀ ಟ್ಯಾಂಕರ್ ವಾಹನ	ವಾರ್ಷಿಕ ರೂ.4000/– ಪ್ರತಿ ವಾಹನಕ್ಕೆ
3	10000 ಲೀ ಟ್ಯಾಂಕರ್ ವಾಹನ	ವಾರ್ಷಿಕ ರೂ.35000/– ಪ್ರತಿ ವಾಹನಕ್ಕೆ
4	18000 ಲೀ ಟ್ಯಾಂಕರ್ ವಾಹನ	ವಾರ್ಷಿಕ ರೂ.36000/– ಪ್ರತಿ ವಾಹನಕ್ಕೆ

ಷರತ್ತುಗಳು:

1) ನೀರು ಸರಬರಾಜು ವಾಡಲು ಬಳಸುವ ವಾಹನವು ಸುಸ್ಥಿತಿಯಲ್ಲಿರತಕ್ಕದ್ದು.
2) ನೀರು ಸರಬರಾಜು ಕೈಗೊಳ್ಳಲು ಬಳಸುವ ನೀರಿನ ಮೂಲ ವಿವರ ಈ ಕಛೇರಿಗೆ ಸಲ್ಲಿಸತಕ್ಕದ್ದು.
3) ಕುಡಿಯುವ ನೀರಿನ ಗುಣಮಟ್ಟವನ್ನು ಸಾಪ್ತಾಹಿಕವಾಗಿ ಸರ್ಕಾರದಿಂದ ಅನುಮೋದಿಸಲಾದ ಪರೀಕ್ಷಾ ಕೇಂದ್ರದಿಂದ ವರದಿ ಪಡೆದು ಕಛೇರಿಗೆ ಸಲ್ಲಿಸತಕ್ಕದ್ದು.
4) ಸಾರ್ವಜನಿಕರಿಗೆ ಸರಬರಾಜು ಮಾಡುವ ನೀರಿನ ಗುಣಮಟ್ಟ ಹಾಗೂ ಸುರಕ್ಷತೆಗೆ ಮಾಲಕರೇ ಸಂಪೂರ್ಣವಾಗಿ ಜವಾಬ್ದಾರರಾಗಿರತಕ್ಕದ್ದು.
5) ಸೇವಾದಾರರು ಸರಬರಾಜು ಮಾಡಿದ ನೀರಿನಿಂದ ಸಾರ್ವಜನಿಕರಿಗೆ ಅನಾರೋಗ್ಯ ಸಾವು ನೋವು/ಕಷ್ಟ ನಷ್ಟ ಸಂಭವಿಸಿದಲ್ಲಿ, ಸೇವಾದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

ಅಧ್ಯಕ್ಷರು
ಕಿನ್ನಿಗೋಳಿ ಪಟ್ಟಣ ಪಂಚಾಯತ್

ಮುಖ್ಯಾಧಿಕಾರಿ
ಕಿನ್ನಿಗೋಳಿ ಪಟ್ಟಣ ಪಂಚಾಯತ್

PD-45

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA